ಪೊಲೀಸ್ ನ್ಯೂಸ್ ಪತ್ರಿಕೆಯ ಪ್ರೀತಿಯ ಕೊಡುಗೆ  8ನೇ ವರ್ಷದ ಹಾದಿಯಲ್ಲಿ...

# ಉದ್ಯೋಗ ಸ್ಫೂರ್ತಿ

**UDYOGA SPOORTHI**
Kannada Fortnightly
ಯಶಸ್ಸಿನ ಮೆಟ್ಟಿಲಿಗೊಂದು ದಿಟ್ಟ ಹೆಜ್ಜೆ...
ಪಾಕ್ಷಿಕ ಪತ್ರಿಕೆ

181ನೇ ಸಂಚಿಕೆ

Volume : 8  Issue : 1  BANGALORE  6-1-2017 to 20-1-2017  Pages: 16  ಬೆಲೆ: ₹ 10/-

## KSRTC

### ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

## 1196 ಸಹಾಯಕ ಸಿಬ್ಬಂದಿ, ಮೆಕ್ಯಾನಿಕ್ ಹುದ್ದೆಗಳು

**ಕರ್ನಾಟಕ ಪೊಲೀಸ್ ಇಲಾಖೆ**

## ಡಿಟೆಕ್ಟೀವ್ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳು

ವಿದ್ಯಾರ್ಹತೆ: ಕಾನೂನು ಪದವಿ / ಇಂಜಿನಿಯರ್

**ಗದಗ ಮೈಸೂರು**

## ಗ್ರಾಮಲೆಕ್ಕಾಧಿಕಾರಿ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಸಶಸ್ತ್ರ ಸೀಮಾಬಲ**

## 872 SI, ASI, HC ಹುದ್ದೆಗಳು

## UPSC ಗ್ರೂಪ್–ಎ ಹುದ್ದೆಗಳ ನೇಮಕಕ್ಕೆ ಅರ್ಜಿ ಕರೆ

## ತಾಂತ್ರಿಕೇತರ ಮಲ್ಟಿ ಟಾಸ್ಕಿಂಗ್ ಹುದ್ದೆಗಳು

## IOCL: ಜೂನಿಯರ್ ಇಂಜಿನಿಯರ್ ಹುದ್ದೆಗಳ ನೇಮಕಾತಿ

## MEG: 249 ವಿವಿಧ ಹುದ್ದೆಗಳು

## NLC: ಎಕ್ಸಿಕ್ಯುಟಿವ್ ಟ್ರೈನೀ ಹುದ್ದೆಗಳು

## ಹಡಗು ನಿರ್ಮಾಣ ಘಟಕಗಳಲ್ಲಿ 121 ಹುದ್ದೆಗಳು




# ಸಹನೆಯಲ್ಲಿ ಅದ್ಭುತ ಶಕ್ತಿ ಇದೆ

ಬದುಕಿನಲ್ಲಿ ಪ್ರೀತಿ, ಶಾಂತಿ ಮತ್ತು ನೆಮ್ಮದಿಯನ್ನು ಕಂಡುಕೊಳ್ಳಲು ಬೇಕಾದ ಅತಿಮುಖ್ಯ ಸಾಧನವೆಂದರೆ ಅದು 'ಸಹನೆ'. ನಾವು ಹೆಚ್ಚು ಸಹನಾಶೀಲರಾದಂತೆಲ್ಲ ಬದುಕಿನ ವಾಸ್ತವತೆಯ ಅರಿವಾಗುತ್ತದೆ. ಜೀವನದಲ್ಲಿ ಎಲ್ಲವೂ ನಾವೆಂದುಕೊಂಡಂತೆಯೇ ನಡೆಯಬೇಕು ಎನ್ನುವ ಭ್ರಮೆಯಿಂದ ಹೊರಬರುತ್ತೇವೆ. ಜೀವನ ನಮಗೆ ನೀಡುವ ಸವಾಲು ಮತ್ತು ಗಡುವುಗಳನ್ನು ಸ್ವೀಕರಿಸಿ ಅದನ್ನು ಸಮರ್ಥವಾಗಿ ಎದುರಿಸಬೇಕು ಎನ್ನುವ ಕಟು ಸತ್ಯ ಅರ್ಥವಾಗುತ್ತದೆ. ಸಹನೆಯಿಲ್ಲದ ಬದುಕು ನಿಜಕ್ಕೂ ಜಿಗುಪ್ಸೆಯನ್ನುಂಟು ಮಾಡುತ್ತದೆ.

ಸಹನೆ ಬದುಕನ್ನು ಅತ್ಯಂತ ಪ್ರೀತಿಯಿಂದ ಮತ್ತು ಧೈರ್ಯದಿಂದ ಎದುರಿಸುವ ಸಾಮರ್ಥ್ಯವನ್ನು ತಂದುಕೊಡುತ್ತದೆ. ಇದು ಅಂತರಂಗದ ವಿಕಾಸಕ್ಕೆ ದಾರಿದೀಪ. ಸಹನಾಶೀಲರಾಗುವುದೆಂದರೆ ತೆರೆದ ಹೃದಯದಿಂದ ವರ್ತಮಾನದ ವಾಸ್ತವತೆಯನ್ನು ಒಪ್ಪಿಕೊಳ್ಳುವುದು. ಅದು ನಿಮಗೆ ಇಷ್ಟವಾಗಿರಬಹುದು ಅಥವಾ ಇಲ್ಲದೆಯೇ ಇರಬಹುದು. ವಾಸ್ತವತೆ ಎಂದೆಂದಿಗೂ ಸತ್ಯ ಮತ್ತು ಪ್ರಸ್ತುತವಾದುದು. ನೀವು ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡಾಗ, ಯಾರೋ ನಿಮ್ಮನ್ನು ಭೇಟಿ ಮಾಡಲು ನಿಗದಿತ ಸಮಯಕ್ಕಿಂತ ತಡವಾಗಿ ಬಂದಾಗ, ಯಾರೋ ನಿಮ್ಮನ್ನು ಟೀಕೆ ಮಾಡಿದಾಗ, ಬಿಳಿಯ ಅಂಗಿ ತೊಟ್ಟು ಆಫೀಸಿಗೆ ಹೊರಟುನಿಂತಾದ ಮುದ್ದಿನ ಮಗಳು ಅಂಗಿಯ ಮೇಲೆ ಕಾಫಿ ಚೆಲ್ಲಿದಾಗ ಕೋಪಗೊಳ್ಳದೆ, ಮಾನಸಿಕ ಸ್ಥಿಮಿತ ಕಳೆದುಕೊಳ್ಳದೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಶಾಂತಚಿತ್ತರಾಗಿ ಸಮಸ್ಯೆಗೆ ಪರಿಹಾರ ಹುಡುಕುವ ಪ್ರವೃತ್ತಿಯೇ ಸಹನೆ. ಬದುಕಿನಲ್ಲಿ ವಿಭಿನ್ನ ಸಮಸ್ಯೆಗಳು ಎದುರಾಗುತ್ತವೆ. ಹಾಗಾದಾಗ ಇದೊಂದು ಸಣ್ಣ ವಿಚಾರ ಎಂಬುದನ್ನು ಮನಸ್ಸಿಗೆ ತಂದುಕೊಂಡರೆ ನೆಮ್ಮದಿ ದೊರೆಯುತ್ತದೆ.

ನಾವು ಮತ್ತೊಬ್ಬರಲ್ಲಿ ಕಾಣುವ ಮುಗ್ಧತೆ ಸಹನೆಯ ಮತ್ತೊಂದು ಮುಖ. ಅನೇಕ ಬಾರಿ ನಾನು ಯಾವುದೊ ದೀರ್ಘವಾದ ಆಲೋಚನೆಯಲ್ಲಿ ಮುಳುಗಿ ಲೇಖನವನ್ನು ಬರೆಯುತ್ತಿರುವಾಗ ನನ್ನ ನಾಲ್ಕು ವರ್ಷದ ಮುದ್ದು ಮಗಳು ಕೋಣೆಗೆ ಬಂದು ಕೆಲಸಕ್ಕೆ ಅಡ್ಡಿಪಡಿಸುತ್ತಾಳೆ. ನಿಜ! ಅಂತಹ ಸಂದರ್ಭದಲ್ಲಿ ನನ್ನ ಯೋಚನಾ ಲಹರಿ ಅಷ್ಟಕ್ಕೇ ನಿಂತು ಹೋಗುತ್ತದೆ. ಬರವಣಿಗೆಯ ಕೆಲಸ ಸ್ಥಗಿತಗೊಳ್ಳುತ್ತದೆ.

ಆಕೆಯಲ್ಲಿನ ಮುಗ್ಧತೆ ಮನಸ್ಸಿಗೆ ಬರುತ್ತದೆ. ಸಹಜವಾಗಿ ಸಹನೆ ಮೂಡುತ್ತದೆ. ಕೋಪ ಮತ್ತು ಅಸಂತೋಷಗಳು ತಕ್ಷಣವೇ ಮಾಯವಾಗುತ್ತದೆ. ನನ್ನ ಮಗಳು ನನ್ನನ್ನು ಅದೆಷ್ಟು ಪ್ರೀತಿಸುತ್ತಾಳೆ. ಇಂತಹ ಮುದ್ದಾದ ಮಗಳನ್ನು ಪಡೆದ ನಾನು ನಿಜಕ್ಕೂ ಸುದೈವಿ ಎಂದುಕೊಂಡು ಕೆಲನಿಮಿಷಗಳ ಕಾಲ ಮುದ್ದಾಡಿ ಬೀಳ್ಕೊಟ್ಟು ನಂತರ ಕೆಲಸವನ್ನು ಮುಂದುವರೆಸುತ್ತೇನೆ.

ಹೀಗೆ ಅನೇಕ ಸಂದರ್ಭಗಳಲ್ಲಿ ಜನರ ಮುಗ್ಧತೆ ಮತ್ತು ಅಸಂತೋಷಗಳೆರಡನ್ನೂ ನಾವು ಕಾಣಬಹುದು. ಆದರೆ ಸ್ವಲ್ಪ ಸಹನೆ ಮತ್ತು ತಾಳ್ಮೆಯಿಂದ ಪರಿಸ್ಥಿತಿಯನ್ನು ಗಮನಿಸಿದರೆ ಕೋಪ ಮತ್ತು ಬೇಸರಪಟ್ಟುಕೊಳ್ಳುವ ಅಗತ್ಯವಿರುವುದಿಲ್ಲ. ಹಾಗಾದಾಗ ಪ್ರತಿಯೊಂದು ಪರಿಸ್ಥಿತಿಯನ್ನು ಆನಂದದ ಕ್ಷಣಗಳಾಗಿ ಪರಿವರ್ತಿಸಬಹುದು.

**ಸಹನೆಯ ಕಲೆ ಸಹನೆಯಿಂದಲೇ ಕಲಿಯಬೇಕು**

'ಸಹನೆ' ಎನ್ನುವುದು ಒಂದು ಕಲೆ. ಅದನ್ನು ಹೆಚ್ಚೆಚ್ಚು ಮೈಗೂಡಿಸಿಕೊಂಡಂತೆಲ್ಲಾ ಬದುಕು ವಿಕಾಸಗೊಳ್ಳುತ್ತದೆ. ಸಹನೆಯನ್ನು ಹೆಚ್ಚಿಸಿಕೊಳ್ಳುವ ಉತ್ತಮ ವಿಧಾನವೆಂದರೆ ದಿನದಲ್ಲಿ ಒಂದಿಷ್ಟು ಸಮಯವನ್ನು ನಿಗದಿಪಡಿಸಿಕೊಂಡು ಸಹನೆ ಎಂಬ ಕಲೆಯನ್ನು ಅಭ್ಯಾಸ ಮಾಡುವುದು ಬದುಕೇ ನಮಗೆ ಸಹನೆಯ ಪಾಠ ಕಲಿಸುವ ಪಾಠಶಾಲೆ. ಸಹನೆಯೇ ಅಲ್ಲಿಯ ಪಠ್ಯ.

ಈ ವಿಚಾರದಲ್ಲಿ ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮೊದಲು ದಿನದಲ್ಲಿ ಕೇವಲ ಐದು ನಿಮಿಷ ಸಹನಾಶೀಲರಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಿ. ''ಮುಂದಿನ ಐದು ನಿಮಿಷ ನಾನು ಸಹನೆ ಕಳೆದುಕೊಳ್ಳುವುದಿಲ್ಲ'' ಎಂದು ನಿರ್ಧರಿಸಿ ಶೂನ್ಯತೆಯೆಡೆಗೆ ಜಾರಿಕೊಳ್ಳಿ. ನಿಮ್ಮಲ್ಲಾಗುವ ಬದಲಾವಣೆಯನ್ನು ಗಮನಿಸಿ. ಐದು ನಿಮಿಷ ಸಹನಾಶೀಲನಾಗಿರುತ್ತೇನೆ ಎಂಬ ನಿಮ್ಮ ಮನಸ್ಸಿನ ಭಾವನೆಯೇ ಸಹನಾ ಸಾಮರ್ಥ್ಯವನ್ನು ಇಮ್ಮಡಿಗೊಳಿಸುತ್ತದೆ. ಇದೇ ನಿಮ್ಮನ್ನು ಗೆಲುವಿನೆಡೆಗೆ ಕೊಂಡೊಯ್ಯುತ್ತದೆ. ಒಮ್ಮೆ ನೀವು ಐದು ನಿಮಿಷ ಯಶಸ್ವಿಯಾಗಿ ಸಹನೆಯಿಂದಿದ್ದರೆ, ಕ್ರಮೇಣ ಅದು ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸುತ್ತಾ ಹೋಗುತ್ತದೆ. ಅಂತಿಮವಾಗಿ ನೀವು ತಾಳ್ಮೆ ಮತ್ತು ಸಂಯಮ ಹೊಂದಿರುವ ವ್ಯಕ್ತಿಯಾಗಿ ಪರಿವರ್ತನೆಗೊಳ್ಳುವಿರಿ.

ನನ್ನ ಮಗಳು ನಾಲ್ಕು ವರ್ಷದ ತುಂಟ ಪೋರಿಯಾಗಿರುವುದರಿಂದ ಸಹನೆ ಎಂಬ ಕಲೆಯನ್ನು ಅಭ್ಯಾಸ ಮಾಡಲು ಮನೆಯೇ ನನಗೆ ಪಾಠಶಾಲೆಯಾಗಿದೆ.

ಉದಾಹರಣೆ: ಕೆಲವೊಮ್ಮೆ ನಾನು ಮುಖ್ಯವಾದ ದೂರವಾಣಿ ಕರೆ ಮಾಡಲು ಹೊರಟಾಗ ಮಗಳು ಅದಕ್ಕೆ ಅಡ್ಡಿಪಡಿಸುತ್ತಾಳೆ. ತಕ್ಷಣವೇ ಅವಳನ್ನು ಗದರುವ ಬದಲು ಇದು ತಾಳ್ಮೆಯನ್ನು ಕಾಯ್ದುಕೊಳ್ಳಬೇಕಾದ ಸಮಯ ಎಂದು ಮನಸ್ಸಿನಲ್ಲಿ ಅಂದುಕೊಂಡು ಮುಂದಿನ ಅರ್ಧಗಂಟೆ ಆದಷ್ಟು ತಾಳ್ಮೆಯಿಂದ ಇರುತ್ತೇನೆ.

ಈ ವಿಚಾರ ನನ್ನ ಮನಸ್ಸಿಗೆ ಬರುತ್ತಿದ್ದಂತೆಯೇ ಕೋಪ, ಅಸಹನೆ ಮಾಯವಾಗಿ ಪ್ರಶಾಂತತೆ ಆವರಿಸಿಬಿಡುತ್ತದೆ. ಹೀಗಾಗಿ ಎಂತಹ ಸಂಕಷ್ಟ ಸಂಕೀರ್ಣ ಸಂದರ್ಭಗಳೂ ನನಗೆ ''ಸಾವು-ಬದುಕಿನ'' ಸಮಸ್ಯೆ ಎನಿಸುವುದೇ ಇಲ್ಲ. ಎಂತಹ ಸಂದರ್ಭಗಳಲ್ಲೂ ಧೃತಿಗೆಡುವುದಿಲ್ಲ. ಚಿತ್ತವನ್ನು ಘಾಸಿ ಮಾಡಿಕೊಳ್ಳುವುದಿಲ್ಲ. ಮನಸ್ಸನ್ನು ದುಃಖದ ಮಡುವಿಗೆ ದೂಡುವುದಿಲ್ಲ. ರಕ್ತದ ಒತ್ತಡ ಏರುವುದಿಲ್ಲ.

ಹೀಗೆ, ನಾವು ಮಕ್ಕಳೊಂದಿಗೆ, ಮೇಲಾಧಿಕಾರಿಯೊಂದಿಗೆ, ಕಠಿಣ ಪರಿಸ್ಥಿತಿ ಮತ್ತು ಮನುಷ್ಯರೊಂದಿಗೆ ವ್ಯವಹರಿಸುವಾಗ ತಾಳ್ಮೆ ಮತ್ತು ಸಂಯಮವನ್ನು ಕಾಯ್ದುಕೊಂಡರೆ ಬದುಕು ಹಸನಾಗುವುದರಲ್ಲಿ ಸಂದೇಹವಿಲ್ಲ.

**-ಎಂ. ರಾಹುಲ್**
**ಸಂಪಾದಕ**

## ಅರ್ಜಿಗಳಿಗೆ ಆಹ್ವಾನ

| | ಹುದ್ದೆಯ ಹೆಸರು | ಆಹ್ವಾನಿಸಿದ ಇಲಾಖೆ/ಸಂಸ್ಥೆ | ಅರ್ಜಿ ಹಾಕುವ ಬಗೆ | ವಿವರ ಪುಟ |
|---|---|---|---|---|
| 1. | ಸಹಾಯಕ ಸಿಬ್ಬಂದಿ, ಮೆಕ್ಯಾನಿಕ್ ಹುದ್ದೆಗಳು | ಕೆಎಸ್‌ಆರ್‌ಟಿಸಿ | ಆನ್‌ಲೈನ್ | 3 |
| 2. | ಹಡಗು ನಿರ್ಮಾಣ ಘಟಕಗಳಲ್ಲಿ ಹುದ್ದೆಗಳು | ನೌಕಾದಳ | ಆನ್‌ಲೈನ್ | 3 |
| 3. | ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಳು | ಕರ್ನಾಟಕ ಪೊಲೀಸ್ ಇಲಾಖೆ | ಆನ್‌ಲೈನ್ | 4 |
| 4. | ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳು | ಕಂದಾಯ ಇಲಾಖೆ, ಗದಗ | ಆನ್‌ಲೈನ್ | 6 |
| 5. | ವಿವಿಧ ಹುದ್ದೆಗಳು | ಹೆಚ್‌ಕ್ಯೂ ಮದ್ರಾಸ್ ಇಂಜಿನಿಯರ್ ಗ್ರೂಪ್ | ಅಂಚೆ ಮೂಲಕ | 8 |
| 6. | ಸಂಶೋಧಕ ಹುದ್ದೆಗಳು | ಐಐಟಿ, ಮುಂಬಯಿ | ಆನ್‌ಲೈನ್ | 9 |
| 7. | ಗ್ರಾಮಲೆಕ್ಕಿಗರ ಹುದ್ದೆಗಳು | ಕಂದಾಯ ಇಲಾಖೆ, ಮೈಸೂರು | ಆನ್‌ಲೈನ್ | 10 |
| 8. | ಗ್ರೂಪ್-ಎ ಹುದ್ದೆಗಳು | ಯುಪಿಎಸ್‌ಸಿ | ಆನ್‌ಲೈನ್ | 12 |
| 9. | ವಿವಿಧ ಹುದ್ದೆಗಳು | ಎಎಸ್‌ಬಿ | ಅಂಚೆ ಮೂಲಕ | 12 |
| 10. | ಮಲ್ಟಿ ಟಾಸ್ಕಿಂಗ್ ಹುದ್ದೆಗಳು | ಎಸ್‌ಎಸ್‌ಸಿ | ಆನ್‌ಲೈನ್ | 13 |
| 11. | ಜೂನಿಯರ್ ಇಂಜಿನಿಯರಿಂಗ್ ಹುದ್ದೆಗಳು | ಐಒಸಿಎಲ್ | ಅಂಚೆ ಮೂಲಕ | 13 |
| 12. | ವಿವಿಧ ಹುದ್ದೆಗಳು | ಎಂಇಜಿ | ಅಂಚೆ ಮೂಲಕ | 15 |
| 13. | ಎಕ್ಸಿಕ್ಯುಟಿವ್ ಟ್ರೈನಿ ಹುದ್ದೆಗಳು | ಎನ್‌ಎಲ್‌ಸಿ | ಆನ್‌ಲೈನ್ | 15 |

**ಪತ್ರಿಕೆಯ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರಶ್ನೆಗಳಿದ್ದರೆ ಬೆಳಿಗ್ಗೆ 10ರಿಂದ ಸಂಜೆ 5ರ ಅವಧಿಯಲ್ಲಿ ಕರೆ ಮಾಡುವುದು.**


**ಫೋನ್: 080-23588510**

**ಮೊಬೈಲ್: 8971302735**

**ಕಚೇರಿಗೆ ಕಳುಹಿಸುವ ಪತ್ರಗಳನ್ನು ನೋಂದಣಿ / ರಿಜಿಸ್ಟರ್ಡ್ ಅಂಚೆ ಮೂಲಕ ಸ್ವೀಕರಿಸಲಾಗುವುದಿಲ್ಲ.**

## ವಿಶೇಷ ಸೂಚನೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳು ವಿಶ್ವಾಸಾರ್ಹವಾದರೂ ಅದರಲ್ಲಿನ ವಸ್ತು, ವಿಷಯ ಹಾಗೂ ಮಾಹಿತಿಗಳು ಜಾಹಿರಾತುದಾರರ ಅಭಿಪ್ರಾಯಗಳೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಆದುದರಿಂದ ಓದುಗರು ಜಾಹಿರಾತುದಾರರೊಂದಿಗೆ ಎಚ್ಚರಿಕೆಯಿಂದ ವ್ಯವಹರಿಸತಕ್ಕದ್ದು. ಜಾಹಿರಾತುದಾರರ ಪ್ರಾಮಾಣಿಕತೆಗೆ ಪತ್ರಿಕೆ ಜವಾಬ್ದಾರಿಯಲ್ಲ.


**IBPS-RRB**

ಬ್ಯಾಂಕ್‌ಗಳ ನೇಮಕಾತಿಯ ಪರಿಷ್ಕೃತ ಪಠ್ಯಕ್ರಮದ ಪ್ರಶ್ನೋತ್ತರಗಳ ಪುಸ್ತಕಗಳಿಗಾಗಿ ಸಂಪರ್ಕಿಸಿ. ಫೋನಲ್ಲೂ ಆರ್ಡರ್ ಮಾಡಬಹುದು. ಮೊ: 9686113611


## 206 ಹುದ್ದೆಗಳ ಭರ್ತಿಗೆ ಕ್ರಮ: ಸಚಿವ ರುದ್ರಪ್ಪಲಮಾಣಿ

ಮುಜರಾಯಿ ಇಲಾಖೆಯಲ್ಲಿ ಖಾಲಿ ಇರುವ 206 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿದ್ದು, ಮುಂದಿನ ಎರಡು ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯಲಿದೆ ಎಂದು ಮುಜರಾಯಿ ಹಾಗೂ ಜವಳಿ ಖಾತೆ ಸಚಿವ ರುದ್ರಪ್ಪಲಮಾಣಿ ಇತ್ತೀಚೆಗೆ ತಿಳಿಸಿದರು.

ಒಟ್ಟು 360 ಸಿಬ್ಬಂದಿ ಪೈಕಿ 154 ಹುದ್ದೆಗಳು ಮತ್ರ ಭರ್ತಿಯಾಗಿವೆ.

ಇತರ ಇಲಾಖೆಗಳಲಿರುವ ಮುಜರಾಯಿ ಇಲಾಖೆ ಹೆಚ್ಚುವರಿ ಸಿಬ್ಬಂದಿಯನ್ನು ಇಲಾಖೆಗೆ ಮರು ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಇಲಾಖೆಯಲ್ಲಿ ಎಂಜಿನಿಯರಿಂಗ್ ವಿಭಾಗವನ್ನು ಪ್ರತ್ಯೇಕವಾಗಿ ತೆರೆಯುವ ಕುರಿತು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

# ಸಹಾಯಕ ಸಿಬ್ಬಂದಿ, ಚಾಲಕರು, ಮೆಕ್ಯಾನಿಕ್ ಹುದ್ದೆಗಳಿಗೆ ಅರ್ಜಿ ಕರೆ

2017ರ ನೇಮಕಾತಿ ಅಧಿಸೂಚನೆ ನಂ. 1/2017 ದಿನಾಂಕ: 6-11-2017ರ ಪ್ರಕಾರ ಉದ್ಯೋಗಾಕಾಂಕ್ಷಿಗಳು ಸಂಸ್ಥೆಗೆ ಅರ್ಜಿ ಸಲ್ಲಿಸಿ ನೌಕರಿ ಪಡೆಯಲು ಅರ್ಹ ಹಾಗೂ ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು ದಿನಾಂಕ: 14-01-2017 ರಿಂದ 04-02-2017ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೇಮಕಾತಿ 2017-18. ಹುದ್ದೆಗಳ ವಿವರ ಹೀಗಿದೆ.

**ನಾನ್‌ಸೂಪರ್‌ವೈಸರಿ ಹುದ್ದೆಗಳು - 274**

| ಕ್ರ.ಸಂ. | ಹುದ್ದೆ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಅಸಿಸ್ಟೆಂಟ್ ಅಕೌಂಟೆಂಟ್ | 71 |
| 2. | ಅಸಿಸ್ಟೆಂಟ್ ಟ್ರಾಫಿಕ್ ಇನ್ಸ್‌ಪೆಕ್ಟರ್ | 128 |
| 3. | ಅಸಿಸ್ಟೆಂಟ್ ಸ್ಟೋರ್ ಕೀಪರ್ | 34 |
| 4. | ಸ್ಟಾಟಿಸ್ಟಿಕಲ್ ಅಸಿಸ್ಟೆಂಟ್ | 41 |
| | ಒಟ್ಟು | 274 |

**ಮೆಕ್ಯಾನಿಕಲ್ ಹುದ್ದೆಗಳು - 840**

| ಕ್ರ.ಸಂ. | ಹುದ್ದೆ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಆರ್ಟಿಸನ್ ಆಟೋಮೆಕ್ಯಾನಿಕ್ | 160 |
| 2. | ಆಟೋ ವೆಲ್ಡರ್ | 15 |
| 3. | ಆಟೋ ಬಾಡಿ ಬಿಲ್ಡರ್ | 44 |
| 4. | ಆಟೋ ಪೇಯಿಂಟರ್ | 04 |
| 5. | ಆಟೋ ಮೆಕ್ಯಾನಿಸ್ಟ್ | 01 |
| 6. | ಆಟೋ ಎಲೆಕ್ಟ್ರಿಷಿಯನ್ | 60 |
| 7. | ಟೆಕ್ನಿಕಲ್ ಅಸಿಸ್ಟೆಂಟ್ | 556 |
| | ಒಟ್ಟು | 840 |

**ಕೆಎಸ್‌ಆರ್‌ಟಿಸಿ ಗ್ರೇಡ್-3 ನೇಮಕಾತಿ ಹುದ್ದೆಗಳು**

- **ವಯೋಮಿತಿ:** ಕನಿಷ್ಠ - 18 ವರ್ಷಗಳು, ಗರಿಷ್ಠ - 35 ವರ್ಷಗಳು. ಅರ್ಹತೆ ಹಾಗೂ ಜಾತಿ ಮೀಸಲಾತಿಯವರಿಗೆ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
- **ಆಯ್ಕೆ ವಿಧಾನ:** ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ. ಅರ್ಜಿ ಶುಲ್ಕ ಪಾವತಿಗೆ, ಅರ್ಜಿಸಲು ಆರಂಭ ಹಾಗೂ ಅಂತ್ಯದ ದಿನಾಂಕಗಳನ್ನು ಅಧಿಕೃತವಾಗಿ ನಂತರ ತಿಳಿಸಲಾಗುವುದು.
- **ಅರ್ಜಿ ಶುಲ್ಕ :** ಜನರಲ್ ಕೆಟಗರಿಗೆ - 400/- ರೂ.ಗಳು. ಮೀಸಲಾತಿಯವರಿಗೆ - 200/- ರೂ.ಗಳು.
- **ಅರ್ಜಿ ಸಲ್ಲಿಸುವ ವಿಧಾನ:** ಅರ್ಜಿ ಸಲ್ಲಿಸುವ ಮುನ್ನ ಜಾಲತಾಣದಲ್ಲಿರುವ ಅಧಿಸೂಚನೆಯಲ್ಲಿನ ನಿಬಂಧನೆ, ವಿವರಗಳನ್ನು ಎಚ್ಚರಿಕೆಯಿಂದ ಓದಿಕೊಂಡು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ತಪ್ಪಿಲ್ಲದೆ ಅರ್ಜಿ ತುಂಬಿ ಮಾದರಿ ಸಹಿ ಹಾಗೂ ಭಾವಚಿತ್ರಗಳನ್ನು ಆಯಾ ಸ್ಥಳಗಳಲ್ಲಿ ಅಪ್‌ಲೋಡ್ ಮಾಡಿ, ಅರ್ಜಿಯನ್ನು ಪೂರ್ಣ ತುಂಬಿ ಸಬ್‌ಮಿಟ್ ಬಟನ್‌ಅನ್ನು ಒತ್ತಿ ಆನಂತರ ತುಂಬಿದ ಅರ್ಜಿಯ ಒಂದು ಪ್ರತಿಯನ್ನು ಪ್ರಿಂಟ್‌ಔಟ್ ತೆಗೆದಿರಿಸಿಕೊಳ್ಳಬೇಕು.

ಈಗಾಗಲೇ ಸಂಸ್ಥೆಯಲ್ಲಿ ಸೇವೆಯಲ್ಲಿರುವವರಿಗೆ ಹುದ್ದೆಗಳು

ಈಗಾಗಲೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸೇವೆಯಲ್ಲಿರುವವರು ಈ ಕೆಳಗಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಇವರು 30-1-2017 ರಿಂದ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ವಿವರ ಹೀಗಿದೆ.

| ಕ್ರ.ಸಂ. | ಹುದ್ದೆ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಎಸ್ಟಾಬ್ಲಿಷ್‌ಮೆಂಟ್ ಸೂಪರ್‌ವೈಸರ್ | 08 |
| 2. | ಅಕೌಂಟ್ಸ್ ಸೂಪರ್ ವೈಸರ್ | 06 |
| 3. | ಸ್ಟೋರ್ ಕೀಪರ್ | 02 |
| 4. | ಟ್ರಾಫಿಕ್ ಇನ್ಸ್‌ಪೆಕ್ಟರ್ | 39 |
| 5. | ಛಾರ್ಜ್‌ಮ್ಯಾನ್ | 23 |
| 6. | ಡಿವಿಜನಲ್ ಸೆಕ್ಯುರಿಟಿ ಇನ್ಸ್‌ಪೆಕ್ಟರ್ | 02 |
| 7. | ಸ್ಟಾಟಿಸ್ಟಿಕಲ್ ಸೂಪರ್‌ವೈಸರ್ | 02 |
| 8. | ಎಸ್ಟಾಬ್ಲಿಷ್‌ಮೆಂಟ್ ಸೂಪರ್‌ವೈಸರ್ | 01 |
| | ಒಟ್ಟು | 83 |

ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ಅರ್ಜಿ ಸಲ್ಲಿಸುವ ಕೊನೇ ದಿನಾಂಕ ಇತ್ಯಾದಿ ಅಧಿಕೃತ ಮಾಹಿತಿಗಳನ್ನು ಅತಿ ಶ್ರೀಘ್ರವಾಗಿ ತಿಳಿಸಲಾಗುವುದು. ಈಗ ಲಭ್ಯವಾಗಿರುವ ಮಾಹಿತಿ ಪ್ರಕಾರ ದಿನಾಂಕಗಳು ಹೀಗಿವೆ.

- **ನಾನ್‌ಸೂಪರ್ ವೈಸರಿ ಹಾಗೂ ಮೆಕಾನಿಕ್ ಹುದ್ದೆಗಳಿಗೆ:**
  ಅರ್ಜಿ ಸಲ್ಲಿಸಲು ಆರಂಭದ ದಿನಾಂಕ : 14-01-2017
  ಕೊನೇ ದಿನಾಂಕ : 04-02-2017.
  ಸೇವಾ ನಿರತರು ಅರ್ಜಿ ಸಲ್ಲಿಸಲು ಆರಂಭದ ದಿನಾಂಕ: 30-01-2017

ಕೊನೆ ದಿನಾಂಕವನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸಲಾಗುವುದು. ಅರ್ಜಿ ಸಲ್ಲಿಸಬಯಸುವವರು ಪೂರ್ವಸಿದ್ಧತೆ ಮಾಡಿಕೊಂಡಿದ್ದು ದಿನಾಂಕ 14-01-2017 ಹಾಗೂ 30-01-2017ರ ನಂತರವೇ ಅರ್ಜಿ ತುಂಬಲು ಮುಂದಾಗಬೇಕು. ಅಧಿಕೃತ ಅಧಿಸೂಚನೆಗೆ ಮುಂಚಿತವಾಗಿಯೇ ಅರ್ಜಿ ತುಂಬಬಾರದು. ಅದುವರೆವಿಗೂ ಕೆಳಗಿನ ಜಾಲತಾಣಗಳನ್ನು ಪರಿಶೀಲಿಸುತ್ತಿರಬೇಕು.

ಜಾಲತಾಣ: www.ksrtc.in or www.ksrtcl.online-apl.com


**ನೇರ ಸಂದರ್ಶನ**

ನಿರುದ್ಯೋಗಿಗಳಿಗೊಂದು ಸಿಹಿಸುದ್ದಿ, ಸರ್ಕಾರದಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ BMPL Companyಯಲ್ಲಿ ಕನ್ನಡ ಬಲ್ಲ S.S.L.C. ಮೇಲ್ಪಟ್ಟ 950 ಗ್ರಾಮೀಣ ಹಾಗೂ ನಗರ ಅಭ್ಯರ್ಥಿಗಳಿಗೆ ಬಂದ ದಿನವೇ ನೇರ ಸಂದರ್ಶನ.

ಉಚಿತ ಊಟ, ವಸತಿಯೊಂದಿಗೆ

ರೂ. 19,500/- ರಿಂದ ರೂ. 34,000/-ದವರೆಗೆ

9066414247 ಸಂಧ್ಯಾ
8050559441

(ಜಾಹೀರಾತು)


## ನೌಕಾದಳದ ಹಡಗು ನಿರ್ಮಾಣ ಘಟಕಗಳಲ್ಲಿ ಹುದ್ದೆಗಳ ನೇಮಕಾತಿ

ಮುಂಬೈ ಮತ್ತು ಕಾರವಾರದಲ್ಲಿರುವ ಭಾರತೀಯ ನೌಕಾದಳದ ಹಡಗು ನಿರ್ಮಾಣ ಘಟಕಗಳಲ್ಲಿ ಕಾರ್ಯ ನಿರ್ವಹಿಸಲು ಚಾರ್ಜ್‌ಮನ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬಿ.ಎಸ್ಸಿ./ಇಂಜಿನಿಯರಿಂಗ್ ಡಿಪ್ಲೊಮಾ ಪೂರೈಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- **ಹುದ್ದೆಯ ಹೆಸರು : ಚಾರ್ಜ್‌ಮನ್**
- **ಒಟ್ಟು ಹುದ್ದೆಗಳು : 121**
- **ವಿಭಾಗಗಳ ವಿಂಗಡಣೆ:**
  - ಇಂಜಿನಿಯರಿಂಗ್ - 33
  - ಎಲೆಕ್ಟ್ರಿಕಲ್ - 14
  - ವೆಪನ್ - 8
  - ಕನ್‌ಸ್ಟ್ರಕ್ಷನ್ - 24
  - ಮೈಂಟೆನೆನ್ಸ್ - 10
  - ಪ್ರೊಡಕ್ಷನ್/ಪ್ಲಾನಿಂಗ್ ಆ್ಯಂಡ್ ಕಂಟ್ರೋಲ್ - 32
- **ವೇತನ:** ರೂ. 9,300-34,800+ಗ್ರೇಡ್ ಪೇ 4,200
- **ವಯೋಮಿತಿ:** ಕನಿಷ್ಠ 20 ರಿಂದ ಗರಿಷ್ಠ 25 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಕೆ ಇದೆ.
- **ವಿದ್ಯಾರ್ಹತೆ:** ಅಂಗೀಕೃತ ವಿಶ್ವವಿದ್ಯಾಲಯದಿಂದ ಗಣಿತ/ಭೌತಶಾಸ್ತ್ರ/ರಸಾಯನಶಾಸ್ತ್ರ ವಿಷಯದಲ್ಲಿ ವಿಜ್ಞಾನ ಪದವಿ ಅಥವಾ ಸಂಬಂಧಿಸಿದ ವಿಷಯದಲ್ಲಿ ಇಂಜಿನಿಯರಿಂಗ್ ಡಿಪ್ಲೊಮಾ ಪೂರೈಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅಭ್ಯರ್ಥಿಗಳು ತಮ್ಮ ರುಜು ಮತ್ತು ಇತ್ತೀಚಿನ ಭಾವಚಿತ್ರವನ್ನು ಅಪ್‌ಲೋಡ್ ಮಾಡಬೇಕು. ಸಂವಹನಕ್ಕೆ ಅನುಕೂಲವಾಗುವಂತೆ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಇ-ಮೇಲ್ ವಿಳಾಸವನ್ನು ಹೊಂದಿರಬೇಕು.
- **ನೇಮಕಾತಿ ವಿಧಾನ:** ಸಲ್ಲಿಸಲಾದ ಅರ್ಜಿಗಳನ್ನು ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಮೊದಲ ಹಂತದಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯ.
- **ಅರ್ಜಿ ಸಲ್ಲಿಸಲು ಕೊನೆಯ ದಿನ: 15-1-2017.**
- **ವೆಬ್‌ಸೈಟ್: www.jobsuchi.com**

## ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆ; ನಕಲಿ ಪಿಎಚ್‌ಡಿ: 40 ಅಭ್ಯರ್ಥಿಗಳ ಆಯ್ಕೆ ರದ್ದು

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ (24 ವಿಷಯಗಳ 2160 ಹುದ್ದೆ) ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೋಮವಾರ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ನಕಲಿ ಶೈಕ್ಷಣಿಕ ದಾಖಲೆ ಸಲ್ಲಿಸಿದ್ದ 40 ಅಭ್ಯರ್ಥಿಗಳ ಆಯ್ಕೆ ರದ್ದು ಮಾಡಲಾಗಿದೆ.

ಈ ಅಭ್ಯರ್ಥಿಗಳು ಸಲ್ಲಿಸಿದ್ದ ಪಿಎಚ್‌ಡಿ ಪದವಿ ಪ್ರಮಾಣ ಪತ್ರ ನಕಲಿ ಎಂಬುದೇ ಅವರ ಅಭ್ಯರ್ಥಿತನ ರದ್ದಾಗಲು ಪ್ರಮುಖ ಕಾರಣ.

ಇವರಲ್ಲಿ ಇಂಗ್ಲಿಷ್ ವಿಷಯದ 25, ವಾಣಿಜ್ಯ ವಿಷಯದ ಏಳು, ಕಂಪ್ಯೂಟರ್ ಸೈನ್ಸ್‌ನ ಆರು, ಗಣಿತ ಮತ್ತು ರಾಜ್ಯಶಾಸ್ತ್ರ ವಿಷಯಗಳ ತಲಾ ಒಬ್ಬರು ಸೇರಿದ್ದಾರೆ.

ಹೊರ ರಾಜ್ಯದ ವಿ.ವಿ.ಗಳ ಪಿಎಚ್‌ಡಿ: ಈ ಅಭ್ಯರ್ಥಿಗಳು ಸಲ್ಲಿಸಿದ್ದ ಪಿಎಚ್‌ಡಿ ಪ್ರಮಾಣ ಪತ್ರಗಳು ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳದ್ದಾಗಿದ್ದವು.

ಸರ್ಕಾರಿ ಆದೇಶದ (ಇಡಿ/398/ಯುಆರ್‌ಸಿ2014 ದಿನಾಂಕ 14/102014) ಪ್ರಕಾರ ರಾಜ್ಯದ ಹೊರಗಿನ ವಿ.ವಿ.ಗಳ ಪಿಎಚ್‌ಡಿ ಪದವಿಗಳ ನೈಜತೆಯನ್ನು ಕೆಇಎ ಪರಿಶೀಲನೆಗೆ ಒಳಪಡಿಸಿತ್ತು.

'ಪರಿಶೀಲನಾ ವರದಿಯಲ್ಲಿ ಈ ಅಭ್ಯರ್ಥಿಗಳ ಪಿಎಚ್.ಡಿ. ನೈಜತೆಯಿಂದ ಕೂಡಿಲ್ಲ ಎಂದು ಉಲ್ಲೇಖವಾಗಿದೆ. ಹಾಗಾಗಿ ಅವರ ಅಭ್ಯರ್ಥಿತನವನ್ನು ರದ್ದುಗೊಳಿಸಿ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ' ಎಂದು ಕೆಇಎ ಆಡಳಿತಾಧಿಕಾರಿ ಗಂಗಾಧರಯ್ಯ ಇತ್ತೀಚೆಗೆ ಸುದ್ದಿಗಾರರಿಗೆ ತಿಳಿಸಿದರು.

'ನಕಲಿ ಶೈಕ್ಷಣಿಕ ದಾಖಲೆಗಳನ್ನು ಸಲ್ಲಿಸಿ ನೇಮಕ ಹೊಂದಲು ಮುಂದಾಗಿದ್ದ ಈ ಅಭ್ಯರ್ಥಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರಾಧಿಕಾರವು ಸರ್ಕಾರಕ್ಕೆ ಪತ್ರ ಬರೆಯಲಿದೆ' ಎಂದು ಅವರು ಮಾಹಿತಿ ನೀಡಿದರು.

## ಕರ್ನಾಟಕ ಪೊಲೀಸ್ ಇಲಾಖೆ

# ಡಿಟೆಕ್ಟೀವ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ

ಅರ್ಜಿಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿ ಆನ್-ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

**ವಿಶೇಷ ಸೂಚನೆ:**

ಎ) ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ/ಅಂಶಗಳು / ಮೀಸಲಾತಿಗಳನ್ನು ಆಧರಿಸಿ ನೇಮಕಾತಿ ಪ್ರಕ್ರಿಯೆಗೆ ಅವಕಾಶ ಕಲ್ಪಿಸುವುದರಿಂದ ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಮಾಹಿತಿ / ಅಂಶ ಮೀಸಲಾತಿಯ ಬದಲಾವಣೆ ಕೋರಿ ಸಲ್ಲಿಸುವ ಮನವಿಯನ್ನು ಪರಿಗಣಿಸಲಾಗುವುದಿಲ್ಲ, ಆದ್ದರಿಂದ ಯಾವುದೇ ತಪ್ಪು / ಸುಳ್ಳು ಮಾಹಿತಿ ನೀಡದೆ ಸರಿಯಾದ ಮಾಹಿತಿ ನೀಡಿ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸತಕ್ಕದ್ದು.

■ **ಶುಲ್ಕ:**

| | |
|---|---|
| ಸಾಮಾನ್ಯ ವರ್ಗ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | ರೂ. 250/- |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ. 100/- |

ಎ) ನಿಗದಿತ ಶುಲ್ಕವನ್ನು ಎಸ್‌ಬಿಎಂ/ಎಸ್‌ಬಿಹೆಚ್ ಬ್ಯಾಂಕಿನ ಯಾವುದಾದರೂ ಶಾಖೆಗಳಲ್ಲಿ ಬ್ಯಾಂಕಿನ ವೇಳೆಯಲ್ಲಿ ಚಲನ್ ನೀಡಿ ಹಣ ಪಾವತಿಸಬಹುದು.

ಬಿ) ಇಲಾಖೆಯ ಅಧಿಕೃತ ವೆಬ್‌ಸೈಟ್: www.ksp.gov.inನಲ್ಲಿ ನೀಡಲಾಗಿರುವ ಸೂಚನೆಗಳನ್ನು ಓದಿಕೊಂಡು ಯಾವುದೇ ತಪ್ಪು ಮಾಹಿತಿ ನೀಡದೆ ಆನ್-ಲೈನ್‌ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

**ಟಿಪ್ಪಣಿ:** ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ನೇಮಕಾತಿ ಸಮಿತಿಯು ನಡೆಸುವ ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ, ಮೇಲಿನ ಕಾಲಂಗಳಲ್ಲಿ ನಮೂದಿಸಿದಂತೆ ಅಭ್ಯರ್ಥಿಗೆ ಅನ್ವಯಿಸುವ ಒಟ್ಟು ಪರೀಕ್ಷಾ ಶುಲ್ಕವನ್ನು ನಗದು ರೂಪದಲ್ಲಿ ಚಲನ್‌ನೊಂದಿಗೆ ಮಾತ್ರ ಮೇಲೆ ನಮೂದಿಸಿರುವ ಬ್ಯಾಂಕ್‌ಗಳಲ್ಲಿ ಪಾವತಿಸತಕ್ಕದ್ದು. ಡಿಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.

■ **ಆನ್-ಲೈನ್ (On-line) ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ವಿಧಾನ:**

ಅರ್ಜಿದಾರ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿ ನೀಡಲಾಗಿರುವ ಮಾಹಿತಿಸೂಚಿ / ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡು ಭರ್ತಿ ಮಾಡಬೇಕು. ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿನ Current Recruitment ನಲ್ಲಿ ನೀಡಲಾಗಿರುವ ಸೂಚನೆಗಳನ್ನು ಓದಿಕೊಂಡು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಆನ್-ಲೈನ್‌ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನಿನನ್ವಯ ನೇಮಕಾತಿ ಸಮಿತಿಯು ಸೂಕ್ತ ಕ್ರಮ ಕೈಗೊಳ್ಳುವುದು. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅರ್ಜಿದಾರ ಒಂದು ಬಿಳಿ ಹಾಳೆಯ ಮೇಲೆ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರ, ಸಹಿ ಮತ್ತು ಅಧಿಸೂಚನೆಯ ಕ್ರಮ ಸಂಖ್ಯೆ 8(ಸಿ)ರಲ್ಲಿ ನಮೂದಿಸಲಾಗಿರುವ ಯಾವುದಾದರು ಗುರುತಿನ ಚೀಟಿಯನ್ನು ಪ್ರತ್ಯೇಕವಾಗಿ (Soft Copy - less than 250 KB) ಸ್ಕ್ಯಾನ್ ಮಾಡಿಟ್ಟುಕೊಂಡಿರಬೇಕು. ನಂತರ ಅರ್ಜಿದಾರನ ಹೆಸರು, ಜಾತಿ, ಪ್ರವರ್ಗ, ಮೀಸಲಾತಿಗಳ ವಿವರ, ಹುಟ್ಟಿದ ದಿನಾಂಕ, ವಿದ್ಯಾರ್ಹತೆ ಮತ್ತು ಇತ್ಯಾದಿ ವಿವರಗಳನ್ನು ಭರ್ತಿ ಮಾಡಿ ಕೊನೆಯದಾಗಿ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ, ಸಹಿ ಮತ್ತು ಗುರುತಿನ ಚೀಟಿಯನ್ನು ಕಂಪ್ಯೂಟರ್ ಮುಖೇನ ಅಪ್‌ಲೋಡ್ (Upload) ಮಾಡಬೇಕು. ಇಲ್ಲವಾದಲ್ಲಿ ಅಂತಹ ಅರ್ಜಿದಾರರು ಆನ್‌ಲೈನ್‌ನಲ್ಲಿ ಅರ್ಜಿಯನ್ನು ತುಂಬಿ ಮುಂದುವರೆಯಲು ಸಾಧ್ಯವಾಗುವುದಿಲ್ಲ, ಅರ್ಜಿದಾರ ನೀಡಿರುವ ವಿವರಗಳು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿದ್ದಲ್ಲಿ ಮಾತ್ರ ಚಲನ್ ಮುದ್ರಿಸಬಹುದು. ಚಲನ್ ಮುದ್ರಿಸಲು ಜನರೇಟ್ ಚಲನ್ ಬಟನ್ ಮೇಲೆ ಕ್ಲಿಕ್ ಮಾಡಿದಾಗ ತ್ರಿಪ್ರತಿ (Triplicate) ಬ್ಯಾಂಕ್ ಚಲನ್ ಸೃಜನೆಯಾಗುತ್ತದೆ. ಆ ಚಲನ್‌ನಲ್ಲಿ ಅರ್ಜಿಯ ಸಂಖ್ಯೆಯೊಂದಿಗೆ, ಆಯ್ಕೆ ಮಾಡಿರುವ ಘಟಕ, ನಿಮ್ಮ ಭಾವಚಿತ್ರ, ಪ್ರವರ್ಗ, ಮೀಸಲಾತಿಗಳ ವಿವರ ಮತ್ತು ಪಾವತಿಸಬೇಕಾಗಿರುವ ನಿಗದಿತ ಶುಲ್ಕಗಳ ವಿವರಗಳು ಇರುತ್ತವೆ. ಆ ಚಲನ್ ಪ್ರತಿಯನ್ನು ಮುದ್ರಿಸಿ/ಪ್ರಿಂಟ್ ಮಾಡಿಕೊಳ್ಳತಕ್ಕದ್ದು.

ನಂತರ ಅರ್ಜಿದಾರ ಮುದ್ರಿಸಿಕೊಳ್ಳಲಾದ ಚಲನ್‌ನಲ್ಲಿ ನಮೂದಾಗಿರುವ ಒಟ್ಟು ಶುಲ್ಕವನ್ನು ನಗದು ರೂಪದಲ್ಲಿಯೇ ಎಸ್.ಬಿ.ಎಂ ಅಥವಾ ಎಸ್.ಬಿ.ಹೆಚ್.ನ ಅಧಿಕೃತ ಬ್ಯಾಂಕ್ ಶಾಖೆಗಳಲ್ಲಿ ಪಾವತಿಸಬೇಕು. ಶುಲ್ಕ ಪಾವತಿಸಿದ ನಂತರ ಚಲನ್‌ನ ಅಭ್ಯರ್ಥಿ ಪ್ರತಿಯನ್ನು ಇಟ್ಟುಕೊಂಡಿರತಕ್ಕದು.

ಅಭ್ಯರ್ಥಿಯು ಶುಲ್ಕ ಪಾವತಿಸಿದ ಎರಡು ದಿನಗಳ ನಂತರ ಪುನಃ ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿ My Applicationನ್ನು ಕ್ಲಿಕ್ ಮಾಡಿ, ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿದ ನಂತರ ಅರ್ಜಿ ತೆರೆಯುತ್ತದೆ ಹಾಗೂ ಅಭ್ಯರ್ಥಿಯು ಭರ್ತಿ ಮಾಡಿರುವ ಎಲ್ಲಾ ವಿವರಗಳನ್ನು ಒಳಗೊಂಡಂತೆ ಅರ್ಜಿಯು ಸೃಜನೆಯಾಗುತ್ತದೆ, ಸದರಿ ಅರ್ಜಿಯ ಪ್ರತಿಯನ್ನು ಪ್ರಿಂಟ್ ಮಾಡಿಟ್ಟುಕೊಳ್ಳತಕ್ಕದ್ದು. ಅರ್ಜಿ ಪ್ರತಿ ಮತ್ತು ಅರ್ಜಿ ಸಂಖ್ಯೆಯು ಮುಂದಿನ ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಿಗೆ ಅವಶ್ಯಕವಾಗಿರುತ್ತದೆ.

■ **ಪ್ರಮುಖ ದಿನಾಂಕಗಳ ಮಾಹಿತಿ:**

- ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 04.01.2017 ಬೆಳಿಗ್ಗೆ 10.00 ಗಂಟೆಗೆ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.01.2017, ಸಂಜೆ 06.00 ಗಂಟೆಗೆ
- ಶುಲ್ಕವನ್ನು ಅಧಿಕೃತ ಬ್ಯಾಂಕ್ ಕಛೇರಿ ವೇಳೆಯಲ್ಲಿ ಪಾವತಿಸಲು ಕೊನೆಯ ದಿನಾಂಕ: 28.01.2017.

**ಸೂಚನೆ:**

❖ ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ಭರ್ತಿ ಮಾಡಿ ಸಲ್ಲಿಸಿರುವಂಥ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.

❖ ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನಿನನ್ವಯ ನೇಮಕಾತಿ ಸಮಿತಿಯು ಸೂಕ್ತ ಕ್ರಮ ಕೈಗೊಳ್ಳುವುದು.

❖ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 080-22943346 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು. ಹಾಗೂ ತಾಂತ್ರಿಕ ತೊಂದರೆ ಎದುರಾದಲ್ಲಿ ಅದನ್ನು ಸ್ಥಗಿತಗೊಳಿಸಿ ಮತ್ತೊಮ್ಮೆ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಅರ್ಜಿಯನ್ನು ಭರ್ತಿ ಮಾಡಲು ತಿಳಿಸಲಾಗಿದೆ.

**ಟಿಪ್ಪಣಿ:** ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು, ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

■ **ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್ (ಪುರುಷ ಮತ್ತು ಮಹಿಳಾ) ಖಾಲಿ ಹುದ್ದೆಗಳ ವಿವರ:**

ಎ) ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್ ಪುರುಷ - 10

ಬಿ) ಮಹಿಳಾ ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್- 01

■ **ಹೈದರಾಬಾದ್-ಕರ್ನಾಟಕ ಮೀಸಲಾತಿಗೊಳಪಡುವ ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್ ಖಾಲಿ ಹುದ್ದೆಯ ವಿವರ :**

ಡಿಟೆಕ್ಟೀವ್ ಸಬ್‌ಇನ್ಸ್‌ಪೆಕ್ಟರ್ - 01

*ಟಿಪ್ಪಣಿ: ಮೇಲ್ಕಂಡ 12 ಖಾಲಿ ಹುದ್ದೆಗಳನ್ನು ವರ್ಗೀಕರಣವನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.*

■ **ಅರ್ಹತಾ ಷರತ್ತುಗಳು:**

ಎ) ಭಾರತೀಯ ನಾಗರಿಕನಾಗಿರತಕ್ಕದ್ದು.

ಬಿ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ, ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಸಿ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಡಿ) ಹೈದ್ರಬಾದ್-ಕರ್ನಾಟಕ ಮೀಸಲಾತಿಗೊಳಪಡುವ ಹುದ್ದೆಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಹೈದ್ರಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಯಾಗಿರಬೇಕು.

■ **ವಯೋಮಿತಿ :**

ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ 25.01.2017ಕ್ಕೆ ಅಭ್ಯರ್ಥಿಗೆ ಕನಿಷ್ಟ 21 ವರ್ಷ ವಯಸ್ಸಾಗಿರಬೇಕು ಹಾಗೂ ದಿನಾಂಕ: 25.01.2017ಕ್ಕೆ ಈ ಕೆಳಕಂಡ ವಯಸ್ಸು ಮೀರಿರಬಾರದು.

ಎ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ 30 ವರ್ಷಗಳು.

ಬಿ) ಇತರೆ ಅಭ್ಯರ್ಥಿಗಳಿಗೆ 28 ವರ್ಷಗಳು.

■ **ವಿದ್ಯಾರ್ಹತೆ:**

ಯು.ಜಿ.ಸಿ.ಇಂದ ಮಾನ್ಯತೆ ಪಡೆದಿರುವ ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಅಥವಾ ಎಐಸಿಟಿಇಯಿಂದ ಮಾನ್ಯತೆ ಪಡೆದ ಇಂಜಿನಿಯರಿಂಗ್/ತಂತ್ರಜ್ಞಾನದಲ್ಲಿ ಪದವಿ ಅಥವಾ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ, ಅಂದರೆ 25.01.2017ಕ್ಕೆ ಹೊಂದಿರಬೇಕು.


## ಬೇಕಾಗಿದ್ದಾರೆ

ಬೇಸಿಕ್ ನರ್ಸಿಂಗ್ ಅಸಿಸ್ಟೆಂಟ್ (Basic Nursing Assistant) ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. (Nursing Assistant) ಕೆಲಸ ಗೊತ್ತಿಲ್ಲದ ಮಹಿಳೆಯರಿಗೆ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಉಚಿತವಾಗಿ ಬೇಸಿಕ್ ನರ್ಸಿಂಗ್ ಅಸಿಸ್ಟೆಂಟ್ ತರಬೇತಿ ಕೊಟ್ಟು ಉದ್ಯೋಗ ಒದಗಿಸಲಾಗುತ್ತದೆ. ತರಬೇತಿಯಲ್ಲಿ ತಿಂಗಳಿಗೆ ರೂ. 5000 ಸ್ಟೈಫಂಡ್ರಿ (ಭತ್ಯೆ) (ಸಂಬಳ) ಉಚಿತ ಊಟ, ಉಚಿತ ವಸತಿ (Hostel), ತರಬೇತಿ ನಂತರ ತಿಂಗಳಿಗೆ ರೂ. 10,000/–ದಿಂದ ರೂ. 25,000/–ರವರೆಗೆ ಸಂಬಳ.

**ವಿದ್ಯಾರ್ಹತೆ**: 7ರಿಂದ ಪಿ.ಯು.ಸಿ.ವರೆಗೆ ಪಾಸ್/ಫೇಲ್.

**ವಯೋಮಿತಿ**: 18 ರಿಂದ 25 ವರ್ಷ. ಆಸಕ್ತ ಸೇವಾಮನೋಭಾವವುಳ್ಳ ಮಹಿಳೆಯರು ಸಂಪರ್ಕಿಸಿ. ಮೊದಲು ಬಂದವರಿಗೆ ಆದ್ಯತೆ.

**Job oriental free basic Nursing Center call**

**9731568629, 9482056246**

(ಜಾಹೀರಾತು)

## ಉದ್ಯೋಗಾವಕಾಶಗಳು

ನಿಮಗೆ ಹಣದ ಅವಶ್ಯಕತೆ ಇದೆಯೇ? ನಿಮ್ಮ ಮನೆಯಲ್ಲಿ ಕುಳಿತು **Full Time or Part Time** ಅಂಚೆ ಪತ್ರಗಳನ್ನು ಕಳುಹಿಸುತ್ತಾ **Mail order** ಮೂಲಕ ತಿಂಗಳಿಗೆ ರೂ. 25,000/-ರಿಂದ 30,000/-ಗಳನ್ನು ಗಳಿಸಬಹುದು. ನಿಮ್ಮ ಸಂಪೂರ್ಣ ವಿಳಾಸವನ್ನು ಕೆಳಕಂಡ ಮೊಬೈಲ್ ಸಂಖ್ಯೆಗೆ **SMS** ಕಳುಹಿಸಿದ ನಂತರ ಮಾಹಿತಿಯನ್ನು ಪೋಸ್ಟ್ ಮುಖಾಂತರ ಕಳುಹಿಸಲಾಗುವುದು.

**ಸಂಪರ್ಕಿಸಿ: 9900745123**

(ಜಾಹೀರಾತು)

**ಟಿಪ್ಪಣಿ:**

ಎ) ಮೇಲೆ ನಮೂದಿಸಿರುವ ವಿದ್ಯಾರ್ಹತೆ ಹೊಂದದೇ ಇರುವ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ನಂತರ ನಿಗದಿಪಡಿಸಲಾದ ವಿದ್ಯಾರ್ಹತೆ ಹಾಗೂ ಅಂಕಪಟ್ಟಿ ಹೊಂದಿರುವುದಿಲ್ಲವೆಂದು ನೇಮಕಾತಿ ಸಮಿತಿಗೆ ಪತ್ತೆಯಾದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ಯಾವುದೇ ಹಂತದಲ್ಲಾದರೂ ರದ್ದುಪಡಿಸಲಾಗುವುದು.

ಬಿ) ಡಿಪ್ಲೊಮಾ ಇತ್ಯಾದಿ ವಿದ್ಯಾರ್ಹತೆಗಳು ಪದವಿಗೆ ಸಮಾನವಾಗುವುದಿಲ್ಲ, ಆದ್ದರಿಂದ ಡಿಟೆಕ್ಟೀವ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಈ ವಿದ್ಯಾರ್ಹತೆಯ ಅಭ್ಯರ್ಥಿಗಳು ಅರ್ಹರಾಗುವುದಿಲ್ಲ.

ಸಿ) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನಿಗದಿತ ವಿದ್ಯಾರ್ಹತೆಯಾದ ಪದವಿಯನ್ನು ಪಡೆಯಲು ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಹಾಗೂ ಅಂಕಪಟ್ಟಿ ಇಲ್ಲದೆ ಇರುವ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಅರ್ಹರಾಗಿರುವುದಿಲ್ಲ. ಮೇಲಿನ ವಿದ್ಯಾರ್ಹತೆಯನ್ನು ಹೊರತುಪಡಿಸಿ ಬೇರೆ ಯಾವ ವಿದ್ಯಾರ್ಹತೆಯನ್ನೂ ಪರಿಗಣಿಸಲಾಗುವುದಿಲ್ಲ.

■ **ತರಬೇತಿ, ಖಾಯಂಪೂರ್ವ ಅವಧಿ ಮತ್ತು ವೇತನ ಶ್ರೇಣಿ :**

ಎ) **ತರಬೇತಿ:**

ಆಯ್ಕೆಯಾದ ಅಭ್ಯರ್ಥಿಗಳು ಡಿಜಿ ಮತ್ತು ಐಜಿಪಿಯವರು ಕಾಲಕಾಲಕ್ಕೆ ನಿಗದಿಪಡಿಸುವ ತರಬೇತಿಗೆ ಒಳಪಡತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣವಾಗತಕ್ಕದ್ದು. ನಿರ್ದಿಷ್ಟ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೆ ಇರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದ ಮೂಲಕ ಸೇವೆಯಿಂದ ಬಿಡುಗಡೆಯಾಗಲು ಹೊಣೆಗಾರರಾಗಿರತಕ್ಕದ್ದು. ಅಭ್ಯರ್ಥಿಗಳು ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ನಿರ್ದಿಷ್ಟಪಡಿಸಿದಂತೆ ಯಾವುದೇ ಜಿಲ್ಲೆ/ಆಯುಕ್ತ ಕಾರ್ಯಾಲಯದಲ್ಲಿ ಆರು ತಿಂಗಳ ಮತ್ತೊಂದು ಅವಧಿಗೆ ಸೈಬರ್ ಅಪರಾಧಗಳ ಸಂಬಂಧ ವಿಶೇಷ ಮಹತ್ವದೊಂದಿಗೆ ಪ್ರಾಯೋಗಿಕ ತರಬೇತಿಗೆ ಸಹ ಒಳಗಾಗತಕ್ಕದ್ದು. ಮುಂದಿನ ಆರು ತಿಂಗಳು ಎಂದರೆ, ಕೇಂದ್ರ ಪತ್ತೇದಾರಿ ತರಬೇತಿ ಎಂದರೆ, ಕೇಂದ್ರ ಪತ್ತೇದಾರಿ ತರಬೇತಿ ಸಂಸ್ಥೆ, ಕೇಂದ್ರ ತನಿಖಾ ಬ್ಯೂರೋ ಮತ್ತು ರಾಷ್ಟ್ರೀಯ ತನಿಖಾ ಏಜೆನ್ಸಿಯಲ್ಲಿ ತಲಾ ಎರಡು ತಿಂಗಳ ತರಬೇತಿ.

ಬಿ) **ಖಾಯಂಪೂರ್ವ ಅವಧಿ:**

ಕರ್ನಾಟಕ ಸಿವಿಲ್ ಸೇವಾ (ಪ್ರೋ)ನಿಯಮಗಳು 1977 ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ನೇಮಕಗೊಂಡ ಅಭ್ಯರ್ಥಿಗಳ ಪ್ರೊಬೇಷನ್ ಅವಧಿ, ತರಬೇತಿಯ ಅವಧಿಯು ಒಳಗೊಂಡಂತೆ ಎರಡು ವರ್ಷ ಆರು ತಿಂಗಳಾಗಿರುತ್ತದೆ.

ಸಿ) **ವೇತನ ಶ್ರೇಣಿ:**

ರೂ. 21600-600-24600-700-28800-800-33600-900-39000-1050-40050

ಡಿ) **ಪಿಂಚಣಿ ಸೌಲಭ್ಯ:**

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006 ರಂತೆ ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

■ **ಸಹಿಷ್ಣುತೆ ಪರೀಕ್ಷೆ (Endurance Test) (ಇಟಿ) ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ (Physical Efficiency Test) (ಪಿಇಟಿ):**

ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯ ದಿನಾಂಕ, ಸಮಯ ಮತ್ತು ಸ್ಥಳದ ಮಾಹಿತಿಯನ್ನು ಒಳಗೊಂಡ ಕರೆ ಪತ್ರಗಳನ್ನು ಪೊಲೀಸ್ ಇಲಾಖೆಯ ವೆಬ್‌ಸೈಟ್: http://www.ksp.gov.in ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಅಭ್ಯರ್ಥಿಯು ತನ್ನ ಕರೆ ಪತ್ರವನ್ನು ಪೊಲೀಸ್ ಇಲಾಖೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಕರೆ ಪತ್ರಗಳನ್ನು ಅಂಚೆ ಮೂಲಕ ರವಾನಿಸಲಾಗುವುದಿಲ್ಲ, ಆದ್ದರಿಂದ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್‌ನ್ನು ಮೇಲಿಂದ ಮೇಲೆ ವೀಕ್ಷಿಸುತ್ತಿರಬೇಕು. ಕರೆ ಪತ್ರವಿಲ್ಲದೆ ಹಾಜರಾಗುವ ಅಭ್ಯರ್ಥಿಗಳಿಗೆ ಇ.ಟಿ. ಮತ್ತು ಪಿ.ಇ.ಟಿ. ಪರೀಕ್ಷೆಗಳಿಗೆ ಅನುವು ಮಾಡಲಾಗುವುದಿಲ್ಲ.

ಎ) ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಆಯ್ಕೆ ಸಮಿತಿಯು ನಿಗದಿಪಡಿಸಿದ ಕೇಂದ್ರಗಳಲ್ಲಿ ನಡೆಸಲಾಗುವುದು.

ಆಯ್ಕೆ ಸಮಿತಿಯು ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹೊಸದಾಗಿ ಸೇರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ ಇದನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಎಲ್ಲಿಯೇ ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿದರೂ ಅಭ್ಯರ್ಥಿಗಳು ಸದರಿ ಪರೀಕ್ಷೆಗೆ ಹಾಜರಾಗತಕ್ಕದ್ದು, ಇಲ್ಲದಿದ್ದಲ್ಲಿ ಗೈರುಹಾಜರು/ಅನರ್ಹಗೊಳಿಸಲಾಗುವುದು.

ಬಿ) ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾದರೆ, ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು. (ವಿಶೇಷ ಸೂಚನೆಗಳು 16(ಸಿ)ನ್ನು ನೋಡಿ) ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಿ) ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯ ದಿನಾಂಕ ಮತ್ತು ಸಮಯದ ಮಾಹಿತಿಯನ್ನು ಒಳಗೊಂಡ ಕರೆ ಪತ್ರಗಳನ್ನು ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿ ಪ್ರಕಟಿಸಲಾಗುವುದರಿಂದ ಅಭ್ಯರ್ಥಿಗಳು ಸದರಿ ವೆಬ್‌ಸೈಟ್‌ನಿಂದ ಕರೆ ಪತ್ರಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು (Download). ಈ ಸಂಬಂಧ ಅಭ್ಯರ್ಥಿಗಳು ಮುಖ್ಯವಾಗಿ ಈ ಕಛೇರಿಯ ಅಧಿಕೃತ ವೆಬ್‌ಸೈಟ್: www.ksp.gov.inನ್ನು ದಿನನಿತ್ಯ ಗಮನಿಸುತ್ತಿರುವುದು ಸೂಕ್ತ. ದೈಹಿಕ ಪರೀಕ್ಷೆಯು ನಡೆಯುವ ಸಮಯ ಮತ್ತು ಸ್ಥಳವನ್ನು ಸಂಬಂಧಪಟ್ಟ ದೈಹಿಕ ಪರೀಕ್ಷೆಯ ಕೇಂದ್ರದ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು. ಕರೆ ಪತ್ರವನ್ನು ಪಡೆಯದೆ ಪರೀಕ್ಷೆಗೆ ಹಾಜರಾದಲ್ಲಿ ಅಂತಹವರಿಗೆ ದೈಹಿಕ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.

ಡಿ) ದೈಹಿಕ ಸಾಮರ್ಥ್ಯ ಪರೀಕ್ಷೆ: (ಸಹಿಷ್ಣುತೆ ಪರೀಕ್ಷೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳಿಗೆ ಮಾತ್ರ)

ಎ) ಪುರುಷ ಅಭ್ಯರ್ಥಿಗಳಿಗೆ ಅನ್ವಯಿಸುವಂತೆ

| | | |
|---|---|---|
| ಎತ್ತರ | : | ಕನಿಷ್ಠ 168 ಸೆಂ.ಮೀ. |
| ಎದೆ ಸುತ್ತಳತೆ | : | 86 ಸೆಂ.ಮೀ. (ಪೂರ್ತಿ ವಿಸ್ತರಿಸಿದಾಗ) ಕನಿಷ್ಠ ವಿಸ್ತರಣೆ 5 ಸೆಂ.ಮೀ. |

ಬಿ) ಮಹಿಳಾ ಅಭ್ಯರ್ಥಿಗಳಿಗೆ ಅನ್ವಯಿಸುವಂತೆ:

| | | |
|---|---|---|
| ಎತ್ತರ | : | ಕನಿಷ್ಠ 157 ಸೆಂ.ಮೀ. |
| ತೂಕ | : | ಕನಿಷ್ಠ 45 ಕೆ.ಜಿ. |

**ವಿಶೇಷ ಸೂಚನೆ:**

ಸಹಿಷ್ಣುತೆ ಪರೀಕ್ಷೆಗೆ ಹಾಜರಾಗುವ ಮುನ್ನ ಅಭ್ಯರ್ಥಿಗಳು ದೈಹಿಕವಾಗಿ ಸದೃಢರಿರಬೇಕು. ಈ ಪರೀಕ್ಷೆಗಳ ಸಂದರ್ಭದಲ್ಲಿ ಸಂಭವಿಸುವ ಯಾವುದೇ ರೀತಿಯ ಅನಾಹುತ/ತೊಂದರೆಗಳಿಗೆ ಪೊಲೀಸ್ ಇಲಾಖೆ/ನೇಮಕಾತಿ ಸಮಿತಿಯವರು ಜವಾಬ್ದಾರರಾಗಿರುವುದಿಲ್ಲ. ಅಭ್ಯರ್ಥಿಗಳು ಅವರ ಸ್ವಂತ ಹಿತದೃಷ್ಟಿಯಿಂದ ಅವರ ದೇಹದ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿಕೊಂಡು, ಅಭ್ಯರ್ಥಿಯ ಆರೋಗ್ಯವು ಎಲ್ಲ ರೀತಿಯಿಂದಲೂ ಸದೃಢವಾಗಿದೆ ಎಂದು ಖಚಿತಪಡಿಸಿಕೊಂಡು ಇಲಾಖೆ ನಡೆಸುವ ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಎಲ್ಲ ವಿಧದಿಂದಲೂ ಅರ್ಹನೆಂದು ಮುಂಚಿತವಾಗಿಯೇ ತಿಳಿದುಕೊಂಡು ಹಾಜರಾಗತಕ್ಕದ್ದು. ಈ ದಿಸೆಯಲ್ಲಿ ಕನಿಷ್ಠ ಒಂದು ತಿಂಗಳ ಮುಂಚೆಯಿಂದಲೇ ಸಹಿಷ್ಣುತೆ ಪರೀಕ್ಷೆಗೆ ಅಭ್ಯರ್ಥಿಗಳು ಸಾಕಷ್ಟು ಅಭ್ಯಾಸ ಮಾಡಿಕೊಳ್ಳತಕ್ಕದ್ದು. ಸಹಿಷ್ಣುತೆ ಪರೀಕ್ಷೆಯಲ್ಲಿ ಯಾವ ಅನಾಹುತಗಳಿಗೂ ಇಲಾಖೆ ಜವಾಬ್ದಾರರಾಗುವುದಿಲ್ಲ. ಈ ಪರೀಕ್ಷೆಗಳಿಗೆ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿ ಹಾಗೂ ಸ್ವ ಇಚ್ಛೆಯಿಂದ ಭಾಗವಹಿಸುವುದು.

■ **ಲಿಖಿತ ಪರೀಕ್ಷೆ:**

ಎ) ಅಭ್ಯರ್ಥಿಯು ಸಹಿಷ್ಣುತೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ಲಿಖಿತ ಪರೀಕ್ಷೆಗೆ ಕರೆಯಲಾಗುವುದು. ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ಆಯ್ಕೆ ಸಮಿತಿಯು ನಿಗದಿಪಡಿಸುವ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು. ಆಯ್ಕೆ ಸಮಿತಿಯು ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹೊಸದಾಗಿ ಸೇರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಬಿ) ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ದಿನಾಂಕ, ಸಮಯ ಮತ್ತು ಸ್ಥಳದ ಮಾಹಿತಿಯನ್ನು ಹೊಂದಿರುವ ಕರೆಪತ್ರವನ್ನು ಈ ಕಛೇರಿಯ ಅಧಿಕೃತ ವೆಬ್‌ಸೈಟ್: www.ksp.gov.inನಿಂದ ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು (Download). ಖುದ್ದಾಗಿ ಯಾವುದೇ ಅಭ್ಯರ್ಥಿಗಳಿಗೆ ಕರೆ ಪತ್ರಗಳನ್ನು ಕಳುಹಿಸಲಾಗುವುದಿಲ್ಲ. ಈ ಸಂಬಂಧ ಅಭ್ಯರ್ಥಿಗಳು ಮುಖ್ಯವಾಗಿ ಈ ಕಛೇರಿಯ ಅಧಿಕೃತ ವೆಬ್‌ಸೈಟ್ www.ksp.gov.inನ್ನು ಮೇಲಿಂದ ಮೇಲೆ ಗಮನಿಸುತ್ತಿರುವುದು ಸೂಕ್ತ. ಲಿಖಿತ ಪರೀಕ್ಷೆಯು ನಡೆಯುವ ವೇಳೆ ಮತ್ತು ಸ್ಥಳವನ್ನು ಸಂಬಂಧಪಟ್ಟ ಲಿಖಿತ ಪರೀಕ್ಷೆಯ ಕೇಂದ್ರದ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು. ಕರೆಪತ್ರವನ್ನು ಪಡೆಯದೆ ಪರೀಕ್ಷೆಗೆ ಹಾಜರಾದಲ್ಲಿ ಅಂತಹವರಿಗೆ ಲಿಖಿತ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗುವಾಗ ಕರೆಪತ್ರದ ಜೊತೆಗೆ ಹಿಂದೆ ತಿಳಿಸಿದಂತೆ ಯಾವುದಾದರೊಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಸಿ) **ಲಿಖಿತ ಪರೀಕ್ಷೆಗೆ ತರಬೇಕಾದ ದಾಖಲಾತಿಗಳು:**

ಎ) ಲಿಖಿತ ಪರೀಕ್ಷೆಯ ಕರೆಪತ್ರ.

ಬಿ) ಸಹಿಷ್ಣುತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯ ಫಲಿತಾಂಶ ಹಾಳೆ

ಸಿ) ಗುರುತಿನ ಚೀಟಿ

ಡಿ) ಆನ್‌ಲೈನ್ ಅರ್ಜಿಯ ಜೆರಾಕ್ಸ್ ಪ್ರತಿ ತರತಕ್ಕದ್ದು. ತಪ್ಪಿದ್ದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.

ಡಿ) ಲಿಖಿತ ಪರೀಕ್ಷೆಯು ಪದವಿ ಮಟ್ಟದ ಎರಡು ಪತ್ರಿಕೆಗಳದ್ದಾಗಿರುತ್ತದೆ.

ಪತ್ರಿಕೆ-1 : ಈ ಪ್ರಶ್ನೆಪತ್ರಿಕೆಯಲ್ಲಿ ಪ್ರಬಂಧ ಬರಹ, ಸಾರಾಂಶ ಬರಹ, ಭಾಷಾಂತರ ಪ್ರಶ್ನೆಗಳು ಇರುತ್ತವೆ. ಪ್ರಬಂಧ ಬರಹದಲ್ಲಿ 600 ಶಬ್ದಗಳ ಮಿತಿಯನ್ನು ಮೀರಬಾರದು. ಪ್ರಬಂಧದ ಜೊತೆ ಸಾರಾಂಶ ಬರಹ (Precis) ಪ್ರಶ್ನೆಯನ್ನೂ ಕೊಡಲಾಗುವುದು. ಅಭ್ಯರ್ಥಿಗಳು ಕೊಡಲಾಗಿರುವ ಉತ್ತರ ಪತ್ರಿಕೆಯಲ್ಲಿ ಉತ್ತರಿಸತಕ್ಕದ್ದು ಹಾಗೂ ಅತಿರಿಕ್ತ ಉತ್ತರ ಪತ್ರಿಕೆಗಳನ್ನು ಕೊಡಲಾಗುವುದಿಲ್ಲ. ಈ ಪರೀಕ್ಷೆಯ ಅವಧಿ ಒಂದು ಗಂಟೆ ಮೂವತ್ತು ನಿಮಿಷಗಳಾಗಿದ್ದು, 50 ಅಂಕಗಳನ್ನು ಹೊಂದಿರುತ್ತದೆ. (20 ಅಂಕಗಳು ಪ್ರಬಂಧಕ್ಕೆ, 10 ಅಂಕಗಳು ಸಾರಾಂಶ ಬರಹಕ್ಕೆ ಹಾಗೂ 20 ಅಂಕಗಳು ಕನ್ನಡದಿಂದ ಇಂಗ್ಲೀಷ್‌ಗೆ ಮತ್ತು ಇಂಗ್ಲೀಷ್‌ನಿಂದ ಕನ್ನಡ ಭಾಷಾಂತರಕ್ಕೆ) ಇದರಲ್ಲಿ ಕನಿಷ್ಟ ಅಂಕಗಳು ಇರುವುದಿಲ್ಲ.

ಪತ್ರಿಕೆ-2 : ಈ ಪ್ರಶ್ನೆಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿದ್ದು 150 ಅಂಕಗಳಿಗೆ ವಸ್ತುನಿಷ್ಟ(ಆಬ್ಜೆಕ್ಟೀವ್) ಮಾದರಿಯದಾಗಿದ್ದು, ಬಹುವಿಧ ಆಯ್ಕೆ (Multiple Choice) ಉತ್ತರಗಳ ಲಿಖಿತ ಪರೀಕ್ಷೆ ಇರುತ್ತದೆ. ಇವುಗಳನ್ನು ಉತ್ತರಿಸಲು ಒಂದು ಗಂಟೆ ಮೂವತ್ತು ನಿಮಿಷ ಸಮಯ ನೀಡಲಾಗುತ್ತದೆ. ಈ ಪ್ರಶ್ನೆ ಪತ್ರಿಕೆಯು ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಗಳು, ವಿಜ್ಞಾನ, ಭೂಗೋಳ ಶಾಸ್ತ್ರ, ಇತಿಹಾಸ, ಭಾರತೀಯ ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ, ಸಾಮಾನ್ಯ ಮಾನಸಿಕ ಸಾಮರ್ಥ್ಯ, ಆಧುನಿಕ ಕಂಪ್ಯೂಟರ್ ಜ್ಞಾನ ಮತ್ತು ನೈತಿಕ ಶಿಕ್ಷಣವು ಒಳಗೊಂಡ ಸಾಮಾನ್ಯ ಅಧ್ಯಯನಗಳ ಮೇಲಿನ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಋಣಾತ್ಮಕ ಅಂಕಗಳಿರುವವು. ಅಭ್ಯರ್ಥಿಗಳು ಎರಡು ಪತ್ರಿಕೆಗಳಿಗೂ ಹಾಜರಾಗುವುದು ಕಡ್ಡಾಯವಾಗಿರುತ್ತದೆ.

**ಅನುಬಂಧ- ಎ**

**ಡಿಟೆಕ್ಟೀವ್ ಸಬ್-ಇನ್‌ಸ್ಪೆಕ್ಟರ್ ಹುದ್ದೆಗಳ ವರ್ಗೀಕರಣ**

**i) ಡಿಟೆಕ್ಟೀವ್ ಸಬ್‌ಇನ್‌ಸ್ಪೆಕ್ಟರ್ (ಪುರುಷ)-10 ಖಾಲಿ ಹುದ್ದೆಗಳ ವರ್ಗೀಕರಣ ಈ ಕೆಳಗಿನಂತಿದೆ:**

| ವರ್ಗ | ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋ.ನಿ. ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ | 05 | 01 | - | - | - | 04 |
| ಪ.ಜಾತಿ | 01 | - | - | - | - | 01 |
| ಪ.ಪಂಗಡ | - | - | - | - | - | - |
| ಪ್ರ-1 | - | - | - | - | - | - |
| ಪ್ರ-2ಎ | 02 | - | - | - | - | 02 |
| ಪ್ರ-2ಬಿ | - | - | - | - | - | - |
| ಪ್ರ-3ಎ | 01 | - | - | - | - | 01 |
| ಪ್ರ-3ಬಿ | 01 | - | - | - | - | 01 |
| ಒಟ್ಟು | 10 | 01 | - | - | - | 09 |

**ii) ಡಿಟೆಕ್ಟೀವ್ ಸಬ್‌ಇನ್‌ಸ್ಪೆಕ್ಟರ್ (ಮಹಿಳಾ)-01 ಖಾಲಿ ಹುದ್ದೆಯ ವರ್ಗೀಕರಣ ಈ ಕೆಳಗಿನಂತಿದೆ:**

| ವರ್ಗ | ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋ.ನಿ. ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ | - | - | - | - | - | - |
| ಪ.ಜಾತಿ | 01 | - | - | - | - | 01 |
| ಪ.ಪಂಗಡ | - | - | - | - | - | - |
| ಪ್ರ-1 | - | - | - | - | - | - |
| ಪ್ರ-2ಎ | - | - | - | - | - | - |
| ಪ್ರ-2ಬಿ | - | - | - | - | - | - |
| ಪ್ರ-3ಎ | - | - | - | - | - | - |
| ಪ್ರ-3ಬಿ | - | - | - | - | - | - |
| ಒಟ್ಟು | - | - | - | - | - | - |

**iii) ಹೈದ್ರಬಾದ್-ಕರ್ನಾಟಕ ಮೀಸಲಾತಿಗೊಳಪಡುವ ಡಿಟೆಕ್ಟೀವ್ ಸಬ್‌ಇನ್‌ಸ್ಪೆಕ್ಟರ್ 01 ಖಾಲಿ ಹುದ್ದೆಯ ವರ್ಗೀಕರಣ ಈ ಕೆಳಗಿನಂತಿದೆ:**

| ವರ್ಗ | ಹುದ್ದೆಗಳ ಸಂಖ್ಯೆ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋ.ನಿ. ಅಭ್ಯರ್ಥಿ | ಕನ್ನಡ ಮಾಧ್ಯಮ | ಇತರರು |
|---|---|---|---|---|---|---|
| ಸಾಮಾನ್ಯ | - | - | - | - | - | - |
| ಪ.ಜಾತಿ | 01 | - | - | - | - | 01 |
| ಪ.ಪಂಗಡ | - | - | - | - | - | - |
| ಪ್ರ-1 | - | - | - | - | - | - |
| ಪ್ರ-2ಎ | - | - | - | - | - | - |
| ಪ್ರ-2ಬಿ | - | - | - | - | - | - |
| ಪ್ರ-3ಎ | - | - | - | - | - | - |
| ಪ್ರ-3ಬಿ | - | - | - | - | - | - |
| ಒಟ್ಟು | - | - | - | - | - | - |

ಹೆಚ್ಚಿನ ಮಾಹಿತಿಗೆ ಜಾಲತಾಣ ನೋಡಿ.

## ಕಂದಾಯ ಇಲಾಖೆ ಗದಗ ಜಿಲ್ಲೆ

# ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗೆ ಅರ್ಜಿ ಆಹ್ವಾನ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಗದಗ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ 2014-15ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಾತಿ ಪ್ರಕ್ರಿಯೆ ನಂತರ ಭರ್ತಿಯಾಗದೇ ಉಳಿದ 23 ಬ್ಯಾಕ್‌ಲಾಗ್ ಹುದ್ದೆಗಳು ಹಾಗೂ 2016-17ನೇ ಸಾಲಿನಲ್ಲಿ ವಯೋನಿವೃತ್ತಿ, ಮುಂಬಡ್ತಿ, ನಿಯಮ 6ರಡಿಯಲ್ಲಿ ವರ್ಗಾವಣೆ ಮತ್ತು ಮರಣ ಇನ್ನಿತರ ಕಾರಣಗಳಿಂದ ಖಾಲಿಯಾಗಿರುವ 23 ಹುದ್ದಗಳು ಒಟ್ಟು 46 ಹುದ್ದೆಗಳ ಖಾಲಿ ಇರುತ್ತವೆ. ಸದರಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್) (ಕೇಡರ್ ರೆಕ್ರೂಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖಿತ ಸರ್ಕಾರದ ಆದೇಶಗಳ ಅನುಮೋದನೆಯಂತೆ ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.

### 2014-15ನೇ ಸಾಲಿನಲ್ಲಿ ಭರ್ತಿಯಾಗದೇ ಉಳಿದ 23 ಬ್ಯಾಕ್‌ಲಾಗ್ ಹುದ್ದೆಗಳು

| ಕ್ರ.ಸಂ. | ವರ್ಗ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಒಟ್ಟು |
|---|---|---|---|---|---|---|---|---|---|
| 2014-15ನೇ ಸಾಲಿನಲ್ಲಿ ಭರ್ತಿಯಾಗದೇ ಉಳಿದ ಬ್ಯಾಕ್‌ಲಾಗ್ ಹುದ್ದೆಗಳ ವಿವರ | | | | | | | | | |
| 1. | ಪ.ಜಾ. | 01 | - | 02 | - | - | 01 | - | 04 |
| 2. | 2ಎ | - | 01 | 03 | - | - | - | 01 | 05 |
| 3. | 2ಬಿ | - | - | - | 01(L.D.) | - | - | - | 01 |
| 4. | 3ಎ | - | - | - | 01(H.I.) | - | - | - | 01 |
| 5. | 3ಬಿ | - | 01 | - | - | - | - | - | 01 |
| 6. | ಸಾಮಾನ್ಯ | 01 | 02 | 03 | 01(L.D.) | 02 | 01 | 01 | 11 |
| | ಒಟ್ಟು | 02 | 04 | 08 | 03 | 02 | 02 | 02 | 23 |

ಪರಿಶಿಷ್ಟ ಜಾತಿಯ 04 ಬ್ಯಾಕ್‌ಲಾಗ್ ಹುದ್ದೆಗಳಿಗೆ ಮೊದಲ ಆದ್ಯತೆಯಾಗಿ 29 ವರ್ಷ ಪೂರ್ಣಗೊಂಡಿರುವ ಹಾಗೂ 40 ವರ್ಷ ವಯಸ್ಸಿನೊಳಗೆ ಬರುವ ಅಭ್ಯರ್ಥಿಗಳಲ್ಲಿ ಮೆರಿಟ್ ಆಧಾರದ ಮೇಲೆ ಪರಿಗಣಿಸಲಾಗುವುದು. ಒಂದು ವೇಳೆ 29 ರಿಂದ 40 ವರ್ಷದೊಳಗಿರುವ ಅಭ್ಯರ್ಥಿಗಳು ಲಭ್ಯವಿಲ್ಲದೆ ಇದ್ದಲ್ಲಿ ನೇಮಕಾತಿ ನಿಯಮಗಳಂತೆ ಮೆರಿಟ್ ಆಧಾರದ ಮೇಲೆ ಪರಿಗಣಿಸಿ ಆಯ್ಕೆ ಮಾಡಲಾಗುವುದು. ಉಳಿದ ವರ್ಗಗಳ ಅಭ್ಯರ್ಥಿಗಳ ವಯೋಮಿತಿಯನ್ನು ಮುಂದಿನ ವಿಷಯಗಳಲ್ಲಿ ತಿಳಿಸಲಾಗುವುದು.

### 2016-17ನೇ ಸಾಲಿನಲ್ಲಿ ಖಾಲಿ ಇರುವ 23 ಹುದ್ದೆಗಳ ವಿವರ (ರೋಸ್ಟರ್ ಬಿಂದು 12 ರಿಂದ 34ರವರೆಗೆ)

| ಕ್ರ. ಸಂ. | ವರ್ಗ | ನಿಗದಿಪಡಿಸಿದ ಮೀಸಲಾತಿ (ಶೇಕಡಾವಾರು) | ನಿಗದಿ ಪಡಿಸಿದ ಹುದ್ದೆಗಳು | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲರು | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಒಟ್ಟು |
|---|---|---|---|---|---|---|---|---|---|---|---|
| 2016-17ನೇ ಸಾಲಿನಲ್ಲಿ ಖಾಲಿ ಇರುವ 23 ಹುದ್ದೆಗಳ ವಿವರ (ರೋಸ್ಟರ್ ಬಿಂದು 12ರಿಂದ 34 ರವರೆಗೆ) | | | | | | | | | | | |
| 1. | ಪ.ಜಾ. | 15 | 04 | 01 | 01 | - | 01 (H.I.) | 01 | - | - | 04 |
| 2. | ಪ.ಪಂ. | 03 | - | - | - | - | - | - | - | - | - |
| 3. | ಪ್ರ-1 | 04 | 01 | - | - | 01 | - | - | - | - | 01 |
| 4. | 2ಎ | 15 | 04 | - | 01 | - | 01 (H.I.) | 01 | 01 | - | 04 |
| 5. | 2ಬಿ | 04 | - | - | - | - | - | - | - | - | - |
| 6. | 3ಎ | 04 | - | - | - | - | - | - | - | - | 0 |
| 7. | 3ಬಿ | 05 | 01 | - | - | 01 | - | - | - | - | 01 |
| 8. | ಸಾಮಾನ್ಯ | 50 | 12 | 02 | 03 | 03 | 02 (L.D.) & (M.R. /M.I.) | 01 | 01 | - | 12 |
| | ಒಟ್ಟು | 100 | 23 | 03 | 06 | 05 | 04 | 03 | 02 | - | 23 |

**ಬ್ಯಾಕ್‌ಲಾಗ್ ಹುದ್ದೆಗಳು ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳು ಸೇರಿ**
**ಒಟ್ಟು ಭರ್ತಿ ಮಾಡಲಿರುವ ಹುದ್ದೆಗಳ ಸಂಖ್ಯೆ : 46**

■ **ಗ್ರಾಮಲೆಕ್ಕಿಗರ ಹುದ್ದೆಗಳಿಗೆ ಅನ್ವಯಿಸುವ ಅಂಗವಿಕಲರ ಸಮತಳ ಮೀಸಲಾತಿ ವಿವರ:**

1. ಕುಷ್ಠ ರೋಗದಿಂದ ಗುಣಮುಖರಾದವರು (Leprosy Cured)
2. ಶ್ರವಣ ದೋಷವುಳ್ಳವರು (Hearing Impaired)
3. ಮಾನಸಿಕ ಅಸ್ವಸ್ಥತೆ (Mentally ill)
4. ದೈಹಿಕ ಅಂಗವಿಕಲತೆಯುಳ್ಳವರು (Locomotor Disability)

■ **ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಅಭ್ಯರ್ಥಿಗಳು ಗಮನಿಸಬೇಕಾದ ವಿಶೇಷ ಸೂಚನೆಗಳು:**

1. ದ್ವಿತೀಯ ಪಿಯುಸಿ ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಮಂಡಳಿಗಳು ಕರ್ನಾಟಕದಲ್ಲಿ ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.
2. ಮೇಲ್ಕಂಡ 03 (ಮೂರು) ಶಿಕ್ಷಣ ಮಂಡಳಿಗಳ ಹೊರತು ಇನ್ನಿತರೆ ಯಾವುದೇ ಶಿಕ್ಷಣ ಮಂಡಳಿಗಳ/ಇತರೆ ರಾಜ್ಯಗಳ ಶಿಕ್ಷಣ ಮಂಡಳಿಗಳ/ದೂರ ಶಿಕ್ಷಣ ಮಂಡಳಿಯ (10+2) ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
3. ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಗೈರು ಹಾಜರಾಗುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ. ಮತ್ತು ಪುನಃ ಪರಿಶೀಲನೆಗೆ ಅವಕಾಶ ನೀಡುವುದಿಲ್ಲ.

**1) ಶೈಕ್ಷಣಿಕ ವಿದ್ಯಾರ್ಹತೆ:**

ದ್ವಿತೀಯ ಪಿ.ಯು.ಸಿ. ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಮಂಡಳಿಗಳು ಕರ್ನಾಟದಲ್ಲಿ ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸಿರುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು. ಈ ವಿದ್ಯಾರ್ಹತೆ ಹೊರತುಪಡಿಸಿ ಇನ್ನಿತರ ಯಾವುದೇ ತತ್ಸಮಾನ ವಿದ್ಯಾರ್ಹತೆಗಳನ್ನು ಪರಿಗಣಿಸಲಾಗುವುದಿಲ್ಲ. ಕಂಪ್ಯೂಟರ್‌ನ ಸಾಮಾನ್ಯ ಜ್ಞಾನ ಹೊಂದಿರತಕ್ಕದ್ದು. ವಿದ್ಯಾರ್ಹತೆಯ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢಪಡಿಸಿಕೊಂಡ ನಂತರ ನೇಮಾಕತಿಗೆ ಪರಿಗಣಿಸಲಾಗುವುದು.

**2) ವೇತನ ಶ್ರೇಣಿ:**

11600-200-12000-250-13000-300-14200-350-15600-400-17200-450-19000-500-21000

**3) ಅರ್ಹತಾ ಷರತ್ತುಗಳು:**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಯಾವುದೇ ದೈಹಿಕ/ಮಾನಸಿಕ ನ್ಯೂನತೆಯಿಂದ ಮುಕ್ತನಾಗಿರತಕ್ಕದ್ದು.
3. ಅಭ್ಯರ್ಥಿಯು ಈ ಹಿಂದೆ ಯಾವುದೇ ಸರ್ಕಾರದ ಸೇವೆಯಿಂದ ವಜಾಗೊಂಡಿರಬಾರದು.

**4) ಅರ್ಜಿ ಸಲ್ಲಿಸುವ ವಿಧಾನ:**

ಅರ್ಜಿಗಳನ್ನು ಆನ್‌ಲೈನ್ (On Line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

**5) ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ:**

ಅಧಿಕೃತ ವೆಬ್‌ಸೈಟ್ http://gadag-va.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಬರುವ ಅರ್ಜಿಯನ್ನು ಆಂಗ್ಲ ಭಾಷೆಯಲ್ಲಿ ತುಂಬಬೇಕು. ನಂತರ ಅಭ್ಯರ್ಥಿಯು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು---(jpg/gif) Browse ಮಾಡಿ PREVIEW ಪರಿಶೀಲಿಸಿ, ನಂತರ ಬರುವ Security Code ನಮೂದಿಸಿ Submit Button ಅನ್ನು ಒತ್ತಿದರೆ ಅರ್ಜಿಯ ಸಂಖ್ಯೆ (Reference Number) ಸೃಷ್ಟಿಯಾಗುತ್ತದೆ. ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ ತೆಗೆದುಕೊಳ್ಳತಕ್ಕದ್ದು. ಶುಲ್ಕವನ್ನು ಆನ್‌ಲೈನ ಮೂಲಕ ಪಾವತಿಸಲು ಅವಕಾಶವಿರುತ್ತದೆ. ಚಲನ್‌ಮೂಲಕ ಸಹ ಪಾವತಿಸಲು ಅವಕಾಶವಿದ್ದು, ಚಲನ್ ಸೃಷ್ಟಿಸಲು URL No https://www.onlinesbi.com/prelogin/icollecthome.htm?corpID=382120 ಈ ರೀತಿ ಇರುತ್ತದೆ. ಬ್ಯಾಂಕಿನಲ್ಲಿ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಲು ದಿನಾಂಕ: 31-01-2017 ಕೊನೆಯ ದಿನಾಂಕವಾಗಿರುತ್ತದೆ. ಅಭ್ಯರ್ಥಿಯು ಸ್ವೀಕೃತಿ ಸ್ಲಿಪ್ ಅನ್ನು ಮತ್ತು ಚಲನ್ ಪಾವತಿಯ ಒಂದು ಪರತಿಯನ್ನು ಕಡ್ಡಾಯವಾಗಿ ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು. ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ. ಈ ದಾಖಲೆಗಳನ್ನು ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಹಾಜರುಪಡಿಸತಕ್ಕದ್ದು. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಅಥವಾ ನಗದನ್ನು ಸ್ವೀಕರಿಸಲಾಗುವುದಿಲ್ಲ. ಸಲ್ಲಿಸಿರುವ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಬೇರೆ ಯಾವುದೇ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಈ ಕೆಳಗೆ ನಿಗದಿಪಡಿಸಿದ ದಿನಾಂಕದೊಳಗೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

1. ಅರ್ಜಿಗಳನ್ನು ದಿನಾಂಕ: 27-12-2016 ರಿಂದ 25-01-2017 ಸಂಜೆ 5.30 ರೊಳಗೆ
2. ಅರ್ಜಿ ಶುಲ್ಕವನ್ನು ದಿನಾಂಕ: 27-12-2016 ರಿಂದ 31-01-2017 ರವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದಾದರೂ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರದ ವೇಳೆಯಲ್ಲಿ ಪಾವತಿಸಕ್ಕದ್ದು.
3. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಿಗದಿತ ಶುಲ್ಕ ಪಾವತಿಯ ಕುರಿತು ವಸ್ತುಸ್ಥಿತಿ (Status) ಅನ್ನು ಶುಲ್ಕ ಪಾವತಿಸಿದ 5 ದಿನಗಳ ನಂತರ ಪರಿಶೀಲಿಸಿಕೊಳ್ಳಬಹುದು. ಪಾವತಿಯಾಗಿರುವುದು ಖಚಿತವಾಗದಿದ್ದರೆ ಚಲನ್ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಕಳುಹಿಸತಕ್ಕದ್ದು.

**6) ಅರ್ಜಿ ಶುಲ್ಕ:**

| ವರ್ಗ | ಶುಲ್ಕ | ಶುಲ್ಕ ಪಾವತಿಸುವ ವಿಧಾನ |
|---|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಅಂಗವಿಕಲರು | 100-00 | ಆನ್‌ಲೈನ್ ಮೂಲಕ ಅಥವಾ ಚಲನ್ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಂಡಿಯಾದ ಯಾವುದಾದರೂ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು. |

**7) ಹುದ್ದೆಗೆ ನಿಗದಿಪಡಿಸಿದ ವಯೋಮಿತಿ:**

ಈ ಅಧಿಸೂಚನೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷ ಪೂರೈಸಿರತಕ್ಕದ್ದು ಮತ್ತು ಈ ಕೆಳಗಿನ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು.

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 | 18 ವರ್ಷ | 40 ವರ್ಷ |
| 2-ಎ, 2-ಬಿ, 3-ಎ, 3-ಬಿ | 18 ವರ್ಷ | 38 ವರ್ಷ |
| ಸಾಮಾನ್ಯ | 18 ವರ್ಷ | 35 ವರ್ಷ |

ಆಯ್ಕೆ ಸಮಯದಲ್ಲಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.)ಯನ್ನು ಅಥವಾ ಕ್ಯುಮುಲೇಟಿವ್ ರೆಕಾರ್ಡ್ (ಜನನ ಪ್ರಮಾಣ ಪತ್ರ)ದಲ್ಲಿ ನಮೂದಿಸಿರುವ ಜನ್ಮ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಬೇರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ನಿಗಧಿಪಡಿಸಿದೆ.

ಅ) ಚಾಲ್ತಿಯಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಸಶಸ್ತ್ರದಳ/ ಕೇಂದ್ರ ಸಶಸ್ತ್ರದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವರೋ ಅಷ್ಟು ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೂ ಅಷ್ಟು ವರ್ಷಗಳು.

ಆ) ಚಾಲ್ತಿಯಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು

ಇ) ಚಾಲ್ತಿಯಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಅಭ್ಯರ್ಥಿಯು ವಿಧವೆಯಾಗಿದ್ದರೆ 10 ವರ್ಷಗಳು

**8. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:**

ಜಾತಿ ಮೀಸಲಾತಿ ಕೋರ ಬಯಸುವ-

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ನಮೂನೆ-ಡಿ ರಲ್ಲಿ (ಅನುಬಂಧ-1)
2. ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ-ಇ ನಲ್ಲಿ (ಅನುಬಂಧ-2)
3. 2-ಎ, 2-ಬಿ, 3-ಎ, 3-ಬಿ ಅಭ್ಯರ್ಥಿಗಳು ನಮೂನೆ-ಎಫ್ (ಅನುಬಂಧ-3)ನಲ್ಲಿ ಸಂಬಂಧಿಸಿದ ತಹಶೀಲದಾರರಿಂದ ಪ್ರಮಾಣ ಪತ್ರ ಪಡೆದಿರಬೇಕು.

ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅರ್ಹತೆ ಪಡೆದಿರಬೇಕು.

ಜಾತಿ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿ (ಅಧ್ಯಕ್ಷರು, ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

**9.ಗ್ರಾಮೀಣ ಮೀಸಲಾತಿ:**

ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 3ಬಿ, 3ಎ, 3ಬಿ ಸೇರಿದ ಅಭ್ಯರ್ಥಿಗಳು ನಮೂನೆ-2ರಲ್ಲಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮೊಹರು ಹಾಕಿಸಿಕೊಂಡಿರಬೇಕು. ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-1ರಲ್ಲಿ (Non Creamy Layer) ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದಿರಬೇಕು.

**10. ಮಾಜಿ ಸೈನಿಕರು:**

ಸೈನ್ಯ ನಿಯೋಜನೆ, ಸೈನ್ಯದಿಂದ ಸ್ವಯಂ ನಿವೃತ್ತಿ ಹೊಂದಿದ ಕಾರಣದಿಂದ ಬಿಡುಗಡೆಯಾದ ಮಾಜಿ ಸೈನಿಕ, ಈ ಬಗ್ಗೆ ಬಿಡುಗಡೆ ಹೊಂದಿದ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

**11. ಕನ್ನಡ ಮಾಧ್ಯಮ:**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರು ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಮಾಡಿಸಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡು ಪರಿಶೀಲನೆಯ ದಿನಾಂಕದಂದು ಹಾಜರುಪಡಿಸತಕ್ಕದ್ದು.

**12. ಯೋಜನಾ ನಿರಾಶ್ರಿತರು:**

ಯೋಜನೆಗಳಿಮದ ನಿರ್ವಸಿತರಾದ ಕುಟುಂಬಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೈಂ ಮಾಡುವ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ. ಡಿಪಿಎಆರ್ 44 ನೇನನಿ/2001 ದಿನಾಂಕ 27-7-2001ರಲ್ಲಿ ಸೂಚಿಸಿರುವಂತೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. (ಅನುಬಂಧ-2)

**13. ಅಂಗವಿಕಲರ ಮೀಸಲಾತಿ ಬಗ್ಗೆ:**

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 9(1ಎ)ರನ್ವಯ ರಾಜ್ಯ ಸಿವಿಲ್ ಸೇವೆಯಲ್ಲಿನ ಗ್ರೂಪ್ ಸಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇ.5 ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂ. ಡಿಪಿಎರ್ 54 ಎಸ್‌ಆರ್‌ಆರ್ 201 ದಿನಾಂಕ 23-06-2012 ರೀತ್ಯಾ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳಲಿ ಅಂಗವಿಕಲರ ಮೀಸಲಾತಿಯನ್ನು ಈ ಕೆಳಕಂಡ ವರ್ಗಗಳಿಗೆ ಮಾತ್ರ ಕಲ್ಪಿಸಲಾಗಿದೆ.

1. ಕುಷ್ಠರೋಗದಿಂದ ಗುಣಮುಖರಾದವರು (Leprosy Cured)
2. ಶ್ರವಣ ದೋಷವುಳ್ಳವರು (Hearing Impaired)
3. ಮಾನಸಿಕ ಅಸ್ವಸ್ಥತೆ (Mentally ill)
4. ದೈಹಿಕ ಅಂಗವಿಕಲತೆಯುಳ್ಳವರು (Locomotor Disability)

ಈ 04 ಅಂಗವಿಕಲತೆಯನ್ನು ಹೊರತುಪಡಿಸಿ ಇತರೆ ದೈಹಿಕ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಅಂಗವಿಕಲರ ಮೀಸಲಾತಿ ಕೋಟಾ ಅಡಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಸರ್ಕಾರದ ಅಧಿಕೃತ ಜ್ಞಾಪನ ಸಂ. ಸಿಆಸುಇ 115 ಸೇನೆ 2005 ದಿನಾಂಕ 19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಪಡೆದು ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ವೈಕಲ್ಯತೆ ಶೇ.40ಕ್ಕೆ ಕಡಿಮೆಯಿಲ್ಲದಿರುವ ಅಂಗವಿಕಲ ವ್ಯಕ್ತಿಗಳು.

ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅರ್ಹತೆಯನ್ನು ಪಡೆದಿರಬೇಕು.

**14. ಆಯ್ಕೆ ವಿಧಾನ:**

ಕರ್ನಾಟಕ ಜನರಲ್ ಸರ್ವೀಸಸ್ (Revenue Subordinate Branch) (ತಿದ್ದುಪಡಿ) ನಿಯಮಗಳು 2008 ಮತ್ತು 2009 ಹಾಗೂ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಅಭ್ಯರ್ಥಿಯನ್ನು ಅವರು ಪಿ.ಯು.ಸಿ. ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಪರೀಕ್ಷೆಯಲ್ಲಿ ಪಡೆದ ಅಂಕಗಳ (ಆನ್ ಮೆರಿಟ್) ಆಧಾರದ ಮೇಲೆ ಆಯಾ ಮೀಸಲಾತಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗುವುದು. ಮೂಲ ದಾಖಲೆಗಳ ಪರಿಶೀಲನೆಗೆ 1:3 (ಅನುಪಾತ)ರಂತೆ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ http://www.gadag.nic.in ನಲ್ಲಿ ಪ್ರಕಟಿಸಲಾಗುವುದು. ತಾತ್ಕಾಲಿಕ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಕಾರ್ಯ ಮುಕ್ತಾಯದ ನಂತರ 1:1 (ಅನುಪಾತ)ದಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ಪ್ರಕಟಣೆಯಲ್ಲಿ ತಿಳಿಸಿದಂತೆ ಅಭ್ಯರ್ಥಿಯು ಎಲ್ಲ ಮೂಲ ದಾಖಲೆಗಳನ್ನು ಹಾಜರುಪಡಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು. ಒಂದು ವೇಳೆ ನೇಮಕಾತಿ ಆದೇಶವನ್ನು ಪಡೆಯದೆ ಬಾಕಿ ಉಳಿಯುವ ಹುದ್ದೆಗಳಿಗೆ ಮಾತ್ರ ಕಾಯ್ದಿರಿಸಿದ ಪಟ್ಟಿಯನ್ನು ಪ್ರಕಟಿಸಲಾಗುವುದು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಜಿಲ್ಲೆಯ ಅಧಿಕೃತ ವೆಬ್‌ಸೈಟ್ http://www.gadag.nic.in ನ್ನು ಆಗಾಗ್ಗೆ ನೋಡಿಕೊಳ್ಳತಕ್ಕದ್ದು.

**15. ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಹಾಜರುಪಡಿಸತಕ್ಕದ್ದು.**

1. ದ್ವಿತೀಯ ಪಿ.ಯು.ಸಿ. ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಗ್ಗೆ ಪ್ರಮಾಣ ಪತ್ರ.
2. ಹುಟ್ಟಿದ ದಿನಾಂಕದ ಪ್ರಮಾಣ ಪತ್ರ. ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ಪ್ರಮಾಣ ಪತ್ರ ಅಥವಾ ಕ್ಯುಮುಲೇಟಿವ್ ರೇಕಾರ್ಡ್ (ಜನನ ಪ್ರಮಾಣ ಪತ್ರ) ದಾಖಲೆ.
3. ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಪೇಕ್ಷಣಾ ಪ್ರಮಾಣ ಪತ್ರವನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ಪಡೆದಿಟ್ಟುಕೊಂಡಿರಬೇಕು.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಅನುಬಂಧ-1 ನಮೂನೆ-ಡಿ) ಮತ್ತು ಪ್ರವರ್ಗ-1 (ಅನುಬಂಧ-2 ನಮೂನೆ-ಇ) ಹಾಗೂ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು (ಅನುಬಂಧ-3 ನಮೂನೆ-ಎಫ್) ಮೀಸಲಾತಿ ಅಭ್ಯರ್ಥಿಗಳು ಕ್ರಮವಾಗಿ ಡಿ/ಇ/ಎಫ್ ರಲ್ಲಿ ಸಂಬಂಧಿಸಿದ ತಹಶೀಲದಾರರಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರತಕ್ಕದ್ದು.
5. ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ.
6. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ.
7. ಸೈನಿಕ ಸೇವೆಯಿಂದ ಬಿಡುಗಡೆಯಾದ ಬಗೆಗಿನ ಪ್ರಮಾಣ ಪತ್ರ
8. ಕಂಪ್ಯೂಟರ್ ಸಾಮಾನ್ಯ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ.

**16. ದುರ್ನಡತೆ:**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ತಪ್ಪು ಗ್ರಹಿಕೆಯಿಂದ ಅವರ ಅರ್ಹತೆ ಕುರಿಂತೆ ಈ ಅಧಿಸೂಚನೆಗೆ ಪೂರಕವಲ್ಲದ ಹಾಗೂ ಅಧಿಕೃತವಲ್ಲದ ಶೈಕ್ಷಣಿಕ ದಾಖಲೆಗಳನ್ನು ಸಲ್ಲಿಸಿದ್ದಾರೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ ಹುದ್ದೆಯ ಆಯ್ಕೆಯಿಂದ ಅವರ ಹೆಸರನ್ನು ಕೈಬಿಡಲಾಗುವುದು ಅಥವಾ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು.

**17. ಸಾಮಾನ್ಯ ಸೂಚನೆಗಳು:**

1. ನೈತಿಕ ದುರ್ನಡತೆಯಿಂದಾಗಿ/ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ರಾಜ್ಯ/ ಕೇಂದ್ರ/ಸ್ಥಳೀಯ ಸಂಸ್ಥೆ ಕಚೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿ ಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಲ್ಪಟ್ಟಿದ್ದು ಕಂಡ ಬಂದಲ್ಲಿ ನೇಮಕಾತಿಗೆ ಅನರ್ಹರಾಗಿರುತ್ತಾರೆ.
2. ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸಾಬೀತಾದ ಕೂಡಲೇ ಸೇವೆಯಿಂದ ವಜಾ ಮಾಡಲಾಗುವುದು. ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
3. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
4. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್‌ಲೈನ್ ಮುಖಾಂತರ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಪಾಲಿಸಬೇಕು.
5. ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.
7. ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿ (ಅಧ್ಯಕ್ಷರು ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.
8. ಆಯ್ಕೆಯು ಸರಕಾರದಿಂದ ಕಾಲ ಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.
9. ಅರ್ಜಿ ತುಂಬುವ ವಿಧಾನ ಹಾಗೂ ಹೆಚ್ಚಿನ ವಿವರಗಳು ಗದಗ ಜಿಲ್ಲಾಧಿಕಾರಿ ಕಛೇರಿಯ ಅಧಿಕೃತ ವೆಬ್‌ಸೈಟ್-http://gadag-va.kar.nic.in ರಲ್ಲಿ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ. ಮತ್ತು ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಸಹಾಯವಾಣಿ ಸಂಖ್ಯೆ: 08372-236009ಕ್ಕೆ ಹಾಗೂ ತಾಂತ್ರಿಕ ತೊಂದರೆಗಳಿಗೆ ಕಛೇರಿ ಕೆಲಸದ ವೇಳೆಯಲ್ಲಿ ಮಾತ್ರ ಸಂಪರ್ಕಿಸಬಹುದಾಗಿದೆ.
10. ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗುವುದು ಹಾಗೂ ಅಭ್ಯರ್ಥಿಯ ಹೆಸರು ತಾತ್ಕಾಲಿಕ ಪಟ್ಟಿಯಲ್ಲಿ ನಮೂದಿಸಿದ ಮಾತ್ರಕ್ಕೆ ಅವರ ಆಯ್ಕೆ ಅಂತಿಮವಾಗಿದೆ ಎಂದು ಭಾವಿಸತಕ್ಕದ್ದಲ್ಲ. ಆಯ್ಕೆಯ ಸಂಬಂಧವಾಗಿ ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.
11. ಅಂತಿಮವಾಗಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವ ಮುನ್ನ ಯಾವುದೇ ಹಂತದಲ್ಲಿ ಯಾವುದೇ ಕಾರಣ/ ಮಾಹಿತಿ ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ, ತಿದ್ದುಪಡಿ ಅಥವಾ ಸೇರ್ಪಡೆ ಮಾಡುವ ಅಥವಾ ವಿಧಿಸಲಾಗಿರುವ ಯಾವುದೇ ಷರತ್ತನ್ನು ಸಡಿಲಗೊಳಿಸುವ ಅಥವಾ ಯಾವುದೇ ಹೆಚ್ಚುವರಿ ಷರತ್ತನ್ನು ವಿಧಿಸುವ, ತುಂಬಲಾಗುವ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ/ನಿರ್ಣಯಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು, ಹಾಗೂ ಅಧ್ಯಕ್ಷರು ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ ಗದಗ ಜಿಲ್ಲೆ ಗದಗ ರವರು ಕಾಯ್ದಿರಿಸಿಕೊಂಡಿರುತ್ತಾರೆ.

## ಹೆಚ್‌ಕ್ಯೂ ಮದ್ರಾಸ್ ಇಂಜಿನಿಯರ್ ಗ್ರೂಪ್ ಮತ್ತು ಬೆಂಗಳೂರು ಕೇಂದ್ರ

# ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

| ಕ್ರಸಂ | ಹುದ್ದೆ ಹೆಸರು | ಹುದ್ದೆಗಳ ಸಂಖ್ಯೆ ಹೊಸ & ನಿರೀಕ್ಷಿತ ಒಳಗೊಂಡು | | ಒಟ್ಟು | ಲಂಬದಲ್ಲಿ ಮೀಸಲಾತಿ | | | | ಒಟ್ಟು | ಸಮತಲದಲ್ಲಿ ಮೀಸಲಾತಿ (ಒಟ್ಟು ಹುದ್ದೆಗಳನ್ನು ಕಾಲಮ್‌ನಲ್ಲಿ ಕೊಡಲಾಗಿದೆ.) | | | ವೇತನ ಬ್ಯಾಂಡ್ ಮತ್ತು ವೇತನ ಗ್ರೇಡ್ ವರ್ಗೀಕರಣದೊಂದಿಗೆ (7ನೇ ಸಿಪಿಸಿ ಪ್ರಕಾರ) | ಅಗತ್ಯವಿರುವ ಕನಿಷ್ಠ ಶೈಕ್ಷಣಿಕ/ತಾಂತ್ರಿಕ ಅರ್ಹತೆ |
|---|---|---|---|---|---|---|---|---|---|---|---|---|---|---|
| | | ಹೊಸ | ನಿರೀಕ್ಷಿತ ಹುದ್ದೆಗಳು | | ಸಾಮಾನ್ಯ | ಎಸ್‌ಸಿ | ಎಸ್‌ಟಿ | ಒಬಿಸಿ | | ಇಎಸ್‌ಎಂ | ಪಿಎಚ್ | ಎಂಎಸ್‌ಪಿ | | |
| (i) | (ii) | | | | (iii) | (iv) | (v) | (vi) | (vii) | (viii) | (ix) | (x) | (xi) | (xii) |
| (ಎ) | ಲೋವರ್ ಡಿವಿಜನ್ ಕ್ಲಾರ್ಕ್ (ಎಲ್‌ಡಿಸಿ) | 01 | – | 01 | 01 | – | – | – | 01 | – | – | – | ಮೂಲ ವೇತನ : ರೂ. 19900/– ಗ್ರುಪ್ 'ಸಿ', ನಾನ್ ಗೆಜೆಟೆಡ್, ಶಾಸನಾಂಗ ಸಂಬಂಧಿ ಸಾಮಾನ್ಯ ಕೇಂದ್ರ ಸೇವೆಗಳು, | ಅವಶ್ಯಕ : (ಎ) ಮಾನ್ಯತೆ ಪಡೆದ ಮಂಡಳಿ ಅಥವಾ ವಿಶ್ವವಿದ್ಯಾಲಯದಿಂದ 12ನೇ ತರಗತಿ ಪಾಸು ಅಥವಾ ತತ್ಸಮಾನ ಶಿಕ್ಷಣಾರ್ಹತೆ, (ಬಿ) ಟೈಪಿಂಗ್ ವೇಗ ಕಂಪ್ಯೂಟರ್ ಮೇಲೆ ಇಂಗ್ಲೀಷ್‌ನಲ್ಲಿ 35 ಶಬ್ದಗಳು ಪ್ರತಿ ನಿಮಿಷಕ್ಕೆ ಅಥವಾ 30 ಶಬ್ದಗಳು ಹಿಂದಿಯಲ್ಲಿ ಕಂಪ್ಯೂಟರ್ ಮೇಲೆ. (ಸರಾಸರಿ ಪ್ರತಿ ಶಬ್ದಕ್ಕೆ 5 ಕೀ ಡಿಪ್ರೆಶನ್ಸ್‌ಗಳ ಮೇಲೆ ಪ್ರತಿ ಗಂಟೆಗೆ 10500/9000 ಕೀ ಡಿಪ್ರೆಶನ್ನಗಳಿಗೆ ಅನುಗುಣವಾಗಿ 35/30 ಶಬ್ದಗಳು ಪ್ರತಿ ನಿಮಿಷಕ್ಕೆ.) |
| (ಬಿ) | ಸ್ಟೋರ್‌ಕೀಪರ್– III (skm-III) | 01 | 01 | 02 | – | – | – | 02 | 02 | – | – | 01 | ಮೂಲ ವೇತನ : ರೂ. 19900/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ನಾನ್ ಗೆಜೆಟೆಡ್, ಶಾಸನಾಂಗೇತರ | ಅವಶ್ಯಕ : ಹೈಯರ್ ಸೆಕೆಂಡರಿ ಪಾಸು ಅಥವಾ ತತ್ಸಮಾನ. ಅಪೇಕ್ಷಣೀಯ: ಇಂಥದೇ ಕೆಲಸದಲ್ಲಿ ಕನಿಷ್ಠ ಒಂದು ವರ್ಷ ಅನುಭವ. (ಬಿ) ಕಂಪ್ಯೂಟರ್‌ನಲ್ಲಿ ಎಂಎಸ್ ವರ್ಡ್ ತಿಳಿವಳಿಕೆ. (ಸಿ) ಸ್ಟೋರ್ ಕೀಪಿಂಗ್/ ಸ್ಟೋರ್ ನಿರ್ವಹಣೆಯಲ್ಲಿ ಸರ್ಟಿಫಿಕೇಟ್ ಕೋರ್ಸ್. |
| (ಸಿ) | ಟೈಪರೈಟರ್/ಕಂಪ್ಯೂಟರ್ ಮೆಕ್ಯಾನಿಕ್ | 01 | – | 01 | 01 | – | – | – | 01 | – | – | – | ಮೂಲ ವೇತನ : ರೂ. 19900/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ನಾನ್ ಗೆಜೆಟೆಡ್, ಶಾಸನಾಂಗ ರಹಿತದ್ದು | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. (ಬಿ) ಟೈಪರೈಟರ್/ಕಂಪ್ಯೂಟರ್ ಮೆಕ್ಯಾನಿಕ್ ಕ್ಷೇತ್ರದಲ್ಲಿ ಕನಿಷ್ಠ ಒಂದು ವರ್ಷ ಅನುಭವ. (ಸಿ) ಎಲ್ಲ ಬಗೆಯ ಟೈಪರೈಟರ್/ ಕಂಪ್ಯೂಟರ್ ಮಶೀನ್‌ಗಳ ತಾಂತ್ರಿಕ ತಿಳಿವಳಿಕೆ ಇರಬೇಕು ಹಾಗೂ ಟೈಪರೈಟರ್/ ಕಂಪ್ಯೂಟರ್ ಮಶೀನ್‌ಗಳ ತಾಂತ್ರಿಕ ದೋಷಗಳನ್ನು ರಿಪೇರಿ ಮೂಲಕ ಸರಿಪಡಿಸುವ ಸಾಮರ್ಥ್ಯ ಹೊಂದಿರಬೇಕು. |
| (ಡಿ) | ನಾಗರಿಕ ವೃತ್ತಿ ಬೋಧಕರು (ಸಿಟಿಐ) | | | | | | | | | | | | ಮೂಲ ವೇತನ : ರೂ. 19900/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ನಾನ್ ಗೆಜೆಟೆಡ್, ಶಾಸನಾಂಗ ರಹಿತದ್ದು | ಅವಶ್ಯಕ : (ಎ) ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ ಜತೆಗೆ ಇಂಡಸ್ಟ್ರೀಯಲ್ ಟ್ರೇನಿಂಗ್ ಇನ್ಸಟಿಟ್ಯೂಟ್/ಸಂಬಂಧಿಸಿದ ವೃತ್ತಿಯಲ್ಲಿ ವೃತ್ತಿ ಮತ್ತು ತರಬೇತಿಯ ರಾಷ್ಟ್ರೀಯ ಸರ್ಟಿಫಿಕೇಟ್ (ಬಿ) ಹೊಸಬರಿಗೆ ತರಬೇತಿ ನೀಡುವಲ್ಲಿ ಸಾಕಷ್ಟು ಕೌಶಲ್ಯ ಮತ್ತು ತಿಳಿವಳಿಕೆ ಹೊಂದಿರಬೇಕು ಎನ್‌ಟಿಸಿ/ಎನ್‌ಎಸಿ ಯಲ್ಲಿ ಅನುಗುಣವಾದ ಉದ್ಯೋಗಗಳು : (ಎ) ಪೇಂಟರ್ (ಸಾಮಾನ್ಯ) (ಬಿ) ಮ್ಯಾಸನ್ (ಕಟ್ಟಡ ನಿರ್ಮಾಪಕರು) (ಸಿ) ಮೆಕ್ಯಾನಿಕ್ (ಭಾರೀ ವಾಹನ)/ನಿರ್ಮಾಣ ಮಶೀನರಿ (ಮೆಕ್ಯಾನಿಕ್–ಕವಮ್–ಆಪರೇಟರ್) (ಡಿ) ಮೋಜಣಿದಾರ (ಇ) ಬಡಗಿ, ಪೀಠೋಪಕರಣ & ಕ್ಯಾಬಿನೆಟ್ ತಯಾರಕರು (ಎಫ್) ಮೆಕ್ಯಾನಿಕ್ (ಡಿಸೇಲ್)/ಡಿಸೇಲ್ ಮೆಕ್ಯಾನಿಕ್ (ಜಿ) ಫಿಲ್ಟರ್ |
| | (i) ಪೇಂಟರ್ & ಗೃಹಾಲಂಕಾರಕರು | | | | – | 01 | 01 | – | 02 | | | | | |
| | (ii) ಮ್ಯಾಸನ್ (ನಿರ್ಮಾಣ ಕರ್ಮಿ) | | | | 01 | – | – | 02 | 03 | | | | | |
| | (iii) ಪ್ಲಾಂಟ್ ಡ್ರೈವರ್ | | | | 01 | – | – | – | 01 | | | | | |
| | (iv) ರೆಜಿಮೆಂಟಲ್ ಮೋಜಣಿದಾರ ತಂತ್ರಜ್ಞ | 10 | 01 | 11 | 01 | – | – | – | 01 | 11 | 12 | – | | |
| | (v) ಬಡಗಿ & ಜೋಡಣೆಗಾರ (ಕಟ್ಟಿಗೆ ಕುಶಲಕರ್ಮಿ) | | | | 02 | – | – | – | 02 | | | | | |
| | (vi) ಇಂಜಿನ್ ಯೋಜಕ | | | | 01 | – | – | – | 01 | | | | | |
| | (vii) ಫಿಲ್ಟರ್ | | | | 01 | – | – | – | 01 | | | | | |
| ಇ) | ಅಡುಗೆಯವ | 04 | 88 | 92 | 48 | 04 | 07 | 33 | 92 | 09 | 02 (ಓಎಚ್) | | ಮೂಲ ವೇತನ : ರೂ. 19900/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ಔದ್ಯಮಿಕೇತರ, ಶಾಸನಾಂಗೇತರ | ಅವಶ್ಯಕ: (ಎ) ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. (ಬಿ) ಭಾರತೀಯ ಪದ್ಧತಿ ಅಡುಗೆಯ ತಿಳಿವಳಿಕೆ ಹೊಂದಿರಬೇಕು ಮತ್ತು ವೃತ್ತಿಯಲ್ಲಿ ಪರಿಣಿತಿ ಹೊಂದಿರಬೇಕು. |
| (ಎಫ್) | ಬೂಟ್ ಮೇಕರ್ | – | 19 | 19 | 10 | 03 | – | 06 | 19 | 02 | – | – | | ಅವಶ್ಯಕ: (ಎ) ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. (ಬಿ) ಎಲ್ಲ ಬಗೆಯ ಕ್ಯಾನವಾಸ್, ಟೆಕ್ಸಟೈಲ್ ಮತ್ತು ಚರ್ಮದ ರಿಪೇರಿ ಮಾಡಲು ಸಮರ್ಥನಿರಬೇಕು. |
| (ಜಿ) | ಲ್ಯಾಸ್ಕರ್ | 07 | – | 07 | 04 | – | – | 03 | 07 | 03 | – | – | ಮೂಲ ವೇತನ : ರೂ. 18000/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ಔದ್ಯಮಿಕೇತರ, ಶಾಸನಾಂಗೇತರ | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. ಅಪೇಕ್ಷಣೀಯ: ಲ್ಯಾಸ್ಕರ್ ಕೆಲಸದ ಸಂಪೂರ್ಣ ಪರಿಚಯದೊಂದಿಗೆ ಸಂಬಂಧಿಸಿದ ವೃತ್ತಿಯಲ್ಲಿ ಒಂದು ವರ್ಷದ ಅನುಭವ. |
| (ಎಚ್) | ಬಹುಕಾರ್ಯದ ಸಿಬ್ಬಂದಿ | | | | | | | | | | | | ಮೂಲ ವೇತನ : ರೂ. 18000/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ಔದ್ಯಮಿಕೇತರ, ಶಾಸನಾಂಗೇತರ | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. ಅಪೇಕ್ಷಣೀಯ: ಕಾವಲುಗಾರ/ತೋಟಗಾರ/ ಸಿವಿಲಿಯನ್ ಮೆಸೆಂಜರ್/ಸಫಾಯಿವಾಲಾ ಕರ್ತವ್ಯಗಳ ಬಗ್ಗೆ ಸಂಪೂರ್ಣ ಅರಿತಿರಬೇಕು ಕಾವಲುಗಾರ/ತೋಟಗಾರ/ಸಿವಿಲಿಯನ್ ಮೆಸೆಂಜರ್/ಸಫಾಯಿವಾಲಾ ಸಂಬಂಧಿಸಿದ ಉದ್ಯೋಗದಲ್ಲಿ ಒಂದು ವರ್ಷದ ಅನುಭವ |
| | (i) ಕಾವಲುಗಾರ | 06 | – | 06 | 02 | – | 01 | 03 | 06 | – | 01(ಓಎಚ್) | | | |
| | (ii) ತೋಟಗಾರ | 02 | – | 02 | – | – | – | 02 | 02 | – | 01(ಪಿಡಿ) | | | |
| | (iii) ಸಿವಿಲ್ ಮೆಸೆಂಜರ್ | 05 | – | 05 | 02 | – | – | 03 | 05 | – | 01(ಪಿಡಿ) | 01 | | |
| | (iv) ಸಫಾಯಿವಾಲಾ | 04 | 43 | 47 | 29 | – | 04 | 14 | 47 | 04 | 02 (ಪಿಬಿ) | – | | |
| (i) | ಅಗಸ | – | 27 | 27 | 05 | 04 | 03 | 15 | 27 | 02 | 01(ಪಿಡಿ) | – | ಮೂಲ ವೇತನ : ರೂ. 18000/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ಔದ್ಯಮಿಕೇತರ, ಶಾಸನಾಂಗೇತರ | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. (ಬಿ) ಸೈನ್ಯ/ನಾಗರಿಕ ಬಟ್ಟೆಗಳನ್ನು ಉತ್ತಮವಾಗಿ ತೊಳೆಯಲು ಸಮರ್ಥನಾಗಿರಬೇಕು. |
| (k) | ಕ್ಷೌರಿಕ | – | 27 | 27 | 04 | 07 | 04 | 12 | 27 | 02 | – | – | | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. ಕ್ಷೌರಿಕ ವೃತ್ತಿಯಲ್ಲಿ ಪರಿಣಿತಿ ಅಪೇಕ್ಷಣೀಯ: ವೃತ್ತಿಯಲ್ಲಿ ಒಂದು ವರ್ಷದ ಅನುಭವ |
| (l) | ಟೇಲರ್ | – | 02 | 02 | 02 | – | – | – | 02 | – | – | – | ಮೂಲ ವೇತನ : ರೂ. 18000/– ಸಾಮಾನ್ಯ ಕೇಂದ್ರ ಸೇವೆಗಳು, ಗ್ರುಪ್ 'ಸಿ', ಔದ್ಯಮಿಕೇತರ, ಶಾಸನಾಂಗೇತರ | ಅವಶ್ಯಕ: ಮಾನ್ಯತೆ ಪಡೆದ ಮಂಡಳಿಯಿಂದ ಮ್ಯಾಟ್ರಿಕ್ಯುಲೇಶನ್ ಅಥವಾ ತತ್ಸಮಾನ. (ಬಿ) ತಮ್ಮ ವೃತ್ತಿಯಲ್ಲಿ ಪರಿಣಿತಿ ಹೊಂದಿರಬೇಕು. |
| | | | ಒಟ್ಟು | 249 | | | | | 249 | | | | | |

ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಪ್ರಕಟಣೆಗೊಂಡ ದಿನವನ್ನೂ ಸೇರಿ 25 ದಿನವು ಹೆಚ್‌ಕ್ಯೂ ಮದ್ರಾಸ್ ಇಂಜಿನಿಯರ್ ಗ್ರೂಪ್ ಮತ್ತು ಬೆಂಗಳೂರು ಕೇಂದ್ರದಲ್ಲಿ ಅರ್ಜಿ ಸ್ವೀಕರಿಸುವ ಅಂತಿಮ/ ಮುಕ್ತಾಯದ ದಿನಾಂಕವಾಗಿರುತ್ತದೆ.

1. ಈ ಕೆಳಗೆ ನಮೂದಿಸಲಾದ ಆಗತ್ಯ ವಿದ್ಯಾರ್ಹತೆ/ವರ್ಗೀಕರಣಗಳನ್ನು ಪೂರೈಸಬಲ್ಲ ಅರ್ಹ ಭಾರತೀಯ ನಾಗರಿಕರಿಂದ, ರಕ್ಷಣಾ ನಾಗರಿಕ ಉದ್ಯೋಗಿಯಾಗಿ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಸಂಪೂರ್ಣ ಭರ್ತಿ ಮಾಡಿದ ಅರ್ಜಿ ನಮೂನೆಯ ಜೊತೆಗೆ ಪತ್ರಾಂಕಿತ ಅಧಿಕಾರಿಯಿಂದ ದೃಢೀಕೃತ ಅಥವಾ ಸ್ವಯಂ ದೃಢೀಕೃತ ಅಗತ್ಯವಿರುವ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ, ಒಂದು ಲಕೋಟೆಯಲ್ಲಿ ಮೊಹರು ಹಾಕಿ ದಿ ಸಿವಿಲಿಯನ್ ಎಸ್ಟಾಬ್ಲಿಷ್‌ಮೆಂಟ್ ಆಫೀಸರ್, ನಾಗರಿಕ ನೇಮಕಾತಿ ಕೋಶ, ಹೆಚ್‌ಕ್ಯೂ ಎಂಇಜಿ ಮತ್ತು ಕೇಂದ್ರ, ಶಿವನ ಚೆಟ್ಟಿ ಗಾರ್ಡನ್ ಅಂಚೆ, ಬೆಂಗಳೂರು - 560 042 ವಿಳಾಸಕ್ಕೆ ರವಾನಿಸತಕ್ಕದ್ದು. ಸದರಿ ಲಕೋಟೆಯ ಮೇಲೆ ದಪ್ಪಕ್ಷರಗಳಲ್ಲಿ ''ನಾಗರಿಕ ನೇರ ನೇಮಕಾತಿ ಅಡಿಯಲ್ಲಿ............ ಹುದ್ದೆಗೆ ಅರ್ಜಿ'' ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಸದರಿ ಲಕೋಟೆಯನ್ನು ನೊಂದಾಯಿತ ಅಂಚೆ ಮೂಲಕ ತಲುಪಿಸಬಹುದು ಅಥವಾ ಹೆಚ್‌ಕ್ಯೂ ಎಂಇಜಿ ಮತ್ತು ಕೇಂದ್ರ, ಬೆಂಗಳೂರಿನ ಮುಖ್ಯದ್ವಾರದ ಸ್ವಾಗತ ಕಕ್ಷೆಯಲ್ಲಿ ಇರಿಸಲಾದ 'ಡ್ರಾಪ್ ಬಾಕ್ಸ್'ನಲ್ಲಿ ಹಾಕಬಹುದು.

*ಸೂಚನೆ: ಇಲ್ಲಿ ನೀಡಲಾದ ವೇತನದ ವಿವರಗಳು ಅಂದಾಜು ಆಗಿರುತ್ತವೆ.*

**ಸಂಕ್ಷಿಪ್ತ ಪದಗಳ ವಿವರ:** ಜಿಇಎನ್ - ಜನರಲ್. ಎಸ್‌ಸಿ-ಷೆಡ್ಯೂಲ್ಡ್ ಕಾಸ್ಟ್. ಎಸ್‌ಟಿ - ಷೆಡ್ಯೂಲ್ ಟ್ರೈಬ್. ಒಬಿಸಿ - ಅದರ್ ಬ್ಯಾಕ್‌ವಾರ್ಡ್ ಕ್ಲಾಸಸ್. ಇಎಸ್‌ಎಂ - ಎಕ್ಸ್-ಸರ್ವೀಸ್‌ಮನ್, ಎಂಎಸ್‌ಪಿ - ಮೆರಿಟೋರಿಯಸ್ ಸ್ಪೋರ್ಟ್ಸ್ ಪರ್ಸನ್ ಪಿಹೆಚ್(ಪಿಡಿ) - ಫಿಜಿಕಲಿ ಹ್ಯಾಂಡಿಕ್ಯಾಪ್ಡ್(ಪಾರ್ಶಿಯಲಿ ಡೆಫ್), ಪಿಹೆಚ್ (ಒಹೆಚ್) - ಫಿಜಿಕಲಿ ಹ್ಯಾಂಡಿಕ್ಯಾಪ್ಡ್(ಆರ್ಥೋಪೆಡಿಕಲಿ) ಹ್ಯಾಂಡಿಕ್ಯಾಪ್ಡ್). ಪಿಹೆಚ್ (ಪಿಬಿ) - ಫಿಜಿಕಲಿ ಹ್ಯಾಂಡಿಕ್ಯಾಪ್ಡ್ (ಪಾರ್ಶಿಯಲಿ ಬ್ಲೈಂಡ್). ಎಲ್ಲಾ ಪಿಹೆಚ್ ಅಭ್ಯರ್ಥಿಗಳು 40% ಅಥವಾ ಅದಕ್ಕೂ ಹೆಚ್ಚಿನ ವೈಕಲ್ಯತೆ ಹೊಂದಿರುವುದು ಕಡ್ಡಾಯ.

2. ಮೇಲ್ಕಾಣಿಸಿದ ಖಾಲಿ ಹುದ್ದೆಗಳ ಸಂಖ್ಯೆಗಳು, ಇಎಸ್‌ಎಂ/ಪಿಹೆಚ್/ ಸ್ಪೋರ್ಟ್ಸ್ ಪರ್ಸನ್ ಸೇರಿದಂತೆ ಎಲ್ಲಾ ಕೆಟಗರಿವೈಸ್ ಖಾಲಿ ಹುದ್ದೆಗಳ ಸಂಖ್ಯೆಗಳು ತಾತ್ಕಾಲಿಕವಾಗಿರುತ್ತವೆ ಮತ್ತು ಯಾವುದೇ ಸೂಚನೆ ನೀಡದೆಯೇ ಹೆಚ್ಚಾಗುವ ಅಥವಾ ಕಡಿಮೆಯಾಗುವ ನಿಬಂಧನೆಗೆ ಒಳಪಟ್ಟಿರುತ್ತವೆ. ನಿರೀಕ್ಷಿತ ಖಾಲಿ ಹುದ್ದೆಗಳ ಎದುರು ಲಭ್ಯವಿರುವ ಎನ್‌ಎಸಿ ಲಭ್ಯತೆ ಮೇರೆಗೆ ಮಾತ್ರ ಭರ್ತಿ ಮಾಡಲಾಗುತ್ತದೆ. ಎಲ್ಲಾ ಖಾಲಿಹುದ್ದೆ/ಹುದ್ದೆಗಳು 'ಅಖಿಲ ಭಾರತ ಸೇವಾ ಹೊಣೆಗಾರಿಕೆ' ನಿಬಂಧನೆಗಳಿಗೆ ಳಪಟ್ಟಿರುತ್ತವೆ.
3. ಎಸ್‌ಸಿ/ಎಸ್‌ಟಿ/ಒಬಿಸಿ/ಇಎಸ್‌ಎಂ/ಪಿಹೆಚ್/ಮೆರಿಟೋರಿಯಸ್ ಸ್ಪೋರ್ಟ್ಸ್ ಪರ್ಸನ್ ಮೀಸಲಾತಿಗಳನ್ನು, ಪ್ರಸ್ತು ಚಾಲ್ತಿಯಲ್ಲಿರುವ ಭಾರತ ಸರ್ಕಾರದ ನಿಯಮಗಳ ಮೇರೆಗೆ ನಿಯಂತ್ರಿಸಲಾಗುತ್ತದೆ.
4. ಅವಶ್ಯಕವಾದ ಅರ್ಜಿ ಫಾರಂಗಳು, ಇತರೆ ನಮೂನೆ/ಪಾರಂಗಳು, ಸಾಮಾನ್ಯ ಸೂಚನೆಗಳು, ಅಗತ್ಯ ದಾಖಲಾತಿಗಳ ಕುರಿತ ವಿವರಗಳು ''ಭಾರತೀಯ ಸೇನೆ''ಯ ವೆಬ್‌ಸೈಟ್ "http://indianarmy.nic.in ನಲ್ಲಿ ಲಭ್ಯವಿರುತ್ತವೆ. ಇವುಗಳನ್ನು ಪರಿಶೀಲಿಸಬಹುದು ಮತ್ತು ಡೌನ್‌ಲೋಡ್ ಕೂಡ ಮಾಡಿಕೊಳ್ಳಬಹುದು. ಆದಾಗ್ಯೂ, ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಲ್ಲಿಸುವುದಕ್ಕೂ / ಭರ್ತಿ ಮಾಡುವುದಕ್ಕೂ ಮುನ್ನ ಸಾಮಾನ್ಯ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು.
5. ಭರ್ತಿ ಮಾಡಿದ ಅಡ್ಮಿಟ್ ಕಾರ್ಡ್ ನಕಲುಪ್ರತಿ, ದೃಢೀಕೃತ ಭಾವಚಿತ್ರ, ಸಿವಿಲ್ ಶೈಕ್ಷಣಿಕ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸದೇ ಇರುವ ಅಥವಾ ಅಪೂರ್ಣ ಅರ್ಜಿ ಫಾರಂ/ಕಡ್ಡಾಯ ಫಾರಂಗಳು/ ಪ್ರಮಾಣ ಪತ್ರ ಮತ್ತು ಅಥವಾ ಮೇಲ್ಕಾಣಿಸಿದ ಅಗತ್ಯತೆಗಳಿಗೆ ಪೂರಕವಾಗಿಲ್ಲದಿರುವ ಅರ್ಜಿಗಳನ್ನು ಅಭ್ಯರ್ಥಿಗಳಿಗೆ ಯಾವುದೇ ಸೂಚನೆ ನೀಡದೆಯೇ ಮುಲಾಜಿಲ್ಲದೆ ತಿರಸ್ಕರಿಸಲಾಗುತ್ತದೆ ಮತ್ತು ಈ ಕುರಿತು ಅಭ್ಯರ್ಥಿಗಳು ವಿಚಾರಣೆ ನಡೆಸಲು ಬಾಧ್ಯಸ್ಥರಾಗಿರುವುದಿಲ್ಲ.
6. ಮೇಲಿನ ಪ್ಯಾರಾ 1ರಲ್ಲಿ ಉಲ್ಲೇಖಿಸಿದಂತೆ ಎಲ್ಲಾ ಕೆಟಗರಿಗಳು/ ಟ್ರೇಡ್‌ಗಳಿಗೆ ನೀಡಲಾಗುವ ಪ್ರಶ್ನೆಪತ್ರಿಕೆ ಕಂ ಉತ್ತರ ಪತ್ರಿಕೆಯ ಭಾಷೆ. ಲಿಖಿತ ಪರೀಕ್ಷೆಯ ಪ್ರಶ್ನೆಪತ್ರಿಕೆ ಕಂ ಉತ್ತರ ಪತ್ರಿಕೆಯ ದ್ವಿಭಾಷೆಯಲ್ಲಿರುತ್ತದೆ. ಎಂದರೆ., ಇಂಗ್ಲೀಷ್ ಮತ್ತು ಹಿಂದಿ. ಆದಾಗ್ಯೂ, ಇಂಗ್ಲೀಷ್ ಭಾಷೆಯ ವಿಭಾಗಕ್ಕೆ ಸಂಬಂಧಿತ ಪ್ರಶ್ನೆಯು ಇಂಗ್ಲೀಷ್‌ನಲ್ಲಿಯೇ ಇರುತ್ತದೆ.
7. ಎಲ್ಲಾ ಹುದ್ದೆಗಳ ಲಿಖಿತ ಪರೀಕ್ಷೆಯನ್ನು ಒಂದೆ ದಿನ ಏಕಕಾಲದಲ್ಲಿ ನಡೆಸಬಹುದಾಗಿರುತ್ತದೆ. ಆದಾಗ್ಯೂ, ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ತಮ್ಮ ವಿವೇಚನೆಯ ಮೇರೆಗೆ ಪ್ರತಿಯೊಂದು ಹುದ್ದೆಗೆ ಪ್ರತ್ಯೇಕ ಅರ್ಜಿ ಸಲ್ಲಿಸತಕ್ಕದ್ದು. ಎಂಟಿಎಸ್ ಕೆಟಗರಿಯಲ್ಲಿ ನೀಡಲಾದ ಯಾವುದಾದರೂ ಒಂದು ಹುದ್ದೆಗೆ/ ಟ್ರೇಡ್‌ಗೆ ಅಭ್ಯರ್ಥಿಯು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಎಂದರೆ., ವಾಚ್‌ಮನ್ ಅಥವಾ ಗಾರ್ಡನರ್ ಅಥವಾ ಸಿವಿಲ್ ಮೆಸೆಂಜರ್ ಅಥವಾ ಸಫಾಯಿವಾಲಾ.

**8. ಆಯ್ಕೆ ಪ್ರಕ್ರಿಯೆ:**

(ಎ) ಈ ಜಾಹೀರಾತಿಗೆ ಪ್ರತಿಕ್ರಿಯಿಸಿ ಭಾರಿ ಪ್ರಮಾಣದಲ್ಲಿ ಅರ್ಜಿಗಳು ಸಂದಾಯವಾದಲ್ಲಿ, ಇಲಾಖೆಯು ಎಲ್ಲಾ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ ಹಾಜರಾಗಲು ಕರೆ ನೀಡಲು ಸಾಧ್ಯವಾಗಲಿಕ್ಕಿಲ್ಲ ಮತ್ತು ಅಥವಾ ಅನುಕೂಲವಾಗಲಿಕ್ಕಿಲ್ಲ. ಆದ್ದರಿಂದ, ಅಗತ್ಯ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಮೆರಿಟ್ ಆಧಾರದಲ್ಲಿ, ಇಲಾಖೆಯು ತನ್ನ ವಿವೇಚನೆಯ ಮೇರೆಗೆ ಲಿಖಿತ ಪರೀಕ್ಷೆಗೆ ಕರೆಯಲಾಗುವ ಅಭ್ಯರ್ಥಿಗಳ ಸಂಖ್ಯೆಗಳಿಗೆ ಒಂದು ನಿಗದಿತ ಮಿತಿ ವಿಧಿಸಬಹುದಾಗಿರುತ್ತದೆ. ಗ್ರೇಡಿಂಗ್ ವ್ಯವಸ್ಥೆಯ ಸಂದರ್ಭದಲ್ಲಿ, ಅಭ್ಯರ್ಥಿಗಳು ತಮಗೆ ಸಂಬಂಧಿಸಿದ ಮಂಡಳಿ/ಸಂಸ್ಥೆಯಿಂದ ಇತ್ತೀಚೆಗಷ್ಟೇ ಅನುಮೋದಿಸಲ್ಪಟ್ಟ ಕನ್ವರ್ಷನ್ ಫಾರ್ಮುಲಾ ಹಾಜರುಪಡಿಸತಕ್ಕದ್ದು.

(ಬಿ) ಆಯ್ಕೆ ಪ್ರಕ್ರಿಯೆಯಲ್ಲಿ ಲಿಖಿತ ಪರೀಕ್ಷೆ ಮತ್ತು ಕೌಶಲ್ಯ ಪರೀಕ್ಷೆ ಕೂಡ ಅಡಕವಾಗಿರುತ್ತವೆ. ಎಲ್ಲಾ ಕೆಟಗರಿಯ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಕೌಶಲ್ಯ ಪರೀಕ್ಷೆಗೆ ಹಾಜರಾಗುವಂತೆ ಕರೆಪತ್ರ ನೀಡಲಾಗುತ್ತದೆ. ಆಯ್ಕೆ ಪ್ರಕ್ರಿಯೆಯ ಪ್ರಾಥಮಿಕ ಹಂತವನ್ನು ಪೂರೈಸಿದ ಮಾತ್ರಕ್ಕೆ ಅಭ್ಯರ್ಥಿಯು ತನಗೆ ಕೌಶಲ್ಯ ಪರೀಕ್ಷೆಗೆ ಹಾಜರಾಗಲು ಕರೆ ನೀಡಲಾಗುತ್ತದೆ ಎಂದು ಸ್ವಯಂ ಭಾವಿಸತಕ್ಕದ್ದಲ್ಲ. ಅಭ್ಯರ್ಥಿಗಳು ಎದುರಿಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್/ಅಂಕಗಳ ಆಧಾರದ ಮೇರೆಗೆ, ಖಾಲಿ ಹುದ್ದೆಗಳ ಸಂಖ್ಯೆಗಳ 10 ಪಟ್ಟು ಅಭ್ಯರ್ಥಿಗಳನ್ನು ಮಾತ್ರ ಕೌಶಲ್ಯ ಪರೀಕ್ಷೆಗೆ ಕರೆಯಬಹುದಾದ ಅಭ್ಯರ್ಥಿಗಳ ಸಂಖ್ಯೆಯನ್ನು ಸೀಮಿತಗೊಳಿಸಬಹುದಾಗಿರುತ್ತದೆ.

(ಸಿ) ಎಲ್‌ಡಿಸಿ ಹುದ್ದೆಗೆ ಮಾತ್ರ ಎಲ್‌ಡಿಸಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಕೌಶಲ್ಯ ಪರೀಕ್ಷೆಯಾಗಿ ಕಂಪ್ಯೂಟರ್‌ನಲ್ಲಿ ಟೈಪಿಂಗ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ.

(ಡಿ) ಕೌಶಲ್ಯ ಪರೀಕ್ಷೆ/ಟ್ರೇಡ್ ಪರೀಕ್ಷೆಯು ಅರ್ಹತಾ ಸ್ವರೂಪದ್ದಾಗಿರುತ್ತದೆ ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇರೆ ಮಾತ್ರ ಸರಾಸರಿ ಮೆರಿಟ್‌ನ್ನು ಪರಿಗಣಿಸಲಾಗುತ್ತದೆ. ಇನ್ನು, ಮೆರಿಟೋರಿಯಸ್ ಸ್ಪೋರ್ಟ್ಸ್ ಪರ್ಸನ್‌ಗಳ ಖಾಲಿಹುದ್ದೆ/ ಹುದ್ದೆಗಳಿಗೆ ಸಂಬಂಧಿಸಿದ ಕೌಶಲ್ಯ ಪರೀಕ್ಷೆಯಲ್ಲಿ, ಕ್ರೀಡಾ ಪ್ರಯೋಗಗಳು ಮತ್ತು ಸಂಬಂಧಿತ ಕ್ರೀಡೆಯಲ್ಲಿನ ಸಾಧನೆಗಳು (ಗಳಿಸಿದ ಪದಕಗಳು ಮತ್ತು ವಿವಿಧ ಮಟ್ಟಗಳಲ್ಲಿ ಪಾಲ್ಗೊಳ್ಳುವಿಕೆ) ಅಡಕಗೊಂಡಿರುತ್ತವೆ ಮತ್ತು ನೇಮಕಾತಿ ಪ್ರಾಧಿಕಾರದ ವಿವೇಚನೆಯ ಮೇರೆಗೆ ಲಿಖಿತ ಪರೀಕ್ಷೆ ಮತ್ತು ಕೌಶಲ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಪಡೆದ ಮೆರಿಟ್‌ನ್ನು ಒಳಗೊಂಡಿರುತ್ತವೆ.

*ಸೂಚನೆ: ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಮೇಲ್ಕಾಣಿಸಿದ ಪ್ಯಾರಾ 4ರಲ್ಲಿ ನೀಡಲಾದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಅರ್ಜಿ ತಿರಸ್ಕಾರ, ಲಿಖಿತ/ಕೌಶಲ್ಯ ಪರೀಕ್ಷೆಯಲ್ಲಿನ ವಿಫಲತೆ, ಮೆರಿಟ್ ಪಟ್ಟಿಗೆ ಸೇರದಿರುವ ಅಥವಾ ಇನ್ನಿತರ ಯಾವುದೇ ಮಾಹಿತಿ ಕುರಿತಾದ ವಿಚಾರಣೆಗಳನ್ನು ಪರಿಗಣಿಸಲಾಗುವುದಿಲ್ಲ.*

**9. ವಯೋಮಿತಿ:**

(ಎ) ಎಲ್ಲಾ ಹುದ್ದೆಗಳಿಗೂ 18-25 ವರ್ಷಗಳು, (ಬಿ) ಈ ಜಾಹೀರಾತು ಪ್ರಕಟಣೆಗೊಂಡ ದಿನವನ್ನು 1ನೇ ದಿನವೆಂದು ಪರಿಗಣಿಸುತ್ತ, ಪ್ರಕಟಗೊಂಡ ದಿನಾಂಕದಿಂದ ಅರ್ಜಿ ಸ್ವೀಕರಿಸುವ ಅಂತಿಮ/ ಮುಕ್ತಾಯದ ದಿನಾಂಕದವರೆಗಿನ 27ನೇ ದಿನವು ವಯೋಮಿತಿಯನ್ನು ಇತ್ಯರ್ಥ್ಯಗೊಳಿಸುವ ನಿರ್ಣಾಯಕ ದಿನಾಂಕವಾಗಿರುತ್ತದೆ. ಉದಾ: ಎಂಪ್ಲಾಯ್‌ಮೆಂಟ್ ನ್ಯೂಸ್ (ಇದೊಂದು ವಾರಪತ್ರಿಕೆ) ಪತ್ರಿಕೆಯಲ್ಲಿ 20 ನವೆಂಬರ್ 2016 ರಿಂದ ನವೆಂಬರ್ 2016ನೇ ವಾರದ ಆವೃತ್ತಿಯಲ್ಲಿ ಪ್ರಕಟಗೊಂಡಿದ್ದರೆ, ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವಯೋಮಿತಿ ಇತ್ಯರ್ಥಗೊಳಿಸುವ ನಿರ್ಣಾಯಕ ದಿನಾಂಕವು 16 ಡಿಸೆಂಬರ್ 2016 ರಂದು ಲೇಯರ್ ಪ್ರಮಾಣಪತ್ರ ಹಾಜರುಪಡಿಸುವುದು ಕೂಡ ಕಡ್ಡಾಯ. (ಡಿ) ಅರ್ಜಿ ಸಲ್ಲಿಕೆಯ ದಿನಾಂಕದಂದು ಲಭ್ಯವಿರುವ, ಮೆಟ್ರಿಕ್ಯೂಲೇಶನ್/ಸೆಕೆಂಡರಿ ಎಕ್ಸಾಮಿನೇಶನ್ ಸರ್ಟಿಫಿಕೇಟ್‌ನಲ್ಲಿ ಅಥವಾ ತತ್ಸಮಾನ ಪ್ರಮಾಣ ಪತ್ರದಲ್ಲಿ ದಾಖಲಾಗಿರುವ ಜನ್ಮ ದಿನಾಂಕವನ್ನೇ ಹೆಚ್‌ಕ್ಯೂ ಎಂಇಜಿ ಮತ್ತು ಕೇಂದ್ರ, ಬೆಂಗಳೂರು ಇವರಿಂದ ವಯಸ್ಸು ಮತ್ತು ಅರ್ಹತೆ ಇತ್ಯರ್ಥಗೊಳಿಸಲು ಸ್ವೀಕರಿಸಲ್ಪಡುತ್ತದೆ ಮತ್ತು ಈ ಕುರಿತು ಬದಲಾವಣೆಗಾಗಿ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಅಥವಾ ಪುರಸ್ಕರಿಸಲಾಗುವುದಿಲ್ಲ. (ಇ) ಮಾಜಿ ಯೋಧರಿಗೆ ಮಾತ್ರ ಡಿಸ್ಚಾರ್ಜ್ ಪುಸ್ತಕ ಮತ್ತು ಪಿಪಿಓ ಗಳಲ್ಲಿ ದಾಖಲಾದ ಜನ್ಮದಿನಾಂಕವನ್ನೇ ಅಂತಿಮ ಎಂದು ಪರಿಗಣಿಸಲಾಗುತ್ತದೆ.

**10. ಅಡ್ಮಿಟ್ ಕಾರ್ಡ್:**

ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಮತ್ತು ಕೌಶಲ್ಯ ಪರೀಕ್ಷೆಗೆ ಹಾಜರಾಗಲು, ಎಂಇಜಿ ಮತ್ತು ಕೇಂದ್ರ ನೀಡಿದ ತಮ್ಮ ಅಡ್ಮಿಟ್ ಕಾರ್ಡ್‌ನ್ನು ಕಡ್ಡಾಯವಾಗಿ ಜೊತೆಯಲ್ಲಿ ತೆಗೆದುಕೊಂಡು ಬಂದಿರತಕ್ಕದ್ದು. ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳನ್ನು ಸದರಿ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿಸಲಾಗುವುದಿಲ್ಲ.

# ಮುಂಬೈ ಐಐಟಿಯಲ್ಲಿ ಸಂಶೋಧಕ ಹುದ್ದೆಗಳು

ಮುಂಬೈನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ-ಮುಂಬೈ) ಇಂಡಸ್ಟ್ರಿಯಲ್ ರಿಸರ್ಚ್ ಆ್ಯಂಡ್ ಕನ್ಸಲ್ಟನ್ಸಿ ಸೆಂಟರ್‌ನಲ್ಲಿ, ಒಂದು ವರ್ಷದ ಅವಧಿಯ ಪ್ರಾಜೆಕ್ಟ್ ನಿರ್ವಹಣೆಗಾಗಿ ವಿವಿಧ ಸಂಶೋಧಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಇಂಜಿನಿಯರಿಂಗ್ ಪದವಿ/ಸ್ನಾತಕೋತ್ತರ ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳ ವಿಂಗಡಣೆ:**
  - ಸೀನಿಯರ್ ಪ್ರಾಜೆಕ್ಟ್ ರಿಸರ್ಚ್ ಸೈಂಟಿಸ್ಟ್ - 1
  - ಸೀನಿಯರ್ ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್ - 8
  - ಪ್ರಾಜೆಕ್ಟ್ ಸಾಫ್ಟ್‌ವೇರ್ ಇಂಜಿನಿಯರ್ - 5
  - ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್ - 4
  - ಪ್ರಾಜೆಕ್ಟ್ ಮ್ಯಾನೇಜರ್ - 1
  - ಪ್ರಾಜೆಕ್ಟ್ ರಿಸರ್ಚ್ ಸೈಂಟಿಸ್ಟ್ - 2
  - ಅಸಿಸ್ಟೆಂಟ್ ಪ್ರಾಜೆಕ್ಟ್ ಮ್ಯಾನೇಜರ್ - 2
  - ಪ್ರಾಜೆಕ್ಟ್ ಅಸಿಸ್ಟೆಂಟ್ - 4
  - ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್ (ಡಿಸೈನ್) - 2
- **ವೇತನ:**
  ಸೀನಿಯರ್ ಪ್ರಾಜೆಕ್ಟ್ ರಿಸರ್ಚ್ ಸೈಂಟಿಸ್ಟ್ ಹುದ್ದೆಗೆ ರೂ. 67,000-91,000. ಸೀನಿಯರ್ ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್ ಹುದ್ದೆಗೆ ರೂ. 30,000-42,000. ಪ್ರಾಜೆಕ್ಟ್ ಸಾಫ್ಟ್‌ವೇರ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಪ್ರಾಜೆಕ್ಟ್ ಮ್ಯಾನೇಜರ್ ಹುದ್ದೆಗಳಿಗೆ ರೂ. 40,000-56,000. ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್, ಪ್ರಾಜೆಕ್ಟ್ ಅಸಿಸ್ಟೆಂಟ್ ಮತ್ತು ಪ್ರಾಜೆಕ್ಟ್ ಟೆಕ್ನಿಕಲ್ ಅಸಿಸ್ಟೆಂಟ್ (ಡಿಸೈನ್) ಹುದ್ದೆಗಳಿಗೆ ರೂ. 18,000-26,000. ಪ್ರಾಜೆಕ್ಟ್ ಮ್ಯಾನೇಜರ್ ಮತ್ತು ಪ್ರಾಜೆಕ್ಟ್ ರಿಸರ್ಚ್ ಸೈಂಟಿಸ್ಟ್ ಹುದ್ದೆಗಳಿಗೆ ರೂ. 50,000-70,000.
- **ಅರ್ಹತೆ:**
  ಹುದ್ದೆಗಳಿಗೆ ಅನುಗುಣವಾಗಿ ಎಂಇ/ಎಂ.ಟೆಕ್/ಎಂಎಸ್/ ಎಂ.ಎಸ್ಸಿ/ಎಂಸಿಎ/ಬಿಇ/ಬಿ.ಟೆಕ್./ಬಿಎ/ಬಿಎಸ್ಸಿ/ಬಿ.ಕಾಂ. ವಿದ್ಯಾರ್ಹತೆ ಜತೆಗೆ ಸಂಬಂಧಿತ ಕ್ಷೇತ್ರದಲ್ಲಿ 3/4 ವರ್ಷಗಳ ಕಾರ್ಯಾನುಭವ ಕೇಳಲಾಗಿದೆ.
- **ಅರ್ಜಿ ಸಲ್ಲಿಸುವ ವಿಧಾನ:**
  ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅಗತ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬೇಕು.
- **ನೇಮಕಾತಿ ವಿಧಾನ:**
  ನೇರ ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದ್ದು, ಇದರಲ್ಲಿ ಜ್ಞಾನ ಹಾಗೂ ಕಾರ್ಯಾನುಭವವನ್ನು ಮುಖ್ಯವಾಗಿ ಪರಿಗಣಿಸಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನ: 31-1-2017.**
  ವೆಬ್‌ಸೈಟ್: www.ircc.iitb.ac.in

## ಕಂದಾಯ ಇಲಾಖೆ, ಮೈಸೂರು ಜಿಲ್ಲೆ

# ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು ಜಿಲ್ಲಾ ಕಂದಾಯ ಘಟಕದ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಗ್ರೂಪ್ ಸಿ ವೃಂದದ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2016-17ನೇ ಸಾಲಿನಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳ ನೇಮಕಾತಿ ಸಂಬಂಧದ ವಿವರ ಈ ಕೆಳಕಂಡಂತೆ ಇರುತ್ತದೆ.

1. ಹುದ್ದೆ ಹೆಸರು : ಗ್ರಾಮ ಲೆಕ್ಕಿಗರು
2. ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ : 105 ಹುದ್ದೆಗಳು
3. ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ : 04 ಹುದ್ದೆಗಳು
4. ಒಟ್ಟು ಹೊಸ ಹುದ್ದೆಗಳ ಸಂಖ್ಯೆ : 109 ಹುದ್ದೆಗಳು
6. ಹುದ್ದೆಯ ಮೀಸಲಾತಿ ವರ್ಗೀಕರಣ: ಮೈಸೂರು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳು - 101 04 = 105 (ಬ್ಯಾಕ್‌ಲಾಗ್ ಹುದ್ದೆಗಳು ಸೇರಿ)

| ಕ್ರ.ಸಂ. | ವರ್ಗೀಕರಣ | ಹಿಂಬಾಕಿ (ಪಜಾ) | ಪ.ಜಾ. | ಪ.ಪಂ. | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಸಾ.ಅ. | ಒಟ್ಟು |
|---|---|---|---|---|---|---|---|---|---|---|---|
| 1. | ಸಾಮಾನ್ಯ | 1 | 3 | 0 | 0 | 2 | 0 | 0 | 0 | 9 | 15 |
| 2. | ಮಹಿಳೆ | 0 | 5 | 2 | 2 | 5 | 2 | 2 | 1 | 16 | 35 |
| 3. | ಗ್ರಾಮೀಣ | 2 | 4 | 0 | 1 | 4 | 1 | 1 | 2 | 12 | 27 |
| 4. | ಮಾಜಿ ಸೈನಿಕ | 0 | 2 | 1 | 0 | 2 | 0 | 0 | 0 | 5 | 10 |
| 5. | ಕನ್ನಡ ಮಾಧ್ಯಮ | 0 | 1 | 0 | 1 | 1 | 1 | 1 | 1 | 3 | 9 |
| 6. | ಯೋ. ನಿರಾಶ್ರಿತ | 1 | 0 | 0 | 0 | 0 | 0 | 0 | 1 | 3 | 5 |
| 7. | ಅಂಗವಿಕಲ | 0 | 1 | 0 | 0 | 1 | 0 | 0 | 0 | 2 | 4 |
| | ಒಟ್ಟು | 4 | 16 | 3 | 4 | 15 | 4 | 4 | 5 | 50 | 105 |

★ ರೋಸ್ಟರ್ ಬಿಂದು (Vertical) : 59 ರಿಂದ ಪ್ರಾರಂಭಿಸಲಾಗಿದೆ.

★ ಅಂಗವಿಕಲ ಮೀಸಲಾತಿ ಅಂದರೆ :
- ಪರಿಶಿಷ್ಟ ಜಾತಿ - ಶ್ರವಣದೋಷ (Hearing Impaired)
- ಪ್ರವರ್ಗ 2 ಎ - ಚಲನವಲನ ವೈಕಲ್ಯ (Locomotor Disability)
- ಸಾಮಾನ್ಯ ಅಭ್ಯರ್ಥಿ
  1) ಶ್ರವಣ ದೋಷ (Hearing Impaired)
  2) ಚಲನವಲನ ವೈಕಲ್ಯ (Locomotor Disability)

**8. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : 15-12-2016**

**9. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 14-01-2017 ರಂದು (ಸಂಜೆ 5-30 ಗಂಟೆವರೆಗೆ)**

**10. ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ :** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಇವರು ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.

ಮೇಲ್ಕಂಡ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇನ್ನಿತರ ಯಾವುದೇ ತತ್ಸಮಾನ ವಿದ್ಯಾರ್ಹತೆಗಳನ್ನು ಹಾಗೂ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ವಿದ್ಯಾರ್ಹತೆಯನ್ನು ಈ ಹುದ್ದೆಗೆ ಪರಿಗಣಿಸಲಾಗುವುದಿಲ್ಲ.

ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು.

**11. ಹುದ್ದೆಗೆ ನಿಗದಿಪಡಿಸಿರುವ ವೇತನ ಶ್ರೇಣಿ:** ರೂ. 11600-200-12000-250-13000-300-14200-350-15600-400-17200-450-19000-500-21000

**12. ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ:**

| ಕ್ರ.ಸಂ. | ಮೀಸಲಾತಿ | ವಯೋಮಿತಿ |
|---|---|---|
| 1. | ಸಾಮಾನ್ಯ | 18 ರಿಂದ 35 ವರ್ಷ |
| 2. | ಪ್ರವರ್ಗ-2ಎ, 2ಬಿ, 3ಎ, 3ಬಿ | 18 ರಿಂದ 38 ವರ್ಷ |
| 3. | ಪ್ರವರ್ಗ-1, ಪ.ಜಾ., ಪ.ಪಂ. | 18 ರಿಂದ 40 ವರ್ಷ |

**13. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಶುಲ್ಕ:**

| ಕ್ರ.ಸಂ. | ಮೀಸಲಾತಿ ವರ್ಗ | ಶುಲ್ಕ | ಪಾವತಿಸುವ ವಿಧಾನ |
|---|---|---|---|
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 | ರೂ. 100/- | ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ, ಆನ್‌ಲೈನ್ ನಲ್ಲಿರುವ ಚಲನ್ ಮೂಲಕ ಜಮಾ ಮಾಡತಕ್ಕದ್ದು. |
| 2. | ಇತರೆ ಅಭ್ಯರ್ಥಿಗಳು | ರೂ. 200/- | |
| 3. | ಬ್ಯಾಂಕ್ ಶುಲ್ಕ | ರೂ. 30/- | |

**14. ಹುದ್ದೆಯ ಆಯ್ಕೆ ವಿಧಾನ :** ಅಭ್ಯರ್ಥಿಯು ದ್ವಿತೀಯ ಪಿಯುಸಿ/ಸಿಬಿಎಸ್‌ಇ/ಐಸಿಎಸ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಮೆರಿಟ್ ಆಧಾರದಲ್ಲಿ ಮೀಸಲಾತಿಗೆ ಅನುಗುಣವಾಗಿ ಸರ್ಕಾದ ಅಧಿಸೂಚನೆ ಸಂಖ್ಯೆ ಆರ್‌ಡಿ 299 ಬಿಎಸ್‌ಸಿ 2009 ರನ್ವಯ ಆಯ್ಕೆ ಮಾಡಲಾಗುವುದು.

**15. ಹುದ್ದೆಗೆ ಆಯ್ಕೆ ಮಾಡಲು ನಿಬಂಧನೆಗಳು:**

1) ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸುವುದು. ಕಂಪ್ಯೂಟರ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿದ ತರುವಾಯ ಅಭ್ಯರ್ಥಿಯು ಚಲನ್‌ಅನ್ನು ಪಡೆದು ಸಂಬಂಧಿಸಿದ ಬ್ಯಾಂಕಿನಲ್ಲಿ ಪಾವತಿಸಿ ಚಲನ್ ಸಂಖ್ಯೆ ಹಾಗೂ ದಿನಾಂಕವನ್ನು ನಮೂದಿಸಿದ ನಂತರವೇ ಅರ್ಜಿಯು ಸ್ವೀಕೃತವಾಗುವುದು.

2) ಅಭ್ಯರ್ಥಿಯು ಅರ್ಜಿ ಶುಲ್ಕವನ್ನು ಬ್ಯಾಂಕ್‌ನಲ್ಲಿ ಚಲನ್ ಮೂಲಕ ಪಾವತಿಸಿ ಚಲನ್ ಸಂಖ್ಯೆ ಹಾಗೂ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ನಮೂದಿಸದಿದ್ದಲ್ಲಿ ಅರ್ಜಿಯು ಸ್ವಯಂಕೃತವಾಗಿ ತಿರಸ್ಕೃತಗೊಳ್ಳುತ್ತದೆ. ಅಂತಹ ಅರ್ಜಿಗೆ ನೇಮಕಾತಿ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

3) ಅಭ್ಯರ್ಥಿಯು ಅರ್ಜಿ ಶುಲ್ಕವನ್ನು ಬ್ಯಾಂಕ್‌ನಲ್ಲಿ ದಿನಾಂಕ: 17-01-2017ರಂದು Bank Transaction Time®ÜÈÉ ಪಾವತಿಸಲು ಅಂತಿಮ ದಿನಾಂಕವಾಗಿರುತ್ತದೆ. ತದನಂತರ ಅರ್ಜಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.

4) ಅರ್ಜಿಯನ್ನು ಆನ್‌ಲೈನ್ ಮೂಲಕವೇ ಸಲ್ಲಿಸತಕ್ಕದ್ದು. ಆನ್‌ಲೈನ್ ವಿಳಾಸ www.mysore-va.kar.nic.in or www.mysore.nic.in ರಿಂದ ಲಭ್ಯವಿರುತ್ತದೆ ಮತ್ತು ದಿನಾಂಕ: 14-01-2017ರ ಸಂಜೆ 5.30ಗಂಟೆವರೆಗೆ ಮಾತ್ರ ಲಭ್ಯವಾಗುವುದು. ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ವಿಧದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಯಾವುದೇ ಮುನ್ಸೂಚನೆ ನೀಡದೇ ವಿಲೇ ನೀಡಲಾಗುವುದು.

5) ಅಭ್ಯರ್ಥಿಯು ಎಲ್ಲಾ ಪ್ರಮಾಣ ಪತ್ರಗಳನ್ನು ಮತ್ತು ಅಂಕಪಟ್ಟಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.

6) ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಇಲಾಖಾ ಮುಖ್ಯಸ್ಥರು ನೀಡಿರುವ ನಿರಾಪೇಕ್ಷಣಾ ಪತ್ರವನ್ನು ಹೊಂದಿರತಕ್ಕದ್ದು.

7) ಅಭ್ಯರ್ಥಿಯ ಜನ್ಮ ದಿನಾಂಕವನ್ನು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ಆಧಾರದ ಮೇಲೆ ಸಲ್ಲಿಸತಕ್ಕದ್ದು.

8) ಮಾಜಿ ಸೈನಿಕ ಮೀಸಲಾತಿ ಹುದ್ದೆಗೆ ಸಂಬಂಧಿಸಿದಂತೆ, ಸೈನಿಕ ಸೇವೆಯಿಂದ ಬಿಡುಗಡೆ ಹೊಂದಿರುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು ಹಾಗೂ ಮಾಜಿ ಸೈನಿಕರ ಕುಟುಂಬದ ಅಭ್ಯರ್ಥಿಗಳ ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಭಾರತ ದೇಶದ ಒಕ್ಕೂಟ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸಿರುತ್ತಿರುವಾಗ ಮರಣ ಹೊಂದಿದ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರು ಎಂಬ ಬಗ್ಗೆ ಸಕ್ಷಮ ಮಿಲಿಟರಿ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಪರಿಶೀಲನಾ ದಿನಾಂಕದಂದು ಕಡ್ಡಾಯವಾಗಿ ಹಾಜರುಪಡಿಸುವುದು.

9) ಅಂಗವಿಕಲ ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 115 ಸೇಅನಿ 2005 ದಿನಾಂಕ: 19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

10) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್‌ಆರ್‌ಆರ್ 99 ದಿನಾಂಕ: 29-11-2002 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 100 ಬಿಎಸ್‌ಸಿ 2011 ದಿನಾಂಕ: 29-06-2012ರಲ್ಲಿ ಗ್ರಾಮ ಲೆಕ್ಕಿಗರ ಹುದ್ದೆಗೆ ಆಯ್ಕೆ ಮಾಡಲು ಗುರುತಿಸಿರುವ ಅಂಗವಿಕಲತೆಯಾದ (1) ದೃಷ್ಟಿಮಾಂದ್ಯ (Blindness/Low vision) (2) ಶ್ರವಣ ದೋಷವುಳ್ಳವರು (Hearing Impaired) (3) ದೈಹಿಕ ಅಂಗವಿಕಲತೆ (Locomotor Disability) ಮತ್ತು (4) ಮಾನಸಿಕ ಅಸ್ವಸ್ಥತೆ (mentally ill) / ಬುದ್ಧಿಮಾಂದ್ಯತೆ (Mental Retardation), ಕುಷ್ಠರೋಗದಿಂದ ನಿವಾರಣೆಯಾದವರು (Leprosy Cured) ಅಂಗವಿಕಲತೆಗೆ ಮಾತ್ರ ಕಾಯ್ದಿರಿಸಲಾದ ಹುದ್ದೆಗಳಾಗಿರುತ್ತದೆ.

11) ಜಾತಿ ಮೀಸಲಾತಿ ಕೋರಬಯಸುವ ಪ.ಜಾ./ಪ.ಪಂ. ಅಭ್ಯರ್ಥಿಗಳು ನಮೂನೆ "ಡಿ" ಯಲ್ಲಿ, ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ "ಇ" ಯಲ್ಲಿ ಹಾಗೂ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳೂ ನಮೂನೆ "ಎಫ್"ರಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಚಾಲ್ತಿಯಲ್ಲಿರುವ ನಮೂನೆಯಲ್ಲಿ ಪಡೆದು ಪರಿಶೀಲನಾ ದಿನಾಂಕದಂದು ಕಡ್ಡಾಯವಾಗಿ ಹಾಜರುಪಡಿಸುವುದು.

12) ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದಿನಾಂಕ 13-02-2001ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೇಅನಿ 2001ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲೆ ಸಹಿಯನ್ನು ಪಡೆದು ಪ್ರಮಾಣ ಪತ್ರ ಹೊಂದಿರತಕ್ಕದ್ದು.

13) ಇಬ್ಬರು ಗಣ್ಯ ವ್ಯಕ್ತಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ ಹೊಂದಿರತಕ್ಕದ್ದು.

14) ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೈಮ್ ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಸೀಲ್ದಾರ್‌ರವರು ನೀಡಿದ ಪ್ರಮಾಣ ಪತ್ರವನ್ನು ಪರಿಶೀಲನಾ ದಿನಾಂಕದಂದು ಹಾಜರುಪಡಿಸುವುದು.

15) ಅರ್ಜಿದಾರರು ಭಾರತೀಯ ನಾಗರಿಕನಾಗಿರತಕ್ಕದ್ದು.

16) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು.

17) ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಅಭ್ಯರ್ಥಿಯು ಹೊಂದಿರಬೇಕು, ಅಭ್ಯರ್ಥಿಯು ಗಣಕ ಯಂತ್ರಗಳ ಬಗ್ಗೆ ತಿಳುವಳಿಕೆ ಇರುವ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಹೊಂದಿರತಕ್ಕದ್ದು ಹಾಗ ಬೇಸಿಕ್ ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು.

☞ 11

100% JOB
ಕನ್ನಡ ಓದಲು-ಬರೆಯಲು ಬರುವ, SSLC ಮೇಲ್ಪಟ್ಟ 1105 ಯುವ ಪ್ರತಿಭೆಗಳಿಗೆ, ಮೈಸೂರಿನ Govt. Reg. UC-Max ಕಂಪನಿಯಲ್ಲಿ, PERMANENT ಹುದ್ದೆಗಳಿಗೆ Direct Selection.
ಉಚಿತ ವಸತಿಯೊಂದಿಗೆ
ರೂ. 17,100/- ರಿಂದ 23,400/-ರ ವರೆಗೆ.
ಶ್ರಾವ್ಯ 9036508636
7353179869
(ಜಾಹೀರಾತು)

10 ☜

18) ನೇಮಕಾತಿ ಪ್ರಕ್ರಿಯೆ ಪ್ರಾರಂಭದ ದಿನಾಂಕದಿಂದ ನೇಮಕಾತಿ ಆದೇಶ ಹೊರಡಿಸುವವರೆಗೆ ಅಭ್ಯರ್ಥಿಗಳಿಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ (On-Line) ಮಾಹಿತಿಯನ್ನು ಪಡೆದು ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗತಕ್ಕದ್ದು.

19) ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದಲ್ಲಿ ಮೀಸಲಾತಿಗನುಗುಣವಾಗಿ ಪರಿಶೀಲನಾ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ನಿಗದಿತ ದಿನಾಂಕದಂದು ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಹಾಜರಾಗಬೇಕಾಗುತ್ತದೆ.

20) ನಿಗದಿತ ದಿನಾಂಕದಂದು ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ಅನರ್ಹಗೊಳ್ಳುತ್ತಾರೆ ಮತ್ತು ಪರಿಶೀಲನಾ ಪಟ್ಟಿಯ ಅಭ್ಯರ್ಥಿಗಳಿಗೆ ಯಾವುದೇ ಪ್ರತ್ಯೇಕ ಸೂಚನಾ ಪತ್ರವನ್ನು ಕಾರ್ಯಾಲಯದಿಂದ ಕಳುಹಿಸುವುದಿಲ್ಲ.

21) ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕು ನೇಮಕಾತಿ ಪ್ರಾಧಿಕಾರಕ್ಕೆ ದತ್ತವಾಗಿರುತ್ತದೆ.

22) ಅಧಿಸೂಚನೆ ಪ್ರಕಟಿಸಿದ ದಿನಾಂಕದಿಂದ ಮಾರ್ಚ್ 2017ರ ಅಂತ್ಯದವರೆಗೆ ಗ್ರಾಮಲೆಕ್ಕಿಗರ ಪದೋನ್ನತಿಯಿಂದ, ಸ್ವಯಂ ನಿವೃತ್ತಿಯಿಂದ, ವಯೋ ನಿವೃತ್ತಿಯಿಂದ ಅಥವಾ ಇನ್ನಾವುದೇ ವಿಧದಲ್ಲಿ ಖಾಲಿಯಾಗುವ ಹುದ್ದೆಗಳನ್ನು ಮೆರಿಟ್ ಆಧಾರದ ಮೇಲೆ ಮೀಸಲಾತಿಗನುಗುಣವಾಗಿ ಸದರಿ ಪಟ್ಟಿಯಿಂದ ನೇಮಕಾತಿ ಮಾಡುವ ಷರತ್ತಿಗೊಳಪಟ್ಟಿರುತ್ತದೆ.

23) ತಪ್ಪು ಮಾಹಿತಿ ಒದಗಿಸಿದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

24) ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿರುವ ದಿನಾಂಕವು ಸಾರ್ವಜನಿಕ ರಜಾ ದಿನವಾಗಿ ಘೋಷಿಸಲ್ಪಟ್ಟಿದ್ದರೆ ಅಂತಹ ದಿನಾಂಕದ ಮಾರನೇ ದಿನವನ್ನು ಅರ್ಜಿ ಸ್ವೀಕರಿಸಲು ಕೊನೆ ದಿನಾಂಕವಾಗಿರುತ್ತದೆ.

25) ಈ ಅಧಿಸೂಚನೆ ಅನ್ವಯ ನೇಮಕಾತಿ ಹೊಂದುವ ಅಭ್ಯರ್ಥಿಗಳು ಮೈಸೂರು ಜಿಲ್ಲೆಯ ಯಾವುದೇ ತಾಲ್ಲೂಕುಗಳಲ್ಲಾದರೂ ಸೇವೆ ಸಲ್ಲಿಸಲು ಬದ್ಧರಾಗಿರಬೇಕು.

26) ಅಭ್ಯರ್ಥಿಯು ಯಾವುದೇ ಒತ್ತಡ ತಂದಲ್ಲಿ ಅಂತಹ ಅಭ್ಯರ್ಥಿಯ ಬಗ್ಗೆ ಸರ್ಕಾರದ ನಿಯಮದಂತೆ ಕ್ರಮ ಕೈಗೊಳ್ಳಲಾಗುವುದು.

27) ಅರ್ಜಿಯಲ್ಲಿ ಕೇಳಿರುವ ಪೂರ್ಣ ಮಾಹಿತಿಯನ್ನು ಭರ್ತಿ ಮಾಡಿಲ್ಲದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

28) ನೇಮಕಾತಿ ಹೊಂದಿದ ಅಭ್ಯರ್ಥಿಗಳು ಎರಡು (02) ವರ್ಷಗಳ ಪರಿವೀಕ್ಷಣಾ ಅವಧಿಯನ್ನು ಹಾಗೂ ಐದು (05) ವರ್ಷಗಳ ಸೇವೆಯನ್ನು ಮೈಸೂರು ಜಿಲ್ಲೆಯಲ್ಲಿಯೇ ಪೂರೈಸುವುದು ಕಡ್ಡಾಯವಾಗಿರುತ್ತದೆ.
**ಹೆಚ್ಚಿನ ಮಾಹಿತಿಗೆ ಜಾಲತಾಣ www.mysore-va.kar.nic.in ನೋಡುವುದು.**


# WANTED

ಭಾರತ ಸರಕಾರದಿಂದ ನೊಂದಾಯಿಸಿದ
ಕರ್ನಾಟಕ ರಾಜ್ಯದಾದ್ಯಂತ ಅಭಿವೃದ್ಧಿ ಹೊಂದುತ್ತಿರುವ



SUN INDIA
For Your Bright Future...
ಕಂಪನಿಯ

ಬ್ರಾಂಚ್‌ಗಳಲ್ಲಿನ ವಿವಿಧ ಹುದ್ದೆಗಳಿಗೆ 18 ರಿಂದ 26 ವರ್ಷದೊಳಗಿನ ಆಸಕ್ತ ಯುವಕ-ಯುವತಿಯರು ಬೇಕಾಗಿದ್ದಾರೆ.

ವಿದ್ಯಾರ್ಹತೆ
SSLC, PUC, Degree, Diploma, ITI

ವೇತನ
6,000/- ದಿಂದ 10,000/-

ಉಚಿತ ವಸತಿ, ಊಟ, ತರಬೇತಿ ಹಾಗೂ 1.20 ಲಕ್ಷ ರೂ.ಗಳ ವಿಮಾ ಸೌಲಭ್ಯವಿರುತ್ತದೆ.

ಶಿವಮೊಗ್ಗ-ಚಿತ್ರದುರ್ಗ : 9972922552, ದಾವಣಗೆರೆ-ಹರಪ್ಪನಹಳ್ಳಿ : 7338462494, ಚನ್ನಗಿರಿ-ಹರಿಹರ-7338462497, ಸಾಗರ-ಹೊಸನಗರ : 7338462492, ಶಿರಸಿ-ಸಿದ್ಧಾಪುರ : 9945299552, ಹಾನಗಲ್-ಹಾವೇರಿ : 7338461502, ಹುಬ್ಬಳ್ಳಿ-ಕುಂದಗೋಳ್ : 7338462489, ಗದಗ-ಧಾರವಾಡ : 9902588552, ಬೆಳಗಾಂ-ಗೋಕಾಕ : 7338462487, ಖಾನಾಪುರ-ಕಿತ್ತೂರ : 7338462491, ಕಾರವಾರ-ಅಂಕೋಲಾ-7338462496, ಕುಮಟಾ-ಗೋಕರ್ಣ : 9108522552, ಹೊನ್ನಾವರ-ಭಟ್ಕಳ : 7338462490, ಹಾಸನ-ಅರಕಲಗೂಡು-9902577552, ಚಿಕ್ಕಮಗಳೂರು-ಹೊಸದುರ್ಗ-9148557111, ಮಂಗಳೂರು-ಬೆಳ್ತಂಗಡಿ : 7338462488

(ಜಾಹೀರಾತು)


ದೇಶ ಕೋಶ 45

# ಜಪಾನ್ ಇಲ್ಲಿಯವರಿಗೆ ಆಯಸ್ಸು ಹೆಚ್ಚು

ಶ್ವೇತಾ ಬಿ.

**ಜಪಾನ್ ಅಂದರೆ ಎಲೆಕ್ಟ್ರಾನಿಕ್ ಉಪಕರಣಗಳು! ಜಪಾನ್ ಅಂದರೆ ತಾಂತ್ರಿಕ ಕೌಶಲ್ಯ ಹಾಗೂ ಶ್ರಮ ! ಜಪಾನ ಅಂದರೆ ಅಣು ಬಾಂಬ್ ನೆನಪು !**

ನಿಜ, ಜಪಾನ್ ಒಂದು ಪುಟ್ಟ ದೇಶವಾದರೂ ವಿಶ್ವದಾದ್ಯಂತ ಎಲ್ಲರಿಗೂ ಪರಿಚಯ ಇರುವ ದೇಶ. ಅದಕ್ಕೆ ಹಲವಾರು ಅಂಶಗಳು ಕಾರಣ: 1945, ಆಗಸ್ಟ್‌ನಲ್ಲಿ ಜಪಾನಿನ ನಗರಗಳಾದ ಹಿರೋಶಿಮಾ ಹಾಗೂ ನಾಗಾಸಾಕಿ ಮೇಲೆ ಅಮೇರಿಕಾವು ಅಣು ಬಾಂಬ್ ಹಾಕಿತು. ಇದರಲ್ಲಿ ಸುಮಾರು 1,15,000 ಜನರು ಪ್ರಾಣ ಕಳೆದುಕೊಂಡರು. ಇದಾದ ನಂತರ ಜಪಾನಿನ ಆರ್ಥಿಕ ಪರಿಸ್ಥಿತಿ ತೀರ ಹದಗೆಟ್ಟಿತ್ತು. ಆದರೆ ಜಪಾನೀಯರ ಶ್ರಮ ಹಾಗೂ ಬುದ್ಧಿವಂತಿಕೆಯಿಂದಾಗಿ ಈಗ ಅವರ ದೇಶವು ಜಗತ್ತಿನ ಎರಡನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಜಗತ್ತಿನ ಬಹುತೇಕ ಪ್ರಸಿದ್ಧ ಎಲೆಕ್ಟ್ರಾನಿಕ್ ವಸ್ತುಗಳೆಲ್ಲ ತಯಾರಾಗುವುದು ಜಪಾನಿನ ಕೈಗಾರಿಕೆಗಳಲ್ಲೇ.




ಜಪಾನ್, ಏಷ್ಯಾ ಖಂಡದ ಪೂರ್ವದಲ್ಲಿರುವ ದ್ವೀಪಗಳ ಒಂದು ಸಮುದಾಯ. ಹೊಕ್ಕಾಯಿಡೋ, ಹೊನ್‌ಶು, ಶಿಕೊಕು ಹಾಗೂ ಕ್ಯೂಶು ಇವು ಇಲ್ಲಿನ 4 ಪ್ರಮುಖ ದ್ವೀಪಗಳು. ಇಲ್ಲಿ 4000ಕ್ಕೂ ಹೆಚ್ಚು ಸಣ್ಣ ಸಣ್ಣ ದ್ವೀಪಗಳಿವೆ. ಈ ಎಲ್ಲಾ ದ್ವೀಪಗಳು ಸೇರಿ ಜಪಾನ್ ರಾಷ್ಟ್ರ ನಿರ್ಮಾಣವಾಗಿದೆ. ರಷ್ಯಾ, ಕೊರಿಯ ಹಾಗೂ ಚೈನಾ, ಜಪಾನ್‌ನ ನೆರೆ ರಾಷ್ಟ್ರಗಳು.

ಜಪಾನಿನ ಸುಮಾರು 80 ಪ್ರತಿಶತ ಭಾಗವು ಪರ್ವತಗಳಿಂದ ಆವೃತ್ತವಾಗಿದೆ. ಇಲ್ಲಿನ ಅತೀ ಎತ್ತರದ ಪರ್ವತವೆಂದರೆ ಮೌಂಟ್ ಫ್ಯುಜಿ. ಇದು ಜ್ವಾಲಾ ಮುಖಿಯನ್ನು ಉಗುಳುತ್ತದೆ. ಜಪಾನಿನ ಜನರು ಇದರ ಬಗ್ಗೆ ಯಾವಾಗಲೂ ಎಚ್ಚರದಿಂದಿರುತ್ತಾರೆ. ಜ್ವಾಲಾ ಮುಖಿ ಮತ್ತು ಭೂಕಂಪನಗಳಿಂದಾಗಿ, ಜಪಾನ್‌ನ್ನು ಅಪಾಯಕಾರಿ ಪ್ರದೇಶ ಎಂದು ಗುರುತಿಸಲಾಗುತ್ತದೆ. ಇಲ್ಲಿ ಪದೇ ಪದೇ ಭೂಕಂಪಗಳು ಸಂಭವಿಸುತ್ತಲೇ ಇರುತ್ತವೆ. ಸರಾಸರಿ ವರ್ಷಕ್ಕೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಭೂಕಂಪಗಳಾಗುತ್ತವೆ ! ಜೊತೆಗೆ ಜ್ವಾಲಾಮುಖಿಗಳ ಸಂಖ್ಯೆಯೂ ಹೆಚ್ಚು. ಇಲ್ಲಿ ಸುಮಾರು 200 ಜ್ವಾಲಾಮುಖಿಗಳಿವೆ. ಅದರಲ್ಲಿ 60 ಜೀವಂತ ಜ್ವಾಲಾಮುಖಿಗಳು.

ಜಪಾನಿನ ಜನರಿಗೆ ಪ್ರಾಕೃತಿಕ ಸೌಂದರ್ಯದ ಬಗೆಗೆ ಅತಿಯಾದ ವ್ಯಾಮೋಹವಿದೆ. ಪ್ರಾಚೀನ ಶಿಂಟೋ ಜನಾಂಗದ ಜನರು ಜಲಪಾತ, ಪರ್ವತ ಹಾಗೂ ಕಾಡುಗಳಲ್ಲಿ ಮನುಷ್ಯರ ಆತ್ಮದಂತೆಯೇ ಒಂದು ಶಕ್ತಿ ಇರುತ್ತದೆ ಎಂದು ನಂಬುತ್ತಿದ್ದರು. ಜಪಾನಿನ ಬಹು ಭಾಗವನ್ನು ಗ್ರಾಮೀಣ ಪ್ರದೇಶಗಳು ಆವರಿಸಿವೆ. ಜಪಾನ್ ಸಣ್ಣ ದೇಶವಾದರೂ ಸಹ ಹನ್ನೆರಡು ಕೋಟಿಗೂ ಹೆಚ್ಚಿನ ಜನಸಂಖ್ಯೆ ಹೊಂದಿದೆ.

ಬಿಸಿಯಾದ ನೀರಿನ ನದಿಯಾದ ತುಶಿಮಾ ನದಿಯು ಜಪಾನಿನ ದಕ್ಷಿಣದ ಭಾಗದಲ್ಲಿ ಹರಿದು ಸಮುದ್ರ ಸೇರುತ್ತದೆ. ಇಲ್ಲಿ ಇದು ಉತ್ತರದಿಂದ ಬರುವ ತಣ್ಣೀರಿನ ಹರಿವನ್ನು ಸೇರುತ್ತದೆ. ಜಪಾನಿನ ಸಮುದ್ರವು ಈ ಬಿಸಿ ಹಾಗೂ ತಣ್ಣೀರುಗಳ ಸೇರುವಿಕೆಯಿಂದಾಗಿ ಮೀನು ಹಾಗೂ ಇತರ ಜಲಚರಗಳಲ್ಲಿ ಶ್ರೀಮಂತವಾಗಿದೆ.

ಜಪಾನಿನ ಜನರು ತಮ್ಮ ಸಂಕಲ್ಪ ಹಾಗೂ ಶ್ರಮಕ್ಕೆ ಹೆಸರುವಾಸಿ. ಇಲ್ಲಿ ಮಕ್ಕಳಿಗೆ ಹಿರಿಯರನ್ನು, ಅದರಲ್ಲೂ ಮುಖ್ಯವಾಗಿ ಪೂಷಕರು ಹಾಗೂ ಗುರುಗಳನ್ನು ಗೌರವಿಸುವುದನ್ನು ಹೇಳಿಕೊಡಲಾಗುತ್ತದೆ. ಅವರು ತಮ್ಮ ಕುಂಟುಬ ಹಾಗೂ ತಾವು ಕೆಲಸ ಮಾಡುತ್ತಿರುವ ಕಂಪನಿಯ ಒಳಿತಿಗೆ ಶ್ರಮ ವಹಿಸುತ್ತಾರೆ. ತಮ್ಮ ವೈಯಕ್ತಿಕ ಜೀವನದ ಕಡೆ ಇವರ ಗಮನ ಕಡಿಮೆ.

ಇವರ ಆಹಾರದ ಬಹುಭಾಗವು ಅನ್ನ, ಮೀನು ಹಾಗೂ ತರಕಾರಿಯಿಂದ ಕೂಡಿರುತ್ತದೆ. ಮಾಂಸಾಹಾರದ ಪ್ರಮಾಣ ಕಡಿಮೆ. ಜಪಾನೀಯರ ಸರಾಸರಿ ಆಯಸ್ಸು ಜಗತ್ತಿನ ಇತರ ಜನರಿಗಿಂತ ಹೆಚ್ಚಿನದಾಗಿದೆ. ಜಪಾನ್ ಈಗಲೂ ರಾಜರ ಆಳ್ವಿಕೆಯಲ್ಲಿರುವ ಏಕಮಾತ್ರ ದೇಶವಾಗಿದೆ. ಆದರೆ ರಾಜರಿಗೆ ಆಡಳಿತದಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ.

| | |
|---|---|
| ದೇಶದ ಹೆಸರು | ಜಪಾನ್ |
| ಖಂಡ | ಏಷ್ಯಾ |
| ರಾಜಧಾನಿ | ಟೋಕಿಯೋ |
| ಅಂದಾಜು ಜನಸಂಖ್ಯೆ | ಸುಮಾರು 12,74,64,000 |
| ದೇಶದ ವಿಸ್ತೀರ್ಣ | 3,77,835 ಚ. ಕಿ. ಮೀ |
| ಪ್ರಮುಖ ಧರ್ಮಗಳು | ಶಿಂಟೋ, ಬುದ್ಧ, ಕ್ರಿಶ್ಚಿಯನ್ |
| ಭಾಷೆ | ಜಪಾನೀಸ್ |
| ರಾಷ್ಟ್ರೀಯ ಪಕ್ಷಿ | ಕಿಜಿ |
| ರಾಷ್ಟ್ರೀಯ ಕ್ರೀಡೆ | ಸುಮೊ ರಸ್ಲಿಂಗ್ |
| ಕರೆನ್ಸಿ | ಯೆನ್ |
| ಕೆಲವು ಪ್ರಮುಖ ನಗರಗಳು | ಒಸಾಕ-ಕೊಬೆ, ನಗೋಯ, ಫುಕುಯೊಕ-ಕಿಟಾಕ್ಯುಶು |
| ಸಾಕ್ಷರತಾ ಪ್ರಮಾಣ | ಸುಮಾರು 99.00% |
| ಪ್ರಮುಖ ಬೆಳೆಗಳು | ಅಕ್ಕಿ, ತರಕಾರಿ, ಹಣ್ಣು |
| ಪ್ರಮುಖ ವೃತ್ತಿ | ಕೃಷಿ |

UPSC

# ಗ್ರೂಪ್ 'ಎ' ಹುದ್ದೆಗಳಿಗೆ ಅರ್ಜಿ ಆಹ್ವಾನ

## 56 ಹುದ್ದೆಗಳು

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಡಿ ಕಾರ್ಯನಿರ್ವಹಿಸುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ವ್ಯವಹಾರ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು ಗ್ರೂಪ್ 'ಎ' ಹುದ್ದೆಗಳಿಗೆ ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸ್ನಾತಕೋತ್ತರ ವೈದ್ಯ/ಕಾನೂನು/ಇಂಜಿನಿಯರಿಂಗ್ ಪದವಿ ಜತೆಗೆ ಕಾರ್ಯಾನುಭವ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

- **ಹುದ್ದೆಗಳ ವಿಂಗಡಣೆ:**
- **ಸಹಾಯಕ ಪ್ರಾಧ್ಯಾಪಕ (ಗ್ರೇಡ್-3) - 40**
  - ಎಂಡೋಕ್ರಿನಾಲಜಿ - 13
  - ಮೈಕ್ರೋಬಯಾಲಜಿ-15
  - ಯೂರಾಲಜಿ-11
  - ಟ್ಯುಬರ್ಕ್ಯುಲೋಸಿಸ್ ಆ್ಯಂಡ್ ಚೆಸ್ಟ್ ಡಿಸೀಸಸ್-1
- **ಡೆಪ್ಯುಟಿ ಸೆಂಟ್ರಲ್ ಇಂಟಲಿಜೆನ್ಸ್ ಆಫೀಸರ್-6**
- **ಅಸಿಸ್ಟೆಂಟ್ ಲೆಜಿಸ್ಲೇಟಿವ್ ಕೌನ್ಸಿಲ್ - 8**
  - ಇಂಡಿಯನ್ ಲೀಗಲ್ ಸರ್ವೀಸ್-6
  - ಬೆಂಗಾಲಿ-1
  - ಮರಾಠಿ-1
- **ಅಸಿಸ್ಟೆಂಟ್ ಎಗ್ಸಿಕ್ಯುಟಿವ್ ಇಂಜಿನಿಯರ್-4**
  - ಸಿವಿಲ್-1
  - ಎಲೆಕ್ಟ್ರಾನಿಕ್ಸ್-3
- ಜೂನಿಯರ್ ಶಿಪ್ ಸರ್ವೇಯರ್ -1
  - ರೇಡಿಯೋ ಇನ್ಸ್‌ಪೆಕ್ಟರ್-1
  - ಪ್ರೊಫೆಸರ್-3
- **ವೇತನ:**

ಸಹಾಯಕ ಪ್ರಾಧ್ಯಾಪಕ (ಗ್ರೇಡ್-3), ಅಸಿಸ್ಟೆಂಟ್ ಲೆಜಿಸ್ಲೇಟಿವ ಕೌನ್ಸಿಲ್ ಮತ್ತು ಜೂನಿಯರ್ ಶಿಪ್ ಸರ್ವೇಯರ್ ಹುದ್ದೆಗಳಿಗೆ ರೂ. 15,600-39,100+ಗ್ರೇಡ್ ಪೇ 6,600. ಡೆಪ್ಯುಟಿ ಸೆಂಟ್ರಲ್ ಇಂಟಲಿಜೆನ್ಸ್ ಆಫೀಸರ್, ಅಸಿಸ್ಟೆಂಟ್ ಎಗ್ಸಿಕ್ಯುಟಿವ್ ಇಂಜಿನಿಯರ್ ಮತ್ತು ರೇಡಿಯೋ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ರೂ. 15,600-39, 100+ಗ್ರೇಡ್ ಪೇ 5,400. ಪ್ರೊಫೆಸರ್ ಹುದ್ದೆಗೆ ರೂ. 37,400-67,000+ಗ್ರೇಡ್‌ಪೇ 10,000.

- **ವಯೋಮಿತಿ :**

ಸಹಾಯಕ ಪ್ರಾಧ್ಯಾಪಕ, ಅಸಿಸ್ಟೆಂಟ್ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಜೂನಿಯರ್ ಶಿಪ್ ಸರ್ವೇಯರ್ ಹುದ್ದೆಗಳಿಗೆ ಗರಿಷ್ಠ 40 ವರ್ಷ, ಡೆಪ್ಯುಟಿ ಸೆಂಟ್ರಲ್ ಇಂಟಲಿಜೆನ್ಸ್ ಆಫೀಸರ್ ಮತ್ತು ಅಸಿಸ್ಟೆಂಟ್ ಎಗ್ಸುಕ್ಯುಟಿವ್ ಇಂಜಿನಿಯರ್ ಹುದ್ದೆಗಳಿಗೆ 35, ರೇಡಿಯೋ ಇನ್ಸ್‌ಪೆಕ್ಟರ್ ಮತ್ತು ಪ್ರೊಫೆಸರ್ ಹುದ್ದೆಗಳಿಗೆ ಗರಿಷ್ಠ 50 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಕೆ ಇದೆ.

- **ವಿದ್ಯಾರ್ಹತೆ:**

ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಎಂಬಿಬಿಎಸ್+ಸಂಬಂಧಿಸಿದ ವಿಷಯದಲ್ಲಿ (ಎಂಡ್ರೋಕ್ರಿನಾಲಜಿ/ಮೈಕ್ರೋಬಯಾಲಜಿ/ಯೂರಾಲಜಿ/ಟ್ಯುಬರ್ಕ್ಯುಲೋಸಿಸ್ ಆ್ಯಂಡ್ ಚೆಸ್ಟ್ ಡಿಸೀಸಸ್) ಸ್ನಾತಕೋತ್ತರ ಪದವಿ ಜತೆಗೆ ಕನಿಷ್ಠ 3 ವರ್ಷಗಳ ಬೋಧನಾ ಅನುಭವ, ಡೆಪ್ಯುಟಿ ಸೆಂಟ್ರಲ್ ಇಂಟಲಿಜೆನ್ಸ್ ಆಫೀಸರ್ ಹುದ್ದೆಗೆ ಬಿ.ಇ./ಬಿ.ಟೆಕ್/ಬಿ.ಎಸ್ಸಿ. ಪದವಿ, ಅಸಿಸ್ಟೆಂಟ್ ಲೆಜಿಸ್ಲೇಟಿವ್ ಕೌನ್ಸಿಲ್ ಹುದ್ದೆಗೆ ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿ+ಬಾರ್ ಕೌನ್ಸಿಲ್‌ನಲ್ಲಿ ಸದಸ್ಯತ್ವ ಪಡೆದಿರುವವರು, ಅಸಿಸ್ಟೆಂಟ್ ಎಗ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಗೆ ಸಿವಿಲ್/ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಬಿ.ಇ./ಬಿ.ಟೆಕ್. ಪದವಿ ಜತೆಗೆ 2 ವರ್ಷಗಳ ಕಾರ್ಯಾನುಭವ, ಜೂನಿಯರ್ ಶಿಪ್ ಸರ್ವೇಯರ್ ಹುದ್ದೆಗೆ ನಾವೆಲ್ ಆರ್ಕಿಟೆಕ್ಚರ್ ವಿಷಯದಲ್ಲಿ ಪದವಿ, ರೇಡಿಯೋ ಇನ್ಸ್‌ಪೆಕ್ಟರ್ ಹುದ್ದೆಗೆ ರೇಡಿಯೋ ಆಪರೇಟರ್ ವಿಷಯದಲ್ಲಿ ಪ್ರಮಾಣಪತ್ರ ಜತೆಗೆ 3 ವರ್ಷಗಳ ಕಾರ್ಯಾನುಭವ, ಪ್ರೊಫೆಸರ್ ಹುದ್ದೆಗೆ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಎಂ.ಇ./ಎಂ.ಟೆಕ್ ಪದವಿ ಜತೆಗೆ ಕನಿಷ್ಠ 10 ವರ್ಷಗಳ ಬೋಧನಾ/ಸಂಶೋಧನಾ/ವೃತ್ತಿ ಅನುಭವ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಹತೆಗಳೆಲ್ಲವೂ ಅಂಗೀಕೃತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಪಡೆದ ಪದವಿ/ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳಾಗಿರಬೇಕು.

- **ಅರ್ಜಿ ಸಲ್ಲಿಸುವ ವಿಧಾನ:**

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಮೇಲ್ಭಾಗದಲ್ಲಿ ಹಾಕಿದ ಇತ್ತೀಚಿನ ಭಾವಚಿತ್ರ ಜತೆಗೆ ಅಗತ್ಯ ದಾಖಲಾತಿಗಳನ್ನು (ವಿದ್ಯಾರ್ಹತೆ/ಕಾರ್ಯಾನುಭವ/ಮೀಸಲಾತಿಗೆ ಸಂಬಂಧಿಸಿದ) ಅಪ್‌ಲೋಡ್ ಮಾಡಬೇಕು. ಆನ್‌ಲೈನ್ ಪೇಮೆಂಟ್ (ಡೆಬಿಟ್/ಕ್ರೆಡಿಟ್/ನೆಟ್ ಬ್ಯಾಂಕಿಂಗ್) ರೂಪದಲ್ಲಿ ರೂ. 25 (ಎಸ್‌ಸಿ/ಎಸ್‌ಟಿ/ಅಂಗವಿಕಲ/ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯ್ತಿ ಇದೆ) ಅರ್ಜಿ ಶುಲ್ಕ ಸಲ್ಲಿಸಬೇಕು.

- **ನೇಮಕಾತಿ ವಿಧಾನ:**

ಮೊದಲ ಹಂತದಲ್ಲಿ ಅಂಕ ಆಧಾರಿತ ನೇರ ಸಂದರ್ಶನ ಇರುತ್ತದೆ (ಈ ಸಂದರ್ಶನದಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಕನಿಷ್ಠ 50 ಅಂಕಗಳನ್ನು, ಒಬಿಸಿ ಅಭ್ಯರ್ಥಿಗಳು 45 ಮತ್ತು ಎಸ್‌ಸಿ/ಎಸ್‌ಟಿ ಅಂಗವಿಕಲ ಅಭ್ಯರ್ಥಿಗಳು 40 ಅಂಕಗಳನ್ನು ಗಳಿಸಬೇಕಾಗುತ್ತದೆ). ಈ ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯ ವಾಗುತ್ತದೆ.

- **ಅರ್ಜಿ ಸಲ್ಲಿಸಲು ಕೊನೆಯ ದಿನ 2017ರ ಜನವರಿ 12.**
- **ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ ಪಡೆಯಲು ಕೊನೆಯ ದಿನಾಂಕ: 2017ರ ಜನವರಿ 13.**
- **ವೆಬ್‌ಸೈಟ್: www.upsconline.nic.in**

# ಸಶಸ್ತ್ರ ಸೀಮಾ ಬಲ 872 ಸಬ್ ಇನ್ಸ್‌ಪೆಕ್ಟರ್, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಮತ್ತು ಹೆಡ್‌ಕಾನ್ಸ್‌ಟೆಬಲ್ ಹುದ್ದೆಗಳ ನೇಮಕಾತಿ

ಕೇಂದ್ರ ಗೃಹ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಶಸ್ತ್ರ ಸೀಮಾ ಬಲದಲ್ಲಿ ಕೆಲಸ ಮಾಡಲು ಸಬ್ ಇನ್ಸ್‌ಪೆಕ್ಟರ್, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಮತ್ತು ಹೆಡ್ ಕಾನ್ಸ್‌ಟೆಬಲ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

- **ಹುದ್ದೆಗಳ ವಿಂಗಡಣೆ:**
  - ಸಬ್ ಇನ್ಸ್‌ಪೆಕ್ಟರ್, ಹುದ್ದೆಗಳು : 16
  - ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಹುದ್ದೆಗಳು : 110
  - ಹೆಡ್ ಕಾನ್ಸ್‌ಟೆಬಲ್, ಹುದ್ದೆಗಳು : 746
- **ವೇತನ:**
  - ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಮಾಸಿಕ ರೂ. 35,400.
  - ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ರೂ. 29,200. ಹೆಡ್ ಕಾನ್ಸ್‌ಟೆಬಲ್ ಹುದ್ದೆಗೆ ರೂ. 25,500.
- **ವಯೋಮಿತಿ:**
  - ಸಬ್ ಇನ್ಸ್‌ಪೆಕ್ಟರ್ ಹಾಗೂ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಕನಿಷ್ಠ 18 ರಿಂದ ಗರಿಷ್ಠ 25 ವರ್ಷ.
  - ಹೆಡ್ ಕಾನ್ಸ್‌ಟೆಬಲ್ ಹುದ್ದೆಗೆ ಕನಿಷ್ಠ 18 ರಿಂದ ಗರಿಷ್ಠ 23 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಸಡಿಲಿಕೆ ಇದೆ.
  - **ವಿದ್ಯಾರ್ಹತೆ:**
- ಎತ್ತರ ಕನಿಷ್ಠ 170 ಸೆಂ.ಮೀ. ಎದೆಯ ಸುತ್ತಳತೆ ಕನಿಷ್ಠ 80 ಸೆಂ.ಮೀ. ಕನಿಷ್ಠ 5 ಸೆಂ.ಮೀ. ಹಿಗ್ಗಿಸಲು ಬರಬೇಕು.
- ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಾನಿಕ್/ಟೆಲಿಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿ ಅಥವಾ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ವಿಷಯಗಳಿರುವಂತೆ ವಿಜ್ಞಾನ ಪದವಿ.
- ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಎಲೆಕ್ಟ್ರಾನಿಕ್ಸ್/ಟೆಲಿಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಡಿಪ್ಲೊಮಾ ಅಥವಾ ಕನಿಷ್ಠ ಶೇ.50 ಅಂಕಗಳೊಂದಿಗೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ವಿಷಯಗಳಿರುವಂತೆ ವಿಜ್ಞಾನ ಪಿಯುಸಿ (10+2).
- ಹೆಡ್ ಕಾನ್ಸ್‌ಟೆಬಲ್ ಹುದ್ದೆಗೆ ಮೆಟ್ರಿಕ್ಯುಲೇಷನ್ / ತತ್ಸಮಾನ ಜತೆಗೆ ಐಟಿಐ ಅಥವಾ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ವಿಷಯಗಳಿರುವಂತೆ ವಿಜ್ಞಾನ ಪಿಯುಸಿ (10+2).
- ಹೆಡ್ ಕಾನ್ಸ್‌ಟೆಬಲ್ ಹುದ್ದೆಗೆ ಮೆಟ್ರಿಕ್ಯುಲೇಷನ್/ತತ್ಸಮಾನ ಜತೆಗೆ ಐಟಿಐ ಅಥವಾ ಭೌತಶಾಸ್ತ್ರ ರಸಾಯನಶಾಸ್ತ್ರ, ಗಣಿತ ವಿಷಯಗಳಿರುವಂತೆ ವಿಜ್ಞಾನ ಪಿಯುಸಿ (10+2).



- **ಅರ್ಜಿ ಸಲ್ಲಿಸುವ ವಿಧಾನ:**

ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆ ನೀಡಲಾಗಿದ್ದು, ಪ್ರಿಂಟ್ ಪಡೆದು ಭರ್ತಿ ಮಾಡಿದ ಅರ್ಜಿಯ ಜತೆಗೆ ಅಗತ್ಯ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಯನ್ನು ಲಗತ್ತಿಸಿ ಜನವರಿ 29ರ ಒಳಗೆ ತಲುಪುವಂತೆ ಸಂಬಂಧಿಸಿದ ವಿಳಾಸಕ್ಕೆ ಕಳುಹಿಸಬೇಕು. ಭರ್ತಿ ಮಾಡಿದ ಅರ್ಜಿ ಮತ್ತು ದಾಖಲಾತಿ ಪ್ರತಿಗಳಿರುವ ಲಕೋಟೆಯ ಮೇಲೆ ರೂ. 25 ಮುಖ ಬೆಲೆಯ ಅಂಚೆ ಚೀಟಿಯನ್ನು ಲಗತ್ತಿಸಬೇಕು. ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಜಿ ಸಲ್ಲಿಸುವವರು ಡಿಡಿ/ಬ್ಯಾಂಕ್ ಚೆಕ್ ರೂಪದಲ್ಲಿ ರೂ. 200 ಮತ್ತು ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಹಾಗೂ ಹೆಡ್ ಕಾನ್ಸ್‌ಟೆಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ರೂ. 100 ಅರ್ಜಿ ಶುಲ್ಕ ಸಲ್ಲಿಸಬೇಕಾಗುತ್ತದೆ.

- **ನೇಮಕಾತಿ ವಿಧಾನ:**

ಮೊದಲು ದೈಹಿಕ ಸದೃಢತೆ ಪರೀಕ್ಷೆ ಇರುತ್ತದೆ. ಸಲ್ಲಿಕೆಯಾಗಿರುವ ಅರ್ಜಿ ಆಧಾರದ ಮೇಲೆ ಅರ್ಹರ ದೈಹಿಕ ಸಾಮರ್ಥ್ಯ ಪರೀಕ್ಷೆ (3.2 ಕಿ.ಮೀ./4.8 ಕಿ.ಮೀ. ಓಟ) ನಡೆಸಲಾಗುತ್ತದೆ. ದಾಖಲಾತಿ ಪರೀಕ್ಷೆ ವಸ್ತುನಿಷ್ಠ ಬಹುಆಯ್ಕೆ ಮಾದರಿ ಪ್ರಶ್ನೆಗಳನ್ನು ಒಳಗೊಂಡ ಲಿಖಿತ ಪರೀಕ್ಷೆ/ಕೌಶಲ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆಗಳ ಮೂಲಕ ಅಂತಿಮ ಆಯ್ಕೆ ಮಾಡಲಾಗುತ್ತದೆ. ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ವೆಬ್‌ಸೈಟ್ -www.ssbrectt.gov.in

- **ವಿಳಾಸ:**
  - ಸಬ್ ಇನ್ಸ್‌ಪೆಕ್ಟರ್ ಮತ್ತು ಹೆಡ್ ಕಾನ್ಸ್‌ಟೆಬಲ್ ಹುದ್ದೆಗಳಿಗೆ: ದ ಇನ್ಸ್‌ಪೆಕ್ಟರ್ ಜನರಲ್, ಫ್ರಾಂಟಿಯರ್ ಎಚ್‌ಕ್ಯು ಎಸ್‌ಎಸ್‌ಬಿ, ಗಾನಿಯಾ ದಿಯೋಕಿ, ರಾಣಿಖೇತ್-263645. ಜಿಲ್ಲೆ-ಅಲ್ಮೋರಾ (ಉತ್ತರಾಖಂಡ್).
  - ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ: ದ ಇನ್ಸ್‌ಪೆಕ್ಟರ್ ಜನರಲ್, ಫ್ರಾಂಟಿಯರ್ ಹೆಡ್ ಕ್ವಾರ್ಟರ್ ಸಶಸ್ತ್ರಸೀಮಾ ಬಲ, ಗುವಾಹತಿ, ಹೌಸ್ ನಂ.345, ನಿಕತಾ ಕಾಂಪ್ಲೆಕ್ಸ್, ಜಿ.ಎಸ್.ರೋಡ್, ಪೋಸ್ಟ್-ಖಾನಾಪುರಾ, ಪಿನ್-781022, ಜಿಲ್ಲೆ-ಕಾಮರೂಪ್ (ಅಸ್ಸಾಂ).
  - **ಮುದ್ರಿತ ಅರ್ಜಿ ಸಲ್ಲಿಸಲು ಕೊನೆಯ ದಿನ: ಜನವರಿ 29**

ವೆಬ್‌ಸೈಟ್: www.ssbrectt.gov.in

# ತಾಂತ್ರಿಕೇತರ ಮಲ್ಟಿ ಟಾಸ್ಕಿಂಗ್ ಹುದ್ದೆಗಳಿಗೆ ನೇಮಕಾತಿಗೆ ಅರ್ಜಿ

**10ನೇ ತರಗತಿ ಪೂರೈಸಿದ ಅಭ್ಯರ್ಥಿಗಳಿಗೆ**

**ಭಾ**ರತದ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯಡಿ ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ಕೇಂದ್ರದ ವಿವಿಧ ಸಚಿವಾಲಯ, ಇಲಾಖೆ ಹಾಗೂ ಸಂಸ್ಥೆಗಳಲ್ಲಿನ ಬಹಳಷ್ಟು ಹುದ್ದೆಗಳಿಗೆ ಪರೀಕ್ಷೆಗಳ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ.

• ಪ್ರಸ್ತುತ, ಕೇಂದ್ರದ ಹಲವು ಇಲಾಖೆಗಳಲ್ಲಿ ಖಾಲಿಯಿರುವ ತಾಂತ್ರಿಕೇತರ ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಗ್ರೂಪ್ ಸಿ) ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ನಡೆಸುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

■ **ವಯೋಮಿತಿ:**
2017ರ ಆಗಸ್ಟ್ 1ಕ್ಕೆ 25 ವರ್ಷ ಮೀರಿರಬಾರದು. ಕನಿಷ್ಠ 18 ವರ್ಷ ಮತ್ತು ಗರಿಷ್ಠ 25 ವರ್ಷ. ಅಂಗವಿಕಲರಿಗೆ 10 ವರ್ಷ ಹಾಗೂ ಒಬಿಸಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಇದರೊಂದಿಗೆ 3 ವರ್ಷ, ಎಸ್ಸಿ/ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ ಸಡಿಲಿಕೆ ನೀಡಲಾಗಿದೆ. ಸೇನಾ ನಿವೃತ್ತರು, ಹಾಲಿ ಕೇಂದ್ರ ಸರ್ಕಾರಿ ಹುದ್ದೆಯಲ್ಲಿರುವವರು ಹೀಗೆ ಇನ್ನೂ ಹಲವಾರು ಮಾನದಂಡಗಳ ಮೇಲೆ ವಯೋಮಿತಿ ಸಡಿಲಿಕೆ ನೀಡಲಾಗಿದೆ.

■ **ವೇತನ:**
ರೂ. 5200-20200+ಗ್ರೇಡ್ ಪೇ 1800

■ **ಅರ್ಹತೆ:**
ಅಂಗೀಕೃತ ಸಂಸ್ಥೆಯಿಮದ 10ನೇ ತರಗತಿ (ಮೆಟ್ರಿಕ್ಯುಲೇಷನ್) ಆಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

■ **ಅರ್ಜಿ ಸಲ್ಲಿಕೆ:**
ಮಹಿಳಾ, ಎಸ್‌ಸಿ, ಎಸ್‌ಟಿ, ದೈಹಿಕ ಅಂಗವಿಕಲರು ಮತ್ತು ಸೇನಾ ನಿವೃತ್ತರಿಗೆ ಅರ್ಜಿ ಶುಲ್ಕವಿಲ್ಲ. ssconline.nic.in ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಅರ್ಜಿಯಲ್ಲಿಯೇ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ಕೇಂದ್ರವನ್ನು ಆಯ್ಕೆ ಮಾಡಬೇಕಿರುತ್ತದೆ. ಆಯಾ ರಾಜ್ಯಗಳ ಅಭ್ಯರ್ಥಿಗಳು ಪ್ರಾದೇಶಿಕ ವಲಯದ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ರಾಜ್ಯದ ಅಭ್ಯರ್ಥಿಗಳು ಬೆಂಗಳೂರು, ಧಾರವಾಡ, ಕಲಬುರಗಿ ಅಥವಾ ಮಂಗಳೂರು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದು. ಅರ್ಜಿ ಶುಲ್ಕ 100 ರೂ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಮಾತ್ರವೇ ಶುಲ್ಕ ಪಾವತಿಸಬೇಕು. ಚಲನ್, ಆನ್‌ಲೈನ್ ಚಲನ್ ಅಥವಾ ಎಸ್‌ಬಿಐ ನೆಟ್‌ಬ್ಯಾಂಕಿಂಗ್ ಮೂಲಕ, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡುಗಳ ಮೂಲಕವೂ ಶುಲ್ಕ ಪಾವತಿ ಮಾಡಬಹುದು.

■ **ಪರೀಕ್ಷೆ ಮತ್ತು ಆಯ್ಕೆ:**
ಲಿಖಿತ ಪರೀಕ್ಷೆ ಇರುತ್ತದೆ. ಪೇಪರ್-1 ಬಹುಆಯ್ಕೆ ಮಾದರಿಯದ್ದಾಗಿದ್ದು, ಪೇಪರ್-2 ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತ್ಯೇಕ ಪರೀಕ್ಷೆಗಳಲ್ಲಿ ಅರ್ಹತೆ ಗಳಿಸಬೇಕು. ಪತ್ರಿಕೆ-1ರಲ್ಲಿ ಜನರಲ್ ಇಂಟೆಲಿಜೆನ್ಸ್ ಹಾಗೂ ರೀಸನಿಂಗ್ (25 ಅಂಕ), ನ್ಯೂಮರಿಕಲ್ ಆಪ್ಟಿಟ್ಯೂಡ್ (25 ಅಂಕ), ಜನರಲ್ ಇಂಗ್ಲಿಷ್ (50 ಅಂಕ), ಜನರಲ್ ಅವೇರ್‌ನೆಸ್ (50 ಆಂಕ) ಗಳನ್ನು ಒಳಗೊಂಡ ಪ್ರಶ್ನೆಗಳಿರುತ್ತವೆ. ನಾಲ್ಕು ವಿಭಾಗಗಳಲ್ಲಿರುವ 200 ಅಂಕಗಳ ಪರೀಕ್ಷೆಗೆ 2 ಗಂಟೆ ಸಮಯ ನಿಗದಿಯಾಗಿರುತ್ತದೆ. ದೃಷ್ಟಿದೋಷ ಇರುವವರಿಗೆ 2.40 ಗಂಟೆ ಸಮಯ ನೀಡಲಾಗುತ್ತದೆ. ಒಂದು ಸರಿಯುತ್ತರಕ್ಕೆ 1 ಅಂಕ ಮತ್ತು ತಪ್ಪು ಉತ್ತರ 0.25 ಋಣಾತ್ಮಕ ಅಂಕವಿರುತ್ತದೆ. ಪತ್ರಿಕೆ-1ರಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆ ಮಾಡಿ, 2ನೇ ಪ್ರಶ್ನೆಪತ್ರಿಕೆ ಬರೆಯಲು ಅವಕಾಶ ನೀಡಲಾಗುತ್ತದೆ. ಇದು ಅರ್ಹತೆಗೆ ಮಾತ್ರ ಪರಿಗಣಿಸಲಾಗುತ್ತಿದ್ದು, 50 ಅಂಕಗಳನ್ನು ಒಳಗೊಂಡಿದೆ. ಕಿರು ಪ್ರಬಂಧ, ಪತ್ರ ಬರೆಯುವುದು (ಇಂಗ್ಲೀಷ್ ಅಥವಾ ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರ್ಪಡೆಯಾಗಿರುವ ದೇಶದ ಯಾವುದೇ ಭಾಷೆಯಲ್ಲಿ ಬರೆಯುವ ಅವಕಾಶ ಇದೆ.) ಇರುತ್ತದೆ. ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಅಧಿಕೃತ ಗುರುತು ಪತ್ರಗಳನ್ನು ತರಬೇಕು. ಅಪ್‌ಲೋಡ್ ಮಾಡುವ ಭಾವಚಿತ್ರ ಯಾವ ಮಾದರಿಯಲ್ಲಿರಬೇಕು ಎನ್ನುವುದನ್ನು ವೆಬ್‌ಸೈಟ್‌ನಲ್ಲಿ ವಿವರವಾಗಿ ತಿಳಿಸಲಾಗಿದೆ.

■ **ಅರ್ಜಿ ಸಲ್ಲಿಕೆಗೆ ಕೊನೇ ದಿನ: 30-1-2017**

■ **ಪರೀಕ್ಷೆ: ಏಪ್ರಿಲ್ 16, 30 ಹಾಗೂ ಮೇ 7**

ವೆಬ್‌ಸೈಟ್: ssc.nic.in, ssconline.nic.in, ssckkr.kar.nic.in

ಹೆಚ್ಚಿನ ಮಾಹಿತಿಗೆ ಪ್ರಾದೇಶಿಕ ಹೆಲ್ಪ್‌ಲೈನ್ ದೂರವಾಣಿ ಸಂಖ್ಯೆ-080-25502520.

# IOCL 56 ಜೂನಿಯರ್ ಇಂಜಿನಿಯರ್ ಹುದ್ದೆಗಳಿಗೆ ಅರ್ಜಿ ಆಹ್ವಾನ

'ಫಾರ್ಚ್ಯೂನ್ ಗ್ಲೋಬಲ್ - 500' ಪಟ್ಟಿಯಲ್ಲಿ ಜಾಗತಿಕವಾಗಿ 161 ರ್‍ಯಾಂಕಿಂಗ್ ಹೊಂದಿರುವ ಇಂಡಿಯನ್ ಆಯಿಲ್ (ಐಒಸಿಎಲ್- ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್) ಕಂಪನಿಯು ದೇಶದ ಇಂಧನ ಕ್ಷೇತ್ರದಲ್ಲಿ ಜನಪ್ರಿಯ ಕಂಪನಿಯಾಗಿ ಗುರುತಿಸಿಕೊಂಡಿದೆ. ಇದರ ಹತ್ತಾರು ಇಂಧನ ಸಂಸ್ಕರಣಾ ಘಟಕಗಳು ದೇಶದ ವಿವಿದ ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅಸ್ಸಾಂನ ಧಲಿಗಾಂವ್‌ನಲ್ಲಿರುವ ಇಂಡಿಯನ್ ಆಯಿಲ್ ಸಂಸ್ಕರಣಾ ಘಟಕದಲ್ಲಿ ಪ್ರಸ್ತುತ 56 ಜೂನಿಯರ ಇಂಜಿನಿಯರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಂಜಿನಿಯರಿಂಗ್ ಡಿಪ್ಲೊಮಾ/ಬಿ.ಎಸ್ಸಿ ಪದವಿ ಹೊಂದಿರುವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಬಹುದು.

■ **ಹುದ್ದೆಗಳ ವಿಂಗಡಣೆ:**

- **ಜೂನಿಯರ್ ಇಂಜಿನಿಯರಿಂಗ್ ಅಸಿಸ್ಟೆಂಟ್**
  - ❍ ಪ್ರೊಡಕ್ಷನ್-28
  - ❍ ಪವರ್ ಆ್ಯಂಡ್ ಯುಟಿಲಿಟಿ-13 ಎಲೆಕ್ಟ್ರಿಕಲ್-1
  - ❍ ಫೈರ್ ಆ್ಯಂಡ್ ಸೇಫ್ಟಿ-2
  - ❍ ಇನ್‌ಸ್ಟ್ರುಮೆಂಟೇಷನ್ - 2
- **ಜೂನಿಯರ್ ಮೆಟೀರಿಯಲ್ ಅಸಿಸ್ಟೆಂಟ್ -9**
- **ಜೂನಿಯರ್ ಕ್ವಾಲಿಟಿ ಕಂಟ್ರೋಲ್ ಅನಾಲಿಸ್ಟ್-1**

■ **ವಯೋಮಿತಿ:**
ಕನಿಷ್ಠ 18 ರಿಂದ ಗರಿಷ್ಠ 26 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳು ಮತ್ತು ಅಂಗವಿಕಲ ಅಭ್ಯರ್ಥಿಗೆ ಹೆಚ್ಚುವರಿ 10 ವರ್ಷ ವಯೋ ಸಡಿಲಿಕೆ ಇದೆ.

■ **ವಿದ್ಯಾರ್ಹತೆ:**
ಜೂನಿಯರ್ ಇಂಜಿನಿಯರಿಂಗ್ ಅಸಿಸ್ಟೆಂಟ್ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಆಯಾ ವಿಭಾಗಕ್ಕೆ ಸಂಬಂಧಿಸಿದ ವಿಷಯದಲ್ಲಿ (ಕೆಮಿಕಲ್/ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್/ಮೆಕಾನಿಕಲ್/ಎಲೆಕ್ಟ್ರಿಕಲ್/ಇನ್‌ಸ್ಟ್ರುಮೆಂಟೇಷನ್/ಫೈರ್ ಆ್ಯಂಡ್ ಸೇಫ್ಟಿ) 3 ವರ್ಷಗಳ ಇಂಜಿನಿಯರಿಂಗ್ ಡಿಪ್ಲೊಮಾ, ಜೂನಿಯರ ಮೆಟರೀಯಲ್ ಅಸಿಸ್ಟೆಂಟ್ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಎಲೆಕ್ಟ್ರಿಕಲ್ ವಿಷಯದಲ್ಲಿ 3 ವರ್ಷಗಳ ಇಂಜಿನಿಯರಿಂಗ್ ಡಿಪ್ಲೊಮಾ, ಜೂನಿಯರ್ ಕ್ವಾಲಿಟಿ ಕಂಟ್ರೋಲ್ ಅನಾಲಿಸ್ಟ್ ಹುದ್ದೆಗೆ ಭೌತಶಾಸ್ತ್ರ/ರಸಾಯನಶಾಸ್ತ್ರ/ಗಣಿತ ವಿಷಯದಲ್ಲಿ ಬಿಎಸ್ಸಿ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

■ **ಅರ್ಜಿ ಸಲ್ಲಿಸುವ ವಿಧಾನ:**
ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆಯನ್ನು ನೀಡಲಾಗಿದ್ದು, ಪೂರ್ಣ ವಿವರಗಳನ್ನು ಭರ್ತಿ ಮಾಡಿ (ಟೈಪ್ ಮಾಡಿದ ರೂಪದಲ್ಲಿ ಮಾತ್ರ) ಅಗತ್ಯ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಲಗತ್ತಿಸಿ ಸಂಬಂಧಿಸಿದ ವಿಳಾಸಕ್ಕೆ 2017ರ ಜನವರಿ 23ರ ಒಳಗೆ ತಲುಪುವಂತೆ ಕಳುಹಿಸಬೇಕು. ಡಿಡಿ ರೂಪದಲ್ಲಿ ರೂ. 100(ಎಸ್‌ಸಿ/ಎಸ್‌ಟಿ/ಅಂಗವಿಕಲ ಅಭ್ಯರ್ಥಿಗಳೀಗೆ ಶುಲ್ಕ ವಿನಾಯ್ತಿ ಇದೆ) ಅರ್ಜಿ ಶುಲ್ಕ ಪಾವತಿಸಬೇಕಾಗುತ್ತದೆ.

■ **ನೇಮಕಾತಿ ವಿಧಾನ:**
ಮೊದಲ ಹಂತದಲ್ಲಿ 100 ಅಂಕಗಳ ಲಿಖಿತ ಪರೀಕ್ಷೆ ಇರುತ್ತದೆ. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಎರಡನೇಹಂತದಲ್ಲಿ ಕೌಶಲ ಪರೀಕ್ಷೆ/ಕಾರ್ಯಕ್ಷಮತೆ/ದೈಹಿಕ ಸಾಮರ್ಥ್ಯ/ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತದೆ. ಎರಡನೇ ಹಂತದಲ್ಲಿ ಅರ್ಹತೆ ಗಳಿಸುವ ಅಭ್ಯರ್ಥಿಗಳಿಗೆ ಅಂತಿಮವಾಗಿ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯ.

■ **ಅರ್ಜಿ ಸಲ್ಲಿಸಬೇಕಾದ ವಿಳಾಸ:**
ಚೀಫ್ ಹ್ಯೂಮರ್ ರಿಸೋರ್ಸ್ ಮ್ಯಾನೇಜರ್,
ಐಒಸಿಎಲ್ (ಬೊಂಗೈಗಾಂವ್ ರಿಫೈನರಿ),
ಪೋಸ್ಟ್ ಆಫೀಸ್-ಧಲಿಗಾಂವ್,
ಚಿರಂಗ್ ಜಿಲ್ಲೆ-783 385 (ಅಸ್ಸಾಂ).

# ಗೃಹರಕ್ಷಕ ದಳಕ್ಕೆ ಅರ್ಜಿ ಆಹ್ವಾನ

**ಜಿ**ಲ್ಲಾ (ದಕ್ಷಿಣ) ಗೃಹರಕ್ಷಕ ದಳದಲ್ಲಿ ಖಾಲಿ ಇರುವ ಸ್ಥಾನಗಳಿಗೆ ಸ್ವಯಂ ಸೇವಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. 20 ರಿಂದ 40 ವರ್ಷದೊಳಗಿನ ಪುರುಷ ಹಾಗೂ ಮಹಿಳೆಯರು ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕರ್ತವ್ಯದಲ್ಲಿದ್ದಾಗ ದಿನವೊಂದಕ್ಕೆ 400 ರೂ. ಇತರೆ ನಗರ ಸ್ಥಳಗಳಲ್ಲಿ 325 ರೂ. ಕರ್ತವ್ಯಭತ್ಯೆ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಜಿಲ್ಲಾ ಗೃಹರಕ್ಷಕ ದಳ ನಗರ (ದಕ್ಷಿಣ) ಕಚೇರಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080-25541012ಗೆ ಸಂಪರ್ಕಿಸಬಹುದು.

# ಇಂಟಿರೀಯರ್ ಡಿಸೈನ್ ತರಗತಿಗೆ ಅರ್ಜಿ ಆಹ್ವಾನ

**ಮ**ಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಮಹಾವಿದ್ಯಾಲಯವು, ಕ್ರಿಯೇಟರ್ಸ್ ಅಂಡ್ ಡಿಸೈನರ್ಸ್‌ನ ಸಂಸ್ಥೆಯ ಸಹಯೋಗದೊಂದಿಗೆ ಆರು ತಿಂಗಳು ಮತ್ತು ಒಂದು ವರ್ಷದ ಇಂಟಿರೀಯರ್ ಡಿಸೈನ್ ತರಗತಿಗಳಿಗೆ ಅರ್ಜಿ ಆಹ್ವಾನಿಸಿದೆ.

ಜ.12ರಿಂದ ನಿತ್ಯ ಸಂಜೆ 3 ರಿಂದ 5ರವರೆಗೆ ತರಗತಿಗಳು ನಡೆಯಲಿದ್ದು, ಅರ್ಜಿ ಸಲ್ಲಿಕೆಗೆ ಜ.12 ಕೊನೆಯ ದಿನ. ಆಸಕ್ತರು ಮೊ: 8050027999 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶ್ರೀ ಭೈರವಿ ಜ್ಯೋತಿಷ್ಯಾಲಯ
ಎಂ.ಜಿ.ರಸ್ತೆ, ಚಿಕ್ಕಮಗಳೂರು-577101.
(ಉಚಿತ ಸಲಹೆ ಮತ್ತು ಉಚಿತ ಪರಿಹಾರ)

ಪಂಡಿತ್ ಅಶೋಕ್‌ಕುಮಾರ್
(ಕಾಳಿಕಾದೇವಿ ಆರಾಧಕರು)

ಇವರು ನಿಮ್ಮ ಜೀವನದ ಯಾವುದೇ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಪ್ರೇಮ ವಿಚಾರ, ಆರೋಗ್ಯ, ಸಂತಾನ, ವಶೀಕರಣ ಇನ್ನು ಮುಂತಾದ ಸಮಸ್ಯೆಗಳಿಗೆ ಅತಿ ಶೀಘ್ರ ಪರಿಹಾರ ನೀಡುತ್ತಾರೆ.
ವಶೀಕರಣ 100% ಗ್ಯಾರಂಟಿ ಪರಿಹಾರ
:: ಕೂಡಲೇ ಸಂಪರ್ಕಿಸಿ ::
9901632039
(ಜಾಹೀರಾತು)

ನೇವಿಯಲ್ಲಿ ನೇರ ನೇಮಕಾತಿ
**ಮರ್ಚೆಂಟ್‌ನ ನೇವಿಯಲ್ಲಿ** ಸೀಮ್ಯಾನ್, ಟೆಕ್ನಿಕಲ್ ಆಫೀಸರ್ ಮತ್ತು ನಾವಿಕರು ಹಾಗೂ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ.
ಸ್ಥಳ : ಮಂಗಳೂರು, ಕಾರವಾರ, ಗೋವಾ, ಮುಂಬಯಿ, ಕೋಲ್ಕತ್ತಾ, ಚೆನ್ನೈ, ಗುಜರಾತ್ ಹಾಗೂ ವಿದೇಶಗಳಲ್ಲಿ. ವಯಸ್ಸು : 17ರಿಂದ 28 ವರ್ಷ. ಸಂಬಳ: ರೂ. 25,000/- ದಿಂದ 50,000/- ವರೆಗೆ. ವಿದ್ಯಾರ್ಹತೆ: **SSLC/PUC, ITI, Degree, Diplomo Pass/Fail.** ಅಭ್ಯರ್ಥಿಗಳು ತಮ್ಮ **Marks Card & Photo, Biodata** ದೊಂದಿಗೆ ಈ ಕೆಳಕಂಡ **email** ಐಡಿಗೆ ಕಳುಹಿಸುವುದು ಹಾಗೂ ಕಡ್ಡಾಯವಾಗಿ ತಮ್ಮ ಮೊಬೈಲ್ ನಂಬರನ್ನು ನಮೂದಿಸುವುದು. ವಿದ್ಯಾರ್ಹತೆಗೆ ತಕ್ಕಂತೆ ಪೋಸ್ಟಿಂಗ್ ಇರುತ್ತದೆ.
M : 07249593790
(ಜಾಹೀರಾತು)




## ಪ್ರಚಲಿತ ಪ್ರಶ್ನೋತ್ತರಗಳು

1. ವಿಶ್ವದಲ್ಲಿ 'ಬೈಕಾಲ್' ಆಳವಾದ ಸಿಹಿ ನೀರಿನ ಸರೋವರ ಎಂದು ಖ್ಯಾತಿಯಾಗಿದೆ. ಇದು ಈ ಕೆಳಕಂಡ ಯಾವ ದೇಶದಲ್ಲಿ ಹರಿಯುತ್ತದೆ?
ಎ. ರಷ್ಯಾ ಬಿ. ಜರ್ಮನಿ
ಸಿ. ಅಮೆರಿಕ ಡಿ. ದಕ್ಷಿಣ ಆಫ್ರಿಕಾ

2. ಅತಿ ಹೆಚ್ಚು ದ್ವೀಪಗಳನ್ನು ಹೊಂದಿರುವುದರಿಂದ ಈ ದೇಶವನ್ನು 'ಅತಿದೊಡ್ಡ ದ್ವೀಪ ಸಮೂಹ ದೇಶ' ಎಂದು ಕರೆಯುತ್ತಾರೆ. ಆ ದೇಶ ಯಾವುದು?
ಎ. ಜಪಾನ್ ಬಿ. ಇಂಡೋನೇಷ್ಯಾ
ಸಿ. ಶ್ರೀಲಂಕಾ ಡಿ. ಭಾರತ (ಲಕ್ಷದ್ವೀಪ)

3. ನ್ಯಾಯಕ್ಕೆ ಸಂಬಂಧಿಸಿದಂತೆ ಬ್ಯಾಬಿಲೋನಿಯನ್ನರ ದೊರೆ ಹಮ್ಮುರಬಿ ರೂಪಿಸಿದ ಕಾಯ್ದೆಗಳನ್ನು ಯಾವ ಹೆಸರಿನಿಂದ ಕರೆಯಲಾಗುತ್ತದೆ?
ಎ. ಹಮ್ಮುರಬಿ ಶಾಸನ
ಬಿ. ಹಮ್ಮುರಬಿ ಕಿತಾಬ್
ಸಿ. ಹಮ್ಮುರಬಿ ಕೋಡ್
ಡಿ. ಹಮ್ಮುರಬಿ ನ್ಯಾಯ

4. ಕ್ರಿ.ಶ. 1230ರಲ್ಲಿ ದೆಹಲಿ ಸಿಂಹಾಸನವನ್ನೇರಿದ ಮೊದಲ ಹಾಗೂ ಏಕೈಕ ಮುಸ್ಲಿಂ ರಾಣಿ ಯಾರು?
ಎ. ಮುಮ್ತಾಜ್ ಬೇಗಂ
ಬಿ. ಪಾತಿಮಾ ಬೀಬಿ
ಸಿ. ಅಲ್ಲೂನಿ ಸುಲ್ತಾನ
ಡಿ. ರಜಿಯಾ ಸುಲ್ತಾನ

5. ಭಾರತದ ರಾಷ್ಟ್ರಲಾಂಛನದಲ್ಲಿ ಈ ಕೆಳಕಂಡ ಯಾವ ಪ್ರಾಣಿ ಕಾಣಸಿಗುವುದಿಲ್ಲ?
ಎ. ಚಿರತೆ ಬಿ. ಎತ್ತು
ಸಿ. ಕುದುರೆ ಡಿ. ಸಿಂಹ

6. ಸಾಹಿತಿ ಬೊಳುವಾರು ಮೊಹಮ್ಮದ್ ಕುಂಜ ಅವರ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಿದೆ?
ಎ. ಒದಿರಿ ಬಿ. ಸ್ವಾತಂತ್ರ್ಯದ ಓಟ
ಸಿ. ಆಕಾಶ ದೀಪ ಡಿ. ಅನಾಥ

7. ಭಾರತದಲ್ಲಿ ರೇಷ್ಮೆ ವಹಿವಾಟಿನ ಅತಿ ದೊಡ್ಡ ರೇಷ್ಮೆ ಮಾರುಕಟ್ಟೆ ಈ ಕೆಳಕಂಡ ಯಾವ ನಗರದಲ್ಲಿ ಇದೆ?
ಎ. ವಿಜಯವಾಡ ಬಿ. ಕಾಮಜೀವರಂ
ಸಿ. ರಾಮನಗರ ಡಿ. ಗುವಾಹಟಿ

8. ರಾಜ್ಯದಲಿ ನೆಲೆಸಿರುವ ಬುಡಕಟ್ಟು ಸೋಲಿಗ ಜನಾಂಗದವರ ಕುಲದೈವ ಯಾವುದು?
ಎ. ಮಹದೇಶ್ವರ
ಬಿ. ಮಂಟೇಸ್ವಾಮಿ
ಸಿ. ಸಿದ್ಧಪಾಜಿ
ಡಿ. ಬಿಳಿಗಿರಿ ರಂಗನಾಥಸ್ವಾಮಿ

9. ರಾಜ್ಯಸಭೆಯು ಸಂಸತ್ತಿನ ಮೇಲ್ಮನೆಯಾದರೆ, ಸಂಸತ್ತಿನ ಕೆಳಮನೆ ಯಾವುದು?
ಎ. ಲೋಕಸಭೆ ಬಿ. ವಿಧಾನ ಸಭೆ
ಸಿ. ಪರಿಷತ್ ಸಭೆ ಡಿ. ಯಾವುದು ಇಲ್ಲ

10. ಹಸಿರು ಕ್ರಾಂತಿ ಮೊದಲು ಈ ಕೆಳಕಂಡ ಯಾವ ರಾಜ್ಯಗಳಲ್ಲಿ ಉಂಟಾಯಿತು?
ಎ. ಪಂಜಾಬ್-ಹರಿಯಾಣ
ಬಿ. ಉತ್ತರ ಪ್ರದೇಶ-ದೆಹಲಿ
ಸಿ. ತಮಿಳುನಾಡು-ಕರ್ನಾಟಕ
ಡಿ. ರಾಜಸ್ತಾನ-ಗುಜರಾತ್

11. 2017ರ ಡಿಸೆಂಬರ್ ಅಂತ್ಯದ ವೇಳೆಗೆ ಚಂದ್ರನ ಮೇಲೆ ತನ್ನ ರೋವರ್ ನೌಕೆ ಇಳಿಸಲು ಯೋಜನೆ ರೂಪಿಸಿರುವ ಬೆಂಗಳೂರು ಮೂಲದ ಖಾಸಗಿ ಸಂಸ್ಥೆ ಯಾವುದು?
ಎ. ಟೀಂ ಇಂಡಸ್
ಬಿ. ಟೀಂ ಸೈನ್ಸ್
ಸಿ. ಟೀಂ ಮೂನ್
ಡಿ. ಟೀಂ ಆರ್ಯಭಟ

12. ರಾಜ್ಯಾದ್ಯಂತ 30 ಸಾವಿರ ಎಕರೆ ಭೂಮಿಯನ್ನು ಪರಿಶಿಷ್ಟ ಕೃಷಿ ಕಾರ್ಮಿಕರಿಗೆ ನೀಡಲು ರಾಜ್ಯ ಸರ್ಕಾರ ಯಾವ ವಿನೂತನ ಯೋಜನೆಯನ್ನು ಪ್ರಕಟಿಸಿದೆ?
ಎ. ಭೂಮಿ ನೆರವು ಬಿ. ಕೃಷಿ ಮಿತ್ರ
ಸಿ. ಭೂಮಾಲೀಕ ಡಿ. ಭೂದಾನ

13. ಭಾರತದಲ್ಲಿ ಸುಮಾರು ರೂ. 3,6000 ಕೋಟಿ ಮೌಲ್ಯದ ಆಗಸ್ಟಾ ವೆಸ್ಟ್‌ಲ್ಯಾಂಡ್ ಅವ್ಯವಹಾರ ಪ್ರಕರಣ ಈ ಕೆಳಕಂಡ ಯಾವುದಕ್ಕೆ ಸಂಬಂಧಿಸಿದೆ?
ಎ. ಯುದ್ಧ ವಿಮಾನ
ಬಿ. ಹೆಲಿಕಾಪ್ಟರ್
ಸಿ. ಜಲಂತರ್ಗಾಮಿ
ಡಿ. ಭೂಫಿರಂಗಿ

14. ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಯಟಿ)ಯನ್ನು ಕರ್ನಾಟಕದ ಯಾವ ಹಿಂದುಳಿದ ಜಿಲ್ಲೆಯಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.
ಎ. ಬಳ್ಳಾರಿ ಬಿ. ಧಾರವಾಡ
ಸಿ. ಕೊಪ್ಪಳ ಡಿ. ರಾಯಚೂರು

15. ರೂ. 1 ಕೋಟಿ ಬಹುಮಾನ ಒಳಗೊಂಡಿರುವ 'ಲಕ್ಕಿ ಗ್ರಾಹಕ', 'ಡಿಜಿ ಧನ್' ಯೋಜನೆಗಳನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದ್ದು, ಈ ಯೋಜನೆಗಳು ಯಾವುದಕ್ಕೆ ಸಂಬಂಧಿಸಿವೆ?
ಎ. ನಗದು ರಹಿತ ವಹಿವಾಟು
ಬಿ. ಸಾಲ ವಹಿವಾಟು
ಸಿ. ನಗದು ವಹಿವಾಟು
ಡಿ. ಯಾವುದು ಲ್ಲ

16. ಭಾರತೀಯ ಸೇನೆಯ ಪಾಕಿಸ್ತಾನ ವಿರುದ್ಧ 1971ರ ಯುದ್ಧದಲ್ಲಿ ವಿಜಯ ಸಾಧಿಸಿದ ದಿನವಾದ ಡಿಸೆಂಬರ್ 16ನ್ನು ಪ್ರತಿ ವರ್ಷ ಯಾವ ದಿನವನ್ನಾಗಿ ಆಚರಿಸಲಾಗುತ್ತದೆ?
ಎ. ಸಂಭ್ರಮ ದಿನ ಬಿ. ವಿಜಯ ದಿವಸ
ಸಿ. ಕಾರ್ಗಿಲ್ ದಿನ ಡಿ. ಶಾಂತಿ ದಿವಸ

17. ಬಂಗಾಳಿ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಯನ್ನು ಗುರುತಿಸಿ ಯಾವ ಹಿರಿಯ ಕವಿಗೆ 2016ರ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಲಾಗಿದೆ?
ಎ. ಜೆ. ಗೋಸ್ವಾಮಿ
ಬಿ. ಶಂಖ ಘೋಷ್
ಸಿ. ಲೀಲಾ ಮಜುಂದಾರ್
ಡಿ. ಆಶಾಪೂರ್ಣ ದೇವಿ

18. ಮೌಲಾನಾ ಅಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯವು ಇತ್ತೀಚೆಗೆ ಯಾವ ಬಾಲಿವುಡ್ ನಟನಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ?
ಎ. ಶಾರೂಕ್ ಖಾನ್
ಬಿ. ಸಲ್ಮಾನ್ ಖಾನ್
ಸಿ. ಅಕ್ಷಯ್ ಕುಮಾರ್
ಡಿ. ದಿಲೀಪ್ ಕುಮಾರ್

19. ದಕ್ಷಿಣ ಭಾರತದಲ್ಲೇ ಮೊದಲನೆಯದಾದ 'ಕೆನಾಲ್ ಸೋಲಾರ್' ಸೌರಶಕ್ತಿ ಯೋಜನೆಯು ರಾಜ್ಯದ ಯಾವ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿದೆ?
ಎ. ಮಂಗಳೂರು ಬಿ. ವಿಜಯಪುರ
ಸಿ. ಮೈಸೂರು ಡಿ. ದಾವಣಗೆರೆ

20. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಉಪ ಗವರ್ನರ್ ಆಗಿ ವಿ.ವಿ. ಆಚಾರ್ಯ ನೇಮಕಗೊಂಡಿದ್ದಾರೆ. ದೆಹಲಿಯ ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ಯಾರು ನೇಮಕವಾಗಿದ್ದಾರೆ?
ಎ. ನಜೀಬ್ ಜಂಗ್
ಬಿ. ಅನಿಲ್ ಬೈಜಾಲ್
ಸಿ. ಎಲ್.ವೈ. ಕರುಣಾಕರನ್
ಡಿ. ಡಾ. ರಂಗರಾಜನ್

21. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷರಾಗಿ, ನೀತಿ ಆಯೋಗದ ಕಾರ್ಯದರ್ಶಿಯಾಗಿದ್ದ ಇವರು ನೇಮಕಗೊಂಡಿದ್ದಾರೆ.
ಎ. ಚಂದ್ರಾಸಿಂಗ್
ಬಿ. ಮಲಿಕ್ ಸಿಂಗ್
ಸಿ. ಯುದ್ಧವೀರ್ ಸಿಂಗ್ ಮಲಿಕ್
ಡಿ. ರಾಘವ್ ಚಂದ್ರ

22. ರಾಜ್ಯದ ಇತಿಹಾಸದಲ್ಲಿಯೇ ನ್ಯಾಯಾಲಯದ ಕಟಕಟೆಯಲ್ಲಿ ನಿಂತ ಮೊದಲ ನಿವೃತ್ತ ನ್ಯಾಯಮೂರ್ತಿ ಎಂಬ ಕುಖ್ಯಾತಿಗೆ ಗುರಿಯಾಗಿರುವವರು,
ಎ. ಸಂತೋಷ್ ಹೆಗ್ಡೆ
ಬಿ. ರಾ.ಭಾಸ್ಕರ ಮೂರ್ತಿ
ಸಿ. ವೆಂಕಟಾಚಲಯ್ಯ
ಡಿ. ವೈ. ಭಾಸ್ಕರ್ ರಾವ್

23. ತಮಿಳುನಾಡಿನ ಮುಖ್ಯಮಂತ್ರಿ ಕುಮಾರಿ ಜಯಲಲಿತಾರವರು ದಿನಾಂಕ: 5-12-2016 ರಂದು ಅನಾರೋಗ್ಯದಿಂದ ನಿಧನರಾದರು. ಇವರ ಮೂಲ ಹೆಸರಿದು,
ಎ. ಕೋಮಲವಲ್ಲಿ ಬಿ. ನಾಗವಲ್ಲಿ
ಸಿ. ಶ್ರೀವಲ್ಲಿ ಡಿ. ಮೃದುಲ

24. ತಮಿಳುನಾಡು ಮುಖ್ಯಮಂತ್ರಿ ಜಯಲಲಿತರು ನಿಧನಾನಂತರ ಇವರು ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದರು.
ಎ. ಶಶಿಕಲಾ ಬಿ. ಓ.ಪನ್ನೀರ್ ಸೆಲ್ವಂ
ಸಿ. ಪಳನಿಯಪ್ಪನ್ ಡಿ. ಸುಧಾಕರ

25. ದಿವಂಗತ, ಮಾಜಿ ಸಿಎಂ ಜಯಲಲಿತರು ಹುಟ್ಟಿದ ಊರು ಇದು.
ಎ. ಮಂಡ್ಯ ಬಿ. ಮೇಲುಕೋಟೆ
ಸಿ. ಮೈಸೂರು ಡಿ. ಚೆನ್ನೈ

26. ದಿ. ಮಾಜಿ ಸಿಎಂ ಜಯಲಲಿತಾರವರು ಶ್ರೀರಂಗಪಟ್ಟಣ ತಾಲ್ಲೂಕಿನ ಈ ಊರಿನಲ್ಲಿ ನೃತ್ಯ ಪ್ರದರ್ಶನದಿಂದ ಹಣ ಸಂಗ್ರಹಿಸಿ, ಶಾಲಾ ಕಟ್ಟಡಕ್ಕೆ ನೆರವಾಗಿದ್ದರು.
ಎ. ಹೊಳವನಹಳ್ಳಿ ಬಿ. ಬೆಳವನಹಳ್ಳಿ
ಸಿ. ಸೊರವನಹಳ್ಳಿ ಡಿ. ನಗುವನಹಳ್ಳಿ

27. ಅಗಸ್ಟಾ ವೆಸ್ಟ್‌ಲ್ಯಾಂಡ್ ವಿವಿಐಪಿ ಕಾಪ್ಟರ್ ಹಗರಣಕ್ಕೆ ಸಂಬಂಧಿಸಿ ವಾಯುಪಡೆಯ ನಿವೃತ್ತ ಮುಖ್ಯಸ್ಥರಾಗಿದ್ದ ಇವರನ್ನು ಸಿಬಿಐ ತನಿಖೆಗಾಗಿ ವಶಕ್ಕೆ ಪಡೆದಿದೆ.
ಎ. ಎಸ್.ಪಿ. ತ್ಯಾಗಿ
ಬಿ. ಜ್ಯೂಲಿತ್ಯಾಗಿ
ಸಿ. ಗೌತಮ್
ಡಿ. ಸುಜಿತ್ ಸೌರಭ್

28. ಭಾರತೀಯ ಭೂಸೇನೆಯ ನೂತನ ದಳಪತಿಗಳ ನೇಮಕವಾಗಿದ್ದು ಇವರು ಭೂಸೇನೆಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.
ಎ. ಅರೂಪ್‌ರಾಹಾ
ಬಿ. ಬಿಪಿನ್ ರಾವರ್
ಸಿ. ಜನರಲ್ ಸುಹಾಗ್
ಡಿ. ಬಿ.ಎಸ್.ಧನೋವಾ

29. 2016ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಕನ್ನಡದ ಹಿರಿಯ ಸಾಹಿತಿ ಬೋಳುವಾರು ಮಹಮ್ಮದ್ ಕುಂಞ ಅವರ ಈ ಕೃತಿಗೆ ಲಭಿಸಿದೆ.
ಎ. ಸ್ವಾಭಿಮಾನದ ಓಟ
ಬಿ. ಸ್ವಾವಲಂಬಿ ಓಟ
ಸಿ. ಸ್ವಾತಂತ್ರ್ಯದ ಓಟ
ಡಿ. ಸ್ವಾನುಭವದ ಓಟ

30. 52ನೇ ಜ್ಞಾನಪೀಠ ಪ್ರಶಸ್ತಿಗೆ ಬಂಗಾಳದ ಕವಿಯಾಗಿರುವ ಇವರು ಇವರ ಕಾವ್ಯ ಮತ್ತು ವಿಮರ್ಶೆಯಲ್ಲಿ ಸಾಧನೆ ಗುರುತಿಸಿ ಆಯ್ಕೆಯಾಗಿದ್ದಾರೆ.
ಎ. ಶಂಖನಾದ
ಬಿ. ಶಂಕರ್ ಘೋಷ್
ಸಿ. ಶಂಕರ ವಿಲಾಸ
ಡಿ. ಶಂಖಘೋಷ್

31. ಈ ರಾಜ್ಯದಲ್ಲಿ ಆಡಳಿತದಲ್ಲಿರುವ ಸಮಾಜವಾದಿ ಪಕ್ಷದಲ್ಲಿ ಒಡಕು ಉಂಟಾಗಿದ್ದು ತಂದೆ ಮಗನನ್ನೇ ಪಕ್ಷದಿಂದ ಉಚ್ಚಾಟಿಸಿ ಮತ್ತೆ ರದ್ದು ಮಾಡಿದ ನಾಟಕ ನಡೆಯಿತು.
ಎ. ಉತ್ತರ ಪ್ರದೇಶ
ಬಿ. ಮಧ್ಯ ಪ್ರದೇಶ
ಸಿ. ಬಿಹಾರ
ಡಿ. ಹಿಮಾಚಲ ಪ್ರದೇಶ

32. ಮೀಸಲು ಅರಣ್ಯ ಒತ್ತುವರಿ ಮಾಡಿಕೊಂಡು ಆಶ್ರಯ ಕಂಡುಕೊಂಡಿದ್ದ ಕೊಡಗು ಜಿಲ್ಲೆಯ ಈ ಊರಿನ ಜನರನ್ನು ಸರ್ಕಾರ ಒಕ್ಕಲೆಬ್ಬಿಸಿದ್ದರಿಂದ ಬೆತ್ತಲೆ ಪ್ರತಿಭಟನೆ ನಡೆಸಿದರು.
ಎ. ಕೌದಳ್ಳಿ ಬಿ. ದಿಡ್ಡಳ್ಳಿ
ಸಿ. ಕಾಡಳ್ಳಿ ಡಿ. ಗುಡ್ಡಳ್ಳಿ

33. ಅರುಣಾಚಲ ಪ್ರದೇಶದಲ್ಲಿ ಇತ್ತೀಚಿನ ರಾಜಕೀಯ ಬೆಳವಣಿಗೆಯಿಂದಾಗಿ ಪಿಪಿಎ ಆಡಳಿತ ಪಕ್ಷವಾಗಿತ್ತು. ಈಗ ಬಿಜೆಪಿಯ ಇವರು ಮುಖ್ಯಮಂತ್ರಿಯಾದರು.
ಎ. ತೇನ್‌ಸಿಂಗ್ ನೊರ್ಬು
ಬಿ. ಕಾಫಾ ಬೆಂಗಿಯಾ
ಸಿ. ಪೆಮಾಖಂಡು
ಡಿ. ಚೌನಾಮೇನ್

34. ಬೆಂಗಳೂರು ನಗರದ 32ನೇ ಪೊಲೀಸ್ ಆಯುಕ್ತರಾಗಿ ಇವರು ಅಧಿಕಾರವನ್ನು ಇತ್ತೀಚೆಗೆ ವಹಿಸಿಕೊಂಡರು.
ಎ. ಪ್ರಕಾಶ ಮಿರ್ಜಿ
ಬಿ. ಎನ್.ಎಸ್. ಮೆಘರಿಕ್
ಸಿ. ಭಾಸ್ಕರ ರಾವ್
ಡಿ. ಪ್ರವೀಣ್ ಸೂದ್

35. ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದ ಹೆಚ್.ಎಸ್.ಮಹದೇವ ಪ್ರಸಾದ್, ದಿನಾಂಕ 3-1-17ರಂದು ನಿದ್ದೆಯಲ್ಲೇ ವಿಧಿವಶರಾದರು. ಇವರು ಈ ಖಾತೆಯ ಮಂತ್ರಿಯಾಗಿದ್ದರು.
ಎ. ಸಹಕಾರ ಮತ್ತು ಸಕ್ಕರೆ ಬಿ. ಆರೋಗ್ಯ
ಸಿ. ಪ್ರವಾಸೋದ್ಯಮ ಡಿ. ಶಿಕ್ಷಣ

### ಉತ್ತರಗಳು

| | | | |
|---|---|---|---|
| 1. (ಎ) | 10. (ಎ) | 19. (ಬಿ) | 28. (ಬಿ) |
| 2. (ಬಿ) | 11. (ಎ) | 20. (ಬಿ) | 29. (ಸಿ) |
| 3. (ಸಿ) | 12. (ಸಿ) | 21. (ಸಿ) | 30. (ಡಿ) |
| 4. (ಡಿ) | 13. (ಬಿ) | 22. (ಡಿ) | 31. (ಎ) |
| 5. (ಎ) | 14. (ಡಿ) | 23. (ಎ) | 32. (ಬಿ) |
| 6. (ಬಿ) | 15. (ಎ) | 24. (ಬಿ) | 33. (ಸಿ) |
| 7. (ಸಿ) | 16. (ಬಿ) | 25. (ಸಿ) | 34. (ಡಿ) |
| 8. (ಡಿ) | 17. (ಬಿ) | 26. (ಡಿ) | 35. (ಎ) |
| 9. (ಎ) | 18. (ಎ) | 27. (ಎ) | |

# MEGಯಲ್ಲಿ 249 ವಿವಿಧ ಹುದ್ದೆಗಳು

ಮದ್ರಾಸ್ ಸ್ಯಾಪರ್ ಎಂದೇ ಹೆಸರುವಾಸಿಯಾಗಿರುವ ಬೆಂಗಳೂರಿನಲ್ಲಿರುವ ಎಚ್‌ಕ್ಯು-ಮದ್ರಾಸ್ ಇಂಜಿನಿಯರ್ ಗ್ರೂಪ್ ಸೆಂಟರ್ (ಎಇಜಿ), ಭಾರತೀಯ ಸೇನೆಯ ಇಂಜಿನಿಯರಿಂಗ್ ವಿಭಾಗದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಬ್ರಿಟಿಷರ ಕಾಲದ ಮದ್ರಾಸ್ ಸರ್ಕಾರದ ಆಳ್ವಿಕೆ ಸಂದರ್ಭದಲ್ಲಿ ಸ್ಥಾಪಿತವಾದ ಇದು (ಪ್ರಾರಂಭದಲ್ಲಿ ಮದ್ರಾಸ್‌ನಲ್ಲಿದ್ದ ಕಚೇರಿಯನ್ನು ನಂತರ ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ), ಅನೇಕ ಐತಿಹಾಸಿಕ ಯುದ್ಧಗಳಲ್ಲಿ ಭಾಗಿಯಾಗಿದೆ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳಿಗೆ ಭಾಜನವಾಗಿದೆ. ಪ್ರಸ್ತುತ, ಈ ಸಂಸ್ಥೆಯಲ್ಲಿ ಕುಕ್, ವಾಷರ್‌ಮನ್ ಸೇರಿದಂತೆ 11 ವೃಂದಗಳ 249 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

**ಹುದ್ದೆಗಳ ವಿಂಗಡಣೆ**

| ಹುದ್ದೆಗಳ ವಿವರ | ಹುದ್ದೆ ಸಂಖ್ಯೆ |
|---|---|
| ಲೋವರ್ ಡಿವಿಷನ್ ಕ್ಲರ್ಕ್ | 1 |
| ಸ್ಟೋರ್ ಕೀಪರ್ | 1 |
| ಟೈಪಿಸ್ಟ್ | 1 |
| ಸಿವಿಲಿಯನ್ ಟ್ರೇಡ್ ಇನ್‌ಸ್ಟ್ರಕ್ಟರ್ | 11 |
| ಕುಕ್ | 92 |
| ಬೂಟ್ ಮೇಕರ್ | 19 |
| ಲಸ್ಕರ್ | 7 |
| ಮಲ್ಟಿ ಟಾಸ್ಕಿಂಗ್ ಸ್ಟಾಫ್ | 60 |
| ವಾಷರ್‌ಮನ್ | 27 |
| ಬಾರ್ಬರ್ | 27 |
| ಟೈಲರ್ | 2 |

■ **ವೇತನ:**
ಪ್ರಾರಂಭಿಕ 5 ವೃಂದಗಳ ಹುದ್ದೆಗಳಿಗೆ ಮಾಸಿಕ ರೂ. 19,900 ಮತ್ತು ನಂತರದ 6 ವೃಂದಗಳ ಹುದ್ದೆಗಳಿಗೆ ಮಾಸಿಕ ರೂ. 18,000 ವೇತನ ನಿಗದಿಪಡಿಸಲಾಗಿದೆ.

■ **ವಯೋಮಿತಿ:**
ಕನಿಷ್ಠ 20 ರಿಂದ ಗರಿಷ್ಠ 25 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಕೆ ಇದೆ.

■ **ಅರ್ಹತೆ:**
ಲೋವರ್ ಡಿವಿಷನ್ ಕ್ಲರ್ಕ್ ಹುದ್ದೆಗೆ ಪಿಯುಸಿ/ತತ್ಸಮಾನ ಜತೆಗೆ ಕಂಪ್ಯೂಟರ್ ಮತ್ತು ಟೈಪಿಂಗ್ ಜ್ಞಾನ, ಸ್ಟೋರ್ ಕೀಪರ್ ಹುದ್ದೆಗೆ ಪಿಯು/ತತ್ಸಮಾನ ಜತೆಗೆ ಕಂಪ್ಯೂಟರ್ ಜ್ಞಾನ ಹಾಗೂ 1 ವರ್ಷದ ಕಾರ್ಯಾನುಭವ, ನಂತರದ ಎಲ್ಲ 9 ವೃಂದದ ಹುದ್ದೆಗಳಿಗೆ ಅನ್ವಯವಾಗುವಂತೆ ಮೆಟ್ರಿಕ್ಯುಲೇಷನ್/ತತ್ಸಮಾನ ಜತೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಕೌಶಲ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

■ **ಅರ್ಜಿ ಸಲ್ಲಿಸುವ ವಿಧಾನ:**
ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆ ನೀಡಲಾಗಿದ್ದು, ಪ್ರಿಂಟ್ ಪಡೆದು ಭರ್ತಿ ಮಾಡಿದ ಅರ್ಜಿ ಜತೆಗೆ ಅಗತ್ಯ ಮೂಲ ದಾಖಲೆಗಳನ್ನು (ಗೆಜೆಟೆಡ್ ಅಧಿಕಾರಿಗಳಿಂದ ಅಟೆಸ್ಟೆಡ್ ಮಾಡಿಸಿದ) ಲಗತ್ತಿಸಿ ಸಂಬಂಧಿಸಿದ ವಿಳಾಸಕ್ಕೆ ಕಳುಹಿಸಬೇಕು. ನೇರ ಸಂದರ್ಶನದ ಸಮಯದಲ್ಲಿ ಇವುಗಳನ್ನು ಹಾಜರುಪಡಿಸಬೇಕು. ಅರ್ಜಿಶುಲ್ಕ ರೂ. 500 (ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ) ಅರ್ಜಿಶುಲ್ಕ ಡಿಡಿ ರೂಪದಲ್ಲಿ ಸಲ್ಲಿಸಬೇಕಾಗುತ್ತದೆ.

■ **ನೇಮಕಾತಿ ವಿಧಾನ:**
ಮೊದಲ ಹಂತದಲ್ಲಿ ಲಿಖಿತ ಪರೀಕ್ಷೆ ಇರುತ್ತದೆ. ಇದರಲ್ಲಿ ಅಂಕಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಬಳಿಕ, ಆ ಅಭ್ಯರ್ಥಿಗಳಿಗೆ ಕೌಶಲ ಪರೀಕ್ಷೆ ಮತ್ತು ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯವಾಗುತ್ತದೆ.

■ **ವಿಳಾಸ:**
ದ ಸಿವಿಲಿಯನ್ ಎಸ್ಟಾಬ್ಲಿಷ್‌ಮೆಂಟ್ ಆಫೀಸರ್, ಸಿವಿಲಿಯನ್ ರೆಕ್ರ್ಯುಟ್‌ಮೆಂಟ್ ಸೆಲ್, ಎಚ್ ಕ್ಯು ಎಂಇಜಿ ಆ್ಯಂಡ್ ಸೆಂಟರ್, ಸಿವಾನ್ ಚೆಟ್ಟಿ ಗಾರ್ಡನ್, ಬೆಂಗಳೂರು - 560 042.

■ **ಅರ್ಜಿ ಸಲ್ಲಿಸಲು ಕೊನೇ ದಿನ: 16-1-2017.**
ವೆಬ್‌ಸೈಟ್: www.indianarmy.nic.in

# 100 ಎನ್‌ಎಲ್‌ಸಿಯಲ್ಲಿ ಗ್ರ್ಯಾಜುಯೇಟ್ ಎಗ್ಸಿಕ್ಯುಟಿವ್ ಟ್ರೈನಿ ಹುದ್ದೆಗಳು

ಎನ್‌ಎಲ್‌ಸಿ ಇಂಡಿಯಾ ಲಿಮಿಟೆಡ್‌ನಲ್ಲಿ ಗ್ರ್ಯಾಜುಯೇಟ್ ಎಗ್ಸಿಕ್ಯುಟಿವ್ ಟ್ರೈನಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬಿಇ/ಬಿ.ಟೆಕ್ ವಿದ್ಯಾರ್ಹತೆ ಜತೆಗೆ 2017ನೇ ಸಾಲಿನ ಗೇಟ್ ಪರೀಕ್ಷೆ ಪಾಸು ಮಾಡಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

■ **ಹುದ್ದೆ ಹೆಸರು :ಗ್ರ್ಯಾಜುಯೇಟ್ ಎಗ್ಸಿಕ್ಯುಟಿವ್ ಟ್ರೈನಿ (ಜಿಇಟಿ)**

■ **ವಿಭಾಗಾವಾರು ಖಾಲಿ ಹುದ್ದೆಗಳು:**
- ಮೆಕಾನಿಕಲ್ - 50
- ಎಲೆಕ್ಟ್ರಿಕಲ್ - 15
- ಎಲೆಕ್ಟ್ರಾನಿಕ್ಸ್ - 5
- ಸಿವಿಲ್ - 10
- ಕಂಟ್ರೋಲ್ ಆ್ಯಂಡ್ ಇನ್‌ಸ್ಟ್ರುಮೆಂಟೇಷನ್ - 5
- ಮೈನಿಂಗ್ - 10
- ಕಂಪ್ಯೂಟರ್ - 5

■ **ವೇತನ:** ರೂ. 20,600-46,500

■ **ವಯೋಮಿತಿ:** ಗರಿಷ್ಠ 30 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಎಕ ಇದೆ.

■ **ವಿದ್ಯಾರ್ಹತೆ:** ಮೆಕಾನಿಕಲ್/ಎಲೆಕ್ಟ್ರಾನಿಕ್ಸ್/ಎಲೆಕ್ಟ್ರಿಕಲ್/ಮೈನಿಂಗ್/ಸಿವಿಲ್/ಕಂಪ್ಯೂಟರ್ ಸೈನ್ಸ್/ಇನ್‌ಸ್ಟ್ರುಮೆಂಟೇಷನ್ ವಿಷಯದಲ್ಲಿ ಕನಿಷ್ಠ ಶೆ. 60(ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಶೇ. 50) ಅಂಕಗಳೊಂದಿಗೆ ಇಂಜಿನಿಯರಿಂಗ್ ಪದವಿ (ಬಿಇ/ಬಿ.ಟೆಕ್) ಜತೆಗೆ 2017ರ ಗೇಟ್ ಅರ್ಹತೆ ಗಳಿಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

■ **ಅರ್ಜಿ ಸಲ್ಲಿಸುವ ವಿಧಾನ:**
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಮೇಲುರುಜು ಹಾಕಿದ ಇತ್ತೀಚಿನ ಭಾವಚಿತ್ರ ಮತ್ತು ಅಗತ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬೇಕು. ಆನ್‌ಲೈನ್ ಪೇಮೆಂಟ್ ರೂಪದಲ್ಲಿ (ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಇಂಟರ್‌ನೆಟ್ ಬ್ಯಾಂಕಿಂಗ್) ರೂ. 300(ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ) ಅರ್ಜಿ ಶುಲ್ಕ ಸಲ್ಲಿಸಬೇಕಾಗುತ್ತದೆ.

■ **ನೇಮಕಾತಿ ವಿಧಾನ:**
ಸಲ್ಲಿಸಲಾದ ಅರ್ಜಿಗಳನ್ನು ಆಧರಿಸಿ ಗೇಟ್-2017ರಲ್ಲಿ ಪಡೆದ ಅಂಕಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯವಾಗುತ್ತದೆ.

■ **ಅರ್ಜಿ ಸಲ್ಲಿಕೆ ಪ್ರಾರಂಭ: 1-1-2017.**

■ **ಅರ್ಜಿ ಸಲ್ಲಿಸಲು ಕೊನೆಯ ದಿನ: 31-1-2017.**

■ **ವೆಬ್‌ಸೈಟ್ : www.nicindia.com**

# ಆರ್‌ಎಆರ್‌ಐನಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ರೀಜನಲ್ ಆಯುರ್ವೇದ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಖಾಲಿಯಿರುವ ಸೀನಿಯರ್ ಕನ್ಸಲ್ಟೆಂಟ್, ಜೂನಿಯರ್ ರಿಸರ್ಚ್ ಫೆಲೋ (ಆಯುರ್ವೇದ), ಫಾರ್ಮಾಸಿಸ್ಟ್, ಡ್ರೈವರ್ ಸೇರಿದಂತೆ ಒಟ್ಟು 11 ಹುದ್ದೆಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿವಿಧ ಹುದ್ದೆಗನುಗುಣವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಎಂಡಿ/ಎಂಎಸ್ ಜತೆಗೆ ಕಂಪ್ಯೂಟರ್ ಜ್ಞಾನ (ಎಂ.ಎಸ್. ಆಫೀಸ್), ಬಿಎಎಂಎಸ್, ಫಾರ್ಮಸಿಯಲ್ಲಿ ಡಿಪ್ಲೊಮಾ, 10ನೇ ತರಗತಿ (ಎಸ್‌ಎಸ್‌ಸಿ) ಜತೆಗೆ ಚಾಲನಾ ಪರವಾನಗಿ ಪತ್ರ ಇರುವವರು ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಹುದ್ದೆಗನುಗುಣವಾಗಿ ಸೀನಿಯರ್ ಕನ್ಸಲ್ಟೆಂಟ್‌ಗೆ ಗರಿಷ್ಠ ವಯೋಮಿತಿ 65, ಜೂ. ರಿಸರ್ಚ್ ಫೆಲೋ 35, ಫಾರ್ಮಾಸಿಸ್ಟ್ 27, ಡ್ರೈವರ್ ಹುದ್ದೆಗೆ ಗರಿಷ್ಠ 25 ವರ್ಷ ನಿಗದಿ ಮಾಡಲಾಗಿದೆ. ಎಸ್ಸಿ, ಎಸ್ಟಿ, ಒಬಿಸಿ ಅಭ್ಯರ್ಥಿಗಳಿಗೆ ಮೀಸಲಾತಿ ಲಭ್ಯವಿದ್ದು, ವಯೋ ಸಡಿಲಿಕೆ ನೀಡಲಾಗಿದೆ.

ಆಯ್ಕೆಯಾದವರು ಇನ್‌ಸ್ಟಿಟ್ಯೂಟ್‌ನ ಯಾವುದೇ ಶಾಖೆಗಳಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು. ನೇರ ಸಂದರ್ಶನವು 2017ರ ಜನವರಿ 12, 13ರಂದು ನಡೆಯಲಿದ್ದು, ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿವರಗಳುಳ್ಳ ಬಯೋಡೇಟಾ, ಪ್ರಮಾಣ ಪತ್ರ, ಶೈಕ್ಷಣಿಕ ಅರ್ಹತಾ ಪ್ರಮಾಣ ಪತ್ರಗಳೊಟ್ಟಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗೆ - bit.ly/2hmqRYx ಕ್ಲಿಕ್ ಮಾಡಿ.


## ನೇರ ಆಯ್ಕೆ

ಯಾವುದೇ ಕನ್ಸಲ್‌ಟೆನ್ಸಿ ಇಲ್ಲದೆ L.G. ಕಂಪನಿಯಲ್ಲಿ ನೇರ ನೇಮಕಾತಿ. SSLC, PUC, ITI, Degree, Diplomo ಯಾವುದೇ Qualification Pass / Fail ಆದಂತಹ ಯಾವುದೇ ಅಭ್ಯರ್ಥಿಗಳಿಗೆ 1050 ಪರ್ಮನೆಂಟ್ ಹುದ್ದೆಗಳಿಗೆ ಬಂದ ದಿನವೇ ವಸತಿಯೊಂದಿಗೆ ನೇರ ಆಯ್ಕೆ.

ತಿಂಗಳಿಗೆ 19,600–ರಿಂದ 30,800/- ಗಳಿಸುವ ಅವಕಾಶ

ಸ್ನೇಹ: 9902857006
9008624829
8970834219

(ಜಾಹೀರಾತು)

## ಮಹಿಳೆಯರಿಗೆ ಸುವರ್ಣಾವಕಾಶ

ಯೂನಿಕ್ ಹೋಂ ನರ್ಸಿಂಗ್ (ರಿ) ಸಂಸ್ಥೆಯ ವತಿಯಿಂದ ಗ್ರಾಮೀಣ ಭಾಗದ ಮಹಿಳೆಯರಿಗೆ ಆರ್ಥಿಕ ಉತ್ತೇಜನಕ್ಕಾಗಿ ಉಚಿತ ಹೋಂ ನರ್ಸಿಂಗ್ ತರಬೇತಿ ನೀಡಿ ಉದ್ಯೋಗ ಕೊಡಲಾಗುವುದು. ತರಬೇತಿ ಸಮಯದಲ್ಲಿ ರೂ. 6000/-ರಿಂದ ರೂ. 8000/- ಸಂಬಳ, ಊಟ, ವಸತಿ ಸೌಲಭ್ಯವಿರುತ್ತದೆ.

ವಿದ್ಯಾರ್ಹತೆ: 7th, SSLC, PUC.

ಆಸಕ್ತರು ತಕ್ಷಣ ಸಂಪರ್ಕಿಸಿ:



ಯೂನಿಕ್ ಹೋಂ ನರ್ಸಿಂಗ್(ರಿ)
(ಸರಕಾರಿ ನೊಂದಾಯಿತ ಸಂಸ್ಥೆ)

ಸ್ಟಾಲ್ ನಂ. 121, 1ನೇ ಮಹಡಿ, ಭವಾನಿ ಆರ್ಕೆಡ್, ಬಸವ ವನ ಎದುರುಗಡೆ, ಹಳೇ ಬಸ್‌ಸ್ಟ್ಯಾಂಡ್ ಹತ್ತಿರ, ಹುಬ್ಬಳ್ಳಿ
9844125671, 9620844472

ಅಭಿಮಾನ ಬಿಲ್ಡಿಂಗ್, 2ನೇ ಮಹಡಿ, ಕೃಷ್ಣಾ ಆಸ್ಪತ್ರೆ ಕೆಳಗಡೆ, ಕಾಳಿ ಆಂಬ್ರೈ, ಚೆನ್ನಮ್ಮ ಸರ್ಕಲ್ ಹತ್ತಿರ, ಬೆಳಗಾವಿ
98441256192, 9036586881

(ಜಾಹೀರಾತು)

## ಉದ್ಯೋಗಕಾಂಕ್ಷಿಗಳಿಗೊಂದು ಸುವರ್ಣಾವಕಾಶ

ಹೊಸ ವರ್ಷದ ಪ್ರಯುಕ್ತ ಪ್ರಖ್ಯಾತ S.B.M. ಕಂಪನಿಯಲ್ಲಿ 676 ವಿವಿಧ ಪರ್ಮನೆಂಟ್ ಪೋಸ್ಟ್‌ಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ವಿದ್ಯಾರ್ಹತೆ: S.S.L.C./ PUC = 213 ಹುದ್ದೆಗಳು
ITI / Diploma = 204 ಹುದ್ದೆಗಳು
Degree / P.G. = 259 ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಸಂದರ್ಶನದ ಸಮಯ : 10:15 AM to 4:30 PM

ವಯೋಮಿತಿ: ಕನಿಷ್ಠ 18 ವರ್ಷದಿಂದ ಗರಿಷ್ಠ 30 ವರ್ಷದ ಒಳಗೆ.

ತಿಂಗಳಿಗೆ : ರೂ.17,600/- ದಿಂದ ರೂ. 32,500/- ವರೆಗೆ + ಉಚಿತ ವಸತಿ

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ :-
8497858189 : ನಿತ್ಯಾ
9964259160 : ಅಂಜಲಿ
8553091969 : ಪ್ರೀತಿ

(ಜಾಹೀರಾತು)




ವಿನಯ್ ಭಟ್

# ಧ್ವನಿಯಿಂದ ಬದುಕು

(ಹಿನ್ನೆಲೆ ಧ್ವನಿಯ ವೃತ್ತಿಯ ಬಗ್ಗೆ ಮುಂದುವರೆದ ಲೇಖನ...)

ಈಗ ಅತಿ ಹೆಚ್ಚು ಚಾಲ್ತಿಯಲ್ಲಿರುವವರು ಎಂದರೆ ಸ್ವತಂತ್ರವಾಗಿ ಇದ್ದುಕೊಂಡು, ಹಿನ್ನೆಲೆ ಧ್ವನಿ ನೀಡುವವರು. ಇದು ಉತ್ತಮ ಆಯ್ಕೆಯೂ ಹೌದು. ಹಿನ್ನೆಲೆ ಧನಿಯಲ್ಲಿ ನಿಮಗೆ ನೈಪುಣ್ಯತೆ ಇದ್ದರೆ, ಒಂದೇ ಸಲ ಹಣಕ್ಕಾಗಿ ಆಸೆ ಪಡದೆ ಒಂದಿಷ್ಟು ದಿನ ಕಾಯುವ ತಾಳ್ಮೆ ಇದ್ದರೆ, ಎಲ್ಲಕ್ಕಿಂತ ಮುಖ್ಯವಾಗಿ ರಿಸ್ಕ್ ತೆಗೆದುಕೊಳ್ಳುವ ಎದೆಗಾರಿಕೆ ಇದ್ದರೆ ಇದು ಅತ್ಯುತ್ತಮ ಆಯ್ಕೆ. ನಿಮ್ಮ ಅನುಭವ, ಪರಿಪೂರ್ಣತೆ ಮತ್ತು ವ್ಯಾಪ್ತಿ ಹೆಚ್ಚಾಗುತ್ತಾ ಹೋದ ಹಾಗೆ, ಕೆಲಸಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಆಗ ನೀವು ನಿರಂತರ ಕೆಲಸದಲ್ಲಿ ಇರುತ್ತೀರಿ ಮತ್ತು ಕೈತುಂಬ ಹಣ ಗಳಿಸುತ್ತೀರಿ. ಇಲ್ಲಿಯೂ ಸಹ ಮೊದಲು ಹೇಳಿದ ಮಾತು ಪುನಹ ಅನ್ವಯವಾಗುತ್ತದೆ. ಹಿನ್ನೆಲೆ ಧ್ವನಿಯ ನೈಪುಣ್ಯತೆಯ ಜೊತೆಗೆ ಬೇರೆ ಯಾವುದಾದರೂ ಸ್ವತಂತ್ರವಾಗಿ ಕೆಲಸ ಮಾಡಬಲ್ಲ ನೈಪುಣ್ಯತೆ ನಿಮಗಿದ್ದರೆ, ಅದು ನಿಮಗೆ ಹೆಚ್ಚು ಅನುಕೂಲ. ಉದಾಹರಣೆಗೆ ಕಾರ್ಯಕ್ರಮಗಳಲ್ಲಿ ನಿರೂಪಕರಾಗಿ ಕೆಲಸ ಮಾಡುವುದು, ಬರೆಯುವುದು, ಅನುವಾದ ಮಾಡುವುದು, ಇಂತಹ ನೈಪುಣ್ಯತೆಗಳನ್ನು ನೀವು ಮೈಗೂಡಿಸಿಕೊಂಡರೆ ಆಗ ನಿಮ್ಮ ವೃತ್ತಿಗೆ ಹೆಚ್ಚು ಸ್ಥಿರತೆ ಬರುತ್ತಾದೆ.



ಇದೆಲ್ಲದಕ್ಕಿಂತಲೂ ಅತ್ಯುತ್ತಮ ಆಯ್ಕೆ ಎಂದರೆ, ಹಿನ್ನೆಲೆ ಧ್ವನಿಯ ಕೆಲಸವನ್ನು ಅರೆಕಾಲಿಕವಾಗಿ ಮಾಡುವುದು. ಆಗ ಹೆಚ್ಚು ಒತ್ತಡವೂ ಇರುವುದಿಲ್ಲ, ಜೀವನಕ್ಕೆ ಭದ್ರತೆಯೂ ಇರುತ್ತದೆ. ಜೊತೆಗೆ ಹೆಚ್ಚಿನ ಸ್ಥರತೆಯೂ ಇರುತ್ತದೆ.

ಹಣಕಾಸಿನ ವಿಷಯಕ್ಕೆ ಬಂದರೆ, ಕೆಲಸಕ್ಕೆ ಸೇರುವುದಕ್ಕಿಂತಲೂ ಸ್ವತಂತ್ರವಾಗಿ ಕೆಲಸ ಮಾಡುವುದೇ ಹೆಚ್ಚು ಲಾಭದಾಯಿಕ. ಸ್ವತಂತ್ರವಾಗಿ ಕೆಲಸ ಮಾಡುವವರಿಗೆ, ಅನುಭವ ಹಾಗೂ ಧ್ವನಿಯ ಗುಣಮಟ್ಟದ ಆಧಾರದ ಮೇಲೆ ಸಂಭಾವನೆಯೂ ಏರತೊಡಗುತ್ತದೆ. ಕೇವಲ ಧ್ವನಿ ನೀಡುತ್ತಲೇ ತಿಂಗಳಿಗೆ 30 ರಿಂದ 40 ಸಾವಿರ ಗಳಿಸುವವರೂ ಇದ್ದಾರೆ. ಮೊದಮೊದಲು ನಿಮ್ಮ ಧ್ವನಿಗೆ ನೀಡುವ ಮೊತ್ತವನ್ನು ನಿಮ್ಮಿಂದ ಕೆಲಸ ಬಯಸುವವರು ನಿಗದಿ ಮಾಡುತ್ತಾರೆ. ನಂತರ ಚೆಂಡು ನಿಮ್ಮ ಅಂಗಳದಲ್ಲಿ ಇರುತ್ತದೆ. ನಿಮ್ಮ ಧ್ವನಿಗೆ ನೀವೇ ಮೊತ್ತವನ್ನು ಫಿಕ್ಸ್ ಮಾಡಿಕೊಳ್ಳಬಹುದು.

ಮೊದಲೇ ಹೇಳಿದಂತೆ ಹಿನ್ನೆಲೆ ಧ್ವನಿಗೂ, ಕಂಠದಾನಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಇದು ವಾಡಿಕೆಯಲ್ಲಿ ಬಂದಿರುವ ವ್ಯತ್ಯಾಸ ಮಾತ್ರ. ಮೂಲ ಅರ್ಥವನ್ನು ತೆಗೆದುಕೊಂಡರೆ ಎರಡೂ ಒಂದೇ.

ನಿಮಗೆ ತಿಳಿದಿರುವ ಹಾಗೆ, ನಮ್ಮ ಹಲವಾರು ಕನ್ನಡ ಸಿನೇಮಾಗಳಲ್ಲಿ ಕನ್ನಡ ಬರದಿರುವ ಹಲವಾರು ಕಲಾವಿಧರು ಅಭಿನಯಿಸುತ್ತಾರೆ. ಅವರಿಗೆ ಭಾಷೆ ಬರದ ಕಾರಣ, ಕನ್ನಡ ಬರುವ ಬೇರೆ ಯಾರಾದರೂ ಅವರಿಗೆ ಮಾತು ನೀಡಬೇಕಾಗುತ್ತದೆ. ಅಂದರೆ ಅವರ ನಟನೆಗೆ ಬೇರೆಯವರು ಡಬ್ಬಿಂಗ್ ಮಾಡಬೇಕಾಗುತ್ತದೆ. ಕೆಲವೊಮ್ಮೆ ಕನ್ನಡ ಕಲಾವಿಧರಿಗೂ ಬೇರೆಯವರು ಡಬ್ಬಿಂಗ್ ಮಾಡುತ್ತಾರೆ. ಈ ರೀತಿ ಡಬ್ಬಿಂಗ್ ಮಾಡುವವರನ್ನು ಕಂಠದಾನ ಕಲಾವಿದರು ಎಂದು ಕರೆಯುವುದು ವಾಡಿಕೆ. ಇದನ್ನು ಹಿನ್ನೆಲೆ ಧ್ವನಿ ಎಂದು ಕೂಡಾ ಕರೆಯಬಹುದು ಕೆಲವರು ಹಾಗೆಯೇ ಕರೆಯುತ್ತಾರೆ ಕೂಡಾ.

ವೃತ್ತಿಯ ವಿಷಯಕ್ಕೆ ಬಂದರೆ ಮೇಲೆ ಹೇಳಿದ ಎಲ್ಲ ವಿಷಯಗಳೂ ಈ ವೃತ್ತಿಗೂ ಅನ್ವಯಿಸುತ್ತದೆ. ನಮ್ಮಲ್ಲಿ ಹೆಚ್ಚಿನವರು ಹಿನ್ನೆಲೆ ಧ್ವನಿ ಮತ್ತು ಕಂಠದಾನ, ಎರಡರಲ್ಲೂ ಪ್ರಾವಿಣ್ಯತೆ ಹೊಂದಿರುತ್ತಾರೆ. ಪ್ರಾರಂಭದಲ್ಲಿಯೇ ಹೇಳಿದಂತೆ, ಹಿನ್ನೆಲೆ ಧ್ವನಿ ಅಥವಾ ಕಂಠದಾನ ಕಲಾವಿಧರಾಗಲು ಅತಿ ಮುಖ್ಯವಾದದ್ದು ಧ್ವನಿಯ ಗುಣಮಟ್ಟ. ಅದನ್ನು ಯಾವಾಗಲೂ ಹಾಗೆಯೇ ಕಾಪಾಡಿಕೊಳ್ಳುವುದೂ ಸಹ ಅಷ್ಟೇ ಮುಖ್ಯ. ಅದಕ್ಕಾಗಿ ಶಿಸ್ತಿನ ಜೀವನ ಶೈಲಿ ಅಳವಡಿಸಿಕೊಳ್ಳುವುದು ಅವಶ್ಯ. ಆಹಾರದಲ್ಲಿ ಕಟ್ಟುನಿಟ್ಟು ಬಹಳ ಮುಖ್ಯ. ಚಟಗಳು ಧ್ವನಿಗೆ ಅಪಾಯಕಾರಿ ಆಗಬಲ್ಲವು. ಒಂದು ವೇಳೆ ಶಿಸ್ತು ಮರೆತರೆ, ಧ್ವನಿಯೂ ಹಾಳಾಗುತ್ತದೆ, ವೃತ್ತಿಯೂ ಮಗುಚಿ ಬೀಳುತ್ತದೆ.


## ‘ಉದ್ಯೋಗ ಸ್ಫೂರ್ತಿ’ ಉಡುಗೊರೆ

**‘ಉದ್ಯೋಗಂ ಪುರುಷ ಲಕ್ಷಣಂ’ ಎಂಬ ಗಾದೆ ಮಾತಿದೆ. ಆದರೆ ಉದ್ಯೋಗ ಎಲ್ಲಿ, ಹೇಗೆ ಮತ್ತು ಯಾವಾಗ ದೊರಕುತ್ತದೆ**

**ಮತ್ತು ಅದಕ್ಕೆ ಹೇಗೆ ಪ್ರಿಪೇರ್ ಆಗಬೇಕು ಎಂಬುದರ ಬಗ್ಗೆ ಯಾವುದೇ ಗಾದೆ ಇಲ್ಲ!**

**ಅದಕ್ಕಾಗಿ ಇರುವುದೇ ಈ ನಿಮ್ಮ ಉದ್ಯೋಗ ಸ್ಫೂರ್ತಿ.**

ಏಳನೇ ಕ್ಲಾಸ್ ಪಾಸಾದವರಿಂದ ಹಿಡಿದು ಡಬಲ್ ಡಿಗ್ರಿ ಓದಿರುವ ವಿದ್ಯಾರ್ಥಿಗಳವರೆಗೆ ಕೇಂದ್ರ ಹಾಗೂ ರಾಜ್ಯದ ಸರ್ಕಾರಿ-ಅರೆ ಸರ್ಕಾರಿ ಮತ್ತು ಖಾಸಗಿ ಕಂಪನಿಗಳಲ್ಲಿರುವ ಖಾಲಿ ಹುದ್ದೆಗಳ ಸಂಪೂರ್ಣ ಮಾಹಿತಿಯೊಂದಿಗೆ ‘ಉದ್ಯೋಗ ಸ್ಫೂರ್ತಿ’ಯನ್ನು ನಿಮ್ಮ ಕೈಗಿಡುವ ಪ್ರಾಮಾಣಿಕ ಪ್ರಯತ್ನ ನಮ್ಮದು. ಇಷ್ಟೇ ಅಲ್ಲದೆ ನುರಿತ ತಜ್ಞರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ **Key-Answer**, ಪ್ರಚಲಿತ ವಿದ್ಯಾಮಾನಗಳು, ವ್ಯಕ್ತಿತ್ವ ವಿಕಾಸನದ ಲೇಖನಗಳು, ದೇಶ-ವಿದೇಶ ಪರಿಚಯ ಹಾಗೂ ಸ್ವಯಂ ಉದ್ಯೋಗ ಕಂಡುಕೊಳ್ಳುವ ಮಾರ್ಗದರ್ಶನವನ್ನೂ ಕೂಡ ‘ಉದ್ಯೋಗ ಸ್ಫೂರ್ತಿ’ ಮಾಡುತ್ತಿದೆ! ಈ ಪ್ರಯತ್ನಗಳನ್ನು ಮಾಡುತ್ತಿರುವ ಉದ್ದೇಶ ನಮ್ಮ ರಾಜ್ಯದ ಗ್ರಾಮೀಣ ಪ್ರತಿಭೆಗಳಿಗೆ ಅವರ ಯೋಗ್ಯತೆಗೆ ತಕ್ಕಂತೆ ಸೂಕ್ತ ಉದ್ಯೋಗ ಸಿಗುವಂತಾಗಲಿ ಎಂಬುದಷ್ಟೇ...

ಆದ್ದರಿಂದ ನೀವು, ನಿಮ್ಮ ಮಕ್ಕಳು, ಸ್ನೇಹಿತರು, ಬಂಧು-ಬಾಂಧವರು ಈ ಕೂಡಲೇ ‘ಉದ್ಯೋಗ ಸ್ಫೂರ್ತಿ’ಗೆ ಚಂದಾದಾರರಾಗಿ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೆ ತರಿಸಿಕೊಳ್ಳಿ. ಚಂದಾದಾರರಾಗುವವರಿಗೆ ಆಕರ್ಷಕ **Discount**ಅನ್ನು ಕೊಡುತ್ತಿದ್ದೇವೆ. ನೀವು ಇದರ ಸದುಪಯೋಗಪಡಿಸಿಕೊಳ್ಳುವುದರ ಜೊತೆಗೆ ಇತರರಿಗೂ ತಿಳಿಸಿ ಅಥವಾ ಹೊಸ ವರ್ಷದ ಕೊಡುಗೆಯಾಗಿ ನಿಮ್ಮ ಆಪ್ತರಿಗೆ ‘ಉದ್ಯೋಗ ಸ್ಫೂರ್ತಿ’ಯ ಚಂದಾದಾರತ್ವವನ್ನು ಕೊಡುಗೆಯಾಗಿ ಕೊಡಬಹುದಲ್ವೆ! ಇದರಿಂದ ಅವರಿಗೆ ಒಂದೊಳ್ಳೆ ಕೆಲಸ ಸಿಕ್ಕರೆ ಅವರ ಬದುಕು ಉಜ್ವಲವಾಗಿ, ಅವರು ನಿಮ್ಮನ್ನು ಶಾಶ್ವತವಾಗಿ ನೆನೆಯುವುದರಲ್ಲಿ ಸಂಶಯವಿಲ್ಲ! ಕೂಡಲೇ ತ್ವರೆ ಮಾಡಿರಿ....

### ಚಂದಾ ವಿವರಗಳು

| ಕ್ರ.ಸಂ. | ಅವಧಿ | ಬೆಲೆ | ಡಿಸ್ಕೌಂಟ್ ಬೆಲೆ |
|---|---|---|---|
| 1. | ಒಂದು ವರ್ಷಕ್ಕೆ | 240 = 00 ರೂ. | 220 = 00 ರೂ. |
| 2. | ಎರಡು ವರ್ಷಕ್ಕೆ | 480 = 00 ರೂ. | 410 = 00 ರೂ. |
| 3. | ಮೂರು ವರ್ಷಕ್ಕೆ | 720 = 00 ರೂ. | 570 = 00 ರೂ. |

**ವಿಶೇಷ ಸೂಚನೆ: ಡಿ.ಡಿ./ಚೆಕ್‌ಅನ್ನು “ಉದ್ಯೋಗ ಸ್ಫೂರ್ತಿ”ಯ ಮಾತೃ ಸಂಸ್ಥೆಯಾದ “ಪೊಲೀಸ್ ನ್ಯೂಸ್” ಹೆಸರಿಗೆ ತೆಗೆಯಬೇಕು.**

**ಡಿ.ಡಿ./ಚೆಕ್‌ಅನ್ನು ಕಳುಹಿಸಬೇಕಾದ ವಿಳಾಸ:**

ಸಂಪಾದಕರು
‘ಉದ್ಯೋಗ ಸ್ಫೂರ್ತಿ’ ಪಾಕ್ಷಿಕ ಪತ್ರಿಕೆ
ನಂ. 165, 8ನೇ ಮುಖ್ಯರಸ್ತೆ,
ಬಿ.ಇ.ಎಂ.ಎಲ್. ಲೇಔಟ್, ಬಸವೇಶ್ವರನಗರ,
ಬೆಂಗಳೂರು-79
☎ 080-23588510, 8971302735,
8971302717


Vol. 8 No. 1 Edited, Printed, Published & Owned by M. RAHUL, Printed at SHRI OMKAR ENTERPRISES # 4/1, Mahimappa Industrial Estate, 100ft Road, Jalahalli Cross, Chokkasandra, BANGALORE-560 057. Published at # 4/1, Mahimappa Industrial Estate, 100ft Road, Jalahalli Cross, Chokkasandra, BANGALORE-560 057. ☎ 080-23588510, 8971302735, 8971302717
Email: udyogaspoorthi@gmail.com